
ಮೇ - ೨೦೦೦

ಕಲ್ಯಾಣ ಕಿರಣ

ಶ್ರೀ

ಬೆಲೆ : ೫-೦೦ ರೂ.



★ ಕಲ್ಯಾಣ ಕಿರಣ ★

ಸಂಪುಟ ೩೧	ಬಸವ ಶಕೆ ೮೬೭	ಆಜೀವ ಸದಸ್ಯತ್ವ ೫೦೦ ರೂ
ಸಂಚಿಕೆ ೫	ಮೇ-೨೦೦೦	ವಾರ್ಷಿಕ ಚಂದಾ ೫೦ ರೂ

ಕಿರಣಗನ್ನಡಿ

ಬರಲಿರುವ ಶರಣರ ಜಯಂತಿಗಳು-ಸಂಸ್ಮರಣೆ

ಮಡಿವಾಳ ಮಾಚಿದೇವ ಜಯಂತಿ	ಮೇ ೧
ಬಸವ ಜಯಂತಿ	ಮೇ ೬
ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೋತ್ಸವ	ಜೂನ್ ೩೦

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

-ಮಾತಾಜಿ

ಮತ್ತೊಬ್ಬರನ್ನು ಟೀಕಿಸಲು ತಾತ್ವಿಕ ಅರ್ಹತೆ ?

ನಾನೊಮ್ಮೆ ಒಂದು ದೃಷ್ಟಾಂತ ಓದಿದ್ದೆ. ಓರ್ವ ಪ್ರಯಾಣಿಕನು ಒಂದು ನಾಲೆಯನ್ನು ದಾಟುವ ಸನ್ನಿವೇಶ ಬರುತ್ತದೆ. ಅಲ್ಲಿ ಏನೂ ಸಾಧನ ಸಲಕರಣೆ ಇರುವುದಿಲ್ಲ. ಏನು ಮಾಡುವುದೆಂದು ಆಲೋಚಿಸುತ್ತಿರುವಾಗ ಅಲ್ಲಿ ಒಂದು ದುರ್ಗಾದೇವಿಯ ವಿಗ್ರಹ ಬಿದ್ದಿರುವುದನ್ನು ಕಾಣುತ್ತಾನೆ. ಅಂತೂ ಹೇಗೋ ಮಾಡಿ ಆ ವಿಗ್ರಹವನ್ನು ಮುಖ ಅಡಿಯಾಗಿ ನಾಲೆಯ ಮೇಲೆ ಹಾಕಿ, ದಾಟಿ ತನ್ನ ಪಾಡಿಗೆ ತಾನು ಹೊರಟುಹೋಗುತ್ತಾನೆ. ಮತ್ತೊಂದು ದಿನ ಇನ್ನೋರ್ವ ಪ್ರಯಾಣಿಕ ನೋಡುತ್ತಾನೆ. ಮನಸ್ಸಿಗೆ ಬಹಳ ಕೆಟ್ಟದ್ದೆನಿಸಿ ಆ ದೇವಿಯ ವಿಗ್ರಹವನ್ನು ಎತ್ತಿ, ಒಂದು ಕಲ್ಲಿಗೆ ಒರಗಿಸಿ ನಿಲ್ಲಿಸುತ್ತಾನೆ. ಆಗ ದೇವಿ, ''ನೀನು ನನಗೆ ಗುಡಿ ಕಟ್ಟಲಿಲ್ಲ ; ಬರೀ ಎತ್ತಿ ನಿಲ್ಲಿಸಿದೆ'' ಎಂದು ಕ್ರುದ್ಧಳಾಗಿ ಶಾಪ ಕೊಟ್ಟಳಂತೆ. ಕೆಲವೊಮ್ಮೆ ಕೆಲವು ಜನ ಮತ್ತು ಸಮಾಜ ಹೀಗೇ ವರ್ತಿಸುತ್ತದೆ. ಮಹಾತ್ಮಾ ಗಾಂಧೀಜಿಯವರು ಕೊಳಚೆ ಪ್ರದೇಶದವರಿಗೆ ಸ್ವಚ್ಛತೆಯ ಪಾಠವನ್ನು ಕಲಿಸಬೇಕು ಎಂದು ಕಸಬರಿಕೆ-ಬುಟ್ಟಿ ತೆಗೆದುಕೊಂಡು ಹೋಗಿ ದಿನಾಲೂ ಸ್ವಚ್ಛ ಮಾಡುತ್ತಿದ್ದರಂತೆ. ಒಂದು ದಿನ ಬೇರಾವುದೋ ಕಾರ್ಯಕ್ರಮದ ನಿಮಿತ್ತ ಹೋಗಲಿಲ್ಲವಂತೆ. ಮರು ದಿನ ಹೋದಾಗ ನಿನ್ನೆ ದಿನ ಏಕೆ ಬರಲಿಲ್ಲ ? ಎಂದು ಆ ಕೊಳಗೇರಿಯ ನಿವಾಸಿಗಳು ಕೇಳಿದರಂತೆ. ಬಹುಶಃ ಗಾಂಧೀಜಿಯವರನ್ನು ನಗರ ಪಾಲಿಕೆಯ ಕೂಲಿಯಾಳು ಎಂದು ತಿಳಿದಿದ್ದಿರಬಹುದು. ಹೀಗೆ ಉಪಕಾರ ಮಾಡಿದವರಾರು, ಮಾಡುವವರಾರು ಅಪಕಾರ ಮಾಡುವವರಾರು ಎಂಬುದನ್ನು ತಿಳಿಯದಷ್ಟು ; ಸಮಾಜ ಸೇವಕರು ಯಾರು ಕೂಲಿಯಾಳುಗಳು ಯಾರು ಎಂಬುದನ್ನು ತಿಳಿಯದಷ್ಟು ಕೆಲವು ಜನರು ಮಂದಮತಿಗಳಾಗಿರುತ್ತಾರೆ. ಸಮಾಜವೆಂದರೆ ಹೀಗೆಯೇ ! ಎಲ್ಲರೂ ಒಂದೇ ಮಟ್ಟದ ತಿಳುವಳಿಕೆಯುಳ್ಳವರು ಎಂದು ಭಾವಿಸಲಾಗುವುದಿಲ್ಲ.

ದಾವಣಗೆರೆಯಲ್ಲಿ ಶರಣರ ಒಂದು ಸಂಸ್ಮರಣೋತ್ಸವ ಕಾರ್ಯಕ್ರಮವು ಜರುಗಿದಾಗ ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಒಂದು ಭಾಷಣದ ವಿವರವು ಕನ್ನಡ ಪ್ರಭ ದಲ್ಲಿ ಪ್ರಕಟಗೊಂಡಿದೆ. ಅದನ್ನು ಮುದ್ರಿಸಲಾಗಿದೆ. ಅದನ್ನು ಕುರಿತು ಈಗ ವಿಮರ್ಶಿಸುತ್ತಿದ್ದೇನೆ. ವಿಮರ್ಶಿಸುವ ಮುನ್ನ ಒಂದು ಮಾತು. ''ಕಲ್ಯಾಣ ಕಿರಣದಲ್ಲಿ ದಾವಣಗೆರೆ ಘಟನೆ ಕುರಿತಂತೆ ವಿವರ ಬರೆಯಲಾಗಿದೆ. ಬೇಕಾದರೆ ಇದರ ಹಿಂದೆ ಇದ್ದ ಚಿತ್ರದುರ್ಗ ಬೃಹನ್ಮಠದ ಸ್ವಾಮಿಗಳನ್ನು ಕುರಿತು ಪ್ರಸ್ತಾಪಿಸಿ ಬರೆಯಲಿ. ಬಸವ ಕೇಂದ್ರದ ಹೆಸರನ್ನೇಕೆ ತೆಗೆದುಕೊಳ್ಳಬೇಕು ?'' ಎಂದು ಹಾಸನದಲ್ಲಿ ಕೆಲವರು ಮಾತನಾಡಿದರಂತೆ. ಏಕೆಂದರೆ ಹಾಸನದಲ್ಲಿ ರಾಷ್ಟ್ರೀಯ ಬಸವ ದಳ ಮತ್ತು ಬಸವ ಕೇಂದ್ರದವರಲ್ಲಿ ಸಂಘರ್ಷವಿಲ್ಲ. ಪರಸ್ಪರ ಸಾಮರಸ್ಯವಿದ್ದು ಅವರ ಕಾರ್ಯಕ್ರಮಕ್ಕೆ ಇವರು, ಇವರ ಕಾರ್ಯಕ್ರಮಕ್ಕೆ ಅವರು ಹೋಗುತ್ತಾರಂತೆ. (ಅಂದ ಮೇಲೆ ಎರಡನ್ನು ಏಕೆ ಮಾಡಿಕೊಂಡರೋ ? ೧೯೯೩ರಲ್ಲಿ ರಾಷ್ಟ್ರೀಯ ಬಸವ ದಳ ಆರಂಭವಾಗಿ ಚೆನ್ನಾಗಿ ನಡೆಯುತ್ತಿತ್ತು. ಇದರಿಂದ ಕೆಲವರು ಸಿಡಿದು ಹೋಗಿ ಬಸವ ಕೇಂದ್ರ ಮಾಡಿದರು. ಸಾಮರಸ್ಯವಿದ್ದರೆ ಬೇರೊಂದು ಮಾಡುವ ಅಗತ್ಯವೇನಿತ್ತು ಎಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿಯುವುದಷ್ಟೆ.)

೨. ಬಸವ ಕೇಂದ್ರ, ಬಸವ ಬಳಗಗಳವರನ್ನು ಮಾತಾಜಿ ತರಲೇ ಕೇಂದ್ರ, ಜಗಳದ ಬಳಗ ಎಂದಿದ್ದಾರೆ. ಹೀಗನ್ನಬಹುದೇ ಎಂದು ಒಂದು ಊರಲ್ಲಿ ಆಕ್ಷೇಪ. ಆ ಊರಲ್ಲಿ ಒಂದು ಸಜ್ಜನರು, ಸಾತ್ವಿಕರೂ, ಧಾರ್ಮಿಕ ಆಸಕ್ತಿಯುಳ್ಳ ಜನರಿಂದ ಕೂಡಿದ ಬಸವ ಬಳಗ ಇದೆಯಂತೆ. ಅದಕ್ಕೇ ಅವರಿಗೆ

ವ್ಯಥೆಯಾಗಿದೆಯಂತೆ.

ಅದು ಸರಿ, ಎಂಥಾ ಅನಾಗರೀಕರೂ ನಾಚಿ ತಲೆತಗ್ಗಿಸುವಂತಹ ಕ್ರೂರ ವರ್ತನೆ, ದೌರ್ಜನ್ಯ ಮಾಡಲು ವಿಭೂತಿ ಧರಿಸಿ, ಕುಡಿದು ತೂರಾಡುತ್ತ ಬಂದು ತನ್ನ ಮೊಮ್ಮಗಳ ವಯಸ್ಸಿನ ಬಾಲಕಿಯನ್ನು ಕುರಿತು ''ನಿನ್ನ ಶೀಲ ಕೆಡಿಸಿದರೆ ಬುದ್ಧಿ ಬರುತ್ತೆ'' ಎಂಬ ಮಹಾನುಭಾವರು ಹೆಮ್ಮೆಯಿಂದ ತಾವು ಬಸವ ಬಳಗದವರು, ಬಸವ ಕೇಂದ್ರದವರು ಎಂದು ಗುರುತಿಸಿಕೊಳ್ಳುವಾಗ, ಅವರನ್ನು ವಿಮರ್ಶಿಸುವಾಗ ನಾವು ಬಸವಾ ಎಂಬ ಪವಿತ್ರನಾಮವನ್ನು, ಮಂತ್ರವನ್ನು ಬಾರಿಬಾರಿಗೆ ಬಳಸಿ ಅಗೌರವಗೊಳಿಸಬೇಕೆ ? ಅದಕ್ಕಾಗಿ ಪರ್ಯಾಯವಾಗಿ ಪದಗಳನ್ನು (''ಕೂಡಲಸಂಗಮದೇವ'' ಎಂಬ ಸ್ಥಾವರಲಿಂಗ ಸೂಚಕ ಪದದ ಬದಲಿಗೆ 'ಲಿಂಗದೇವ' ಎಂಬ ಸೃಷ್ಟಿಕರ್ತ ಸೂಚಕ ಪದವನ್ನು ಪ್ರತಿಷ್ಠಾಪಿಸಿದಂತೆ) ಬರೀ ಕುಕೃತ್ಯಗಳಲ್ಲಿ ತೊಡಗಿರುವ ಕೇಂದ್ರ ಬಳಗಕ್ಕೆ ತರಲೇ ಕೇಂದ್ರ, ಜಗಳದ ಬಳಗ ಎಂದು ಕರೆಯಬೇಕಾಯಿತು. ಇದು ಈ ಸಂಸ್ಥೆಗಳನ್ನು ನಿಂದಿಸುವ ದೃಷ್ಟಿಯಿಂದಲ್ಲ ಪರಮ ಪವಿತ್ರ 'ಬಸವ' ನಾಮದ ಪಾವಿತ್ರ್ಯವನ್ನು ಕಾಪಾಡಲು.

ಈ ಪರ್ಯಾಯ ಪದಗಳನ್ನು ಬಳಸಿರುವುದು ದಾವಣಗೆರೆಯಲ್ಲಿ ದೌರ್ಜನ್ಯ ಮಾಡಿದ ಸಂಘಟನೆಗಳಿಗೇ ವಿನಾ ಇನ್ನಿತರ ಊರಿನ, ಇದೇ ಹೆಸರಿನವಿದ್ದರೂ ಇನ್ನಿತರ ಸಂಘಟನೆಗಳಿಗಲ್ಲ. ಅಂದಾಗ ತಪ್ಪು ಮಾಡಿದವರನ್ನು ವಿಮರ್ಶಿಸಿದಾಗ ತಪ್ಪು ಮಾಡದ ಅದೇ ಹೆಸರಿನ ಸಂಸ್ಥೆಗಳಿಗೆ ಏಕೆ ನೋವಾಗಬೇಕು ? ಕೊಟ್ರಬಸಪ್ಪ ಎಂಬ ವ್ಯಕ್ತಿ ತಪ್ಪು ಮಾಡಿದ್ದಾರೆ ಎಂದಾಗ ಆ ಹೆಸರಿನ ಇನ್ನೂ ಅನೇಕ ವ್ಯಕ್ತಿಗಳು ಆ ಊರಿನಲ್ಲಿದ್ದರೂ ತಪ್ಪಿತಸ್ಥರಾಗರಷ್ಟೆ.

೩. 'ನಮ್ಮ ಸ್ವಾಮಿಗಳನ್ನು ಹೀಗೆ ದೂಷಿಸಬಹುದೆ ?' ಎಂದು. ಒಂದು ಊರಿನಲ್ಲಿ ಓರ್ವರು ಪ್ರಶ್ನಿಸಿದಾಗ, ರಾಷ್ಟ್ರೀಯ ಬಸವ ದಳದವರು ''ದೂಷಿಸಲ್ಪಡುವಷ್ಟು ಕೆಟ್ಟ ಕೆಲಸವನ್ನು ನಿಮ್ಮ ಸ್ವಾಮಿಗಳೇಕೆ ಮಾಡಬೇಕಿತ್ತು ?' ಎಂದು ವಾಪಸ್ಸು ಉತ್ತರಿಸಿದರಂತೆ. ಅವರ ಪ್ರಶ್ನೆ ಕೇಳಿ ನನಗೆ ತುಂಬಾ ಸೋಜಿಗವೆನಿಸಿತು. ಆಡು ತಿಂದವರನ್ನು ಬಿಟ್ಟು ಹಪ್ಪಳ ತಿಂದವರನ್ನು ಮಾಂಸಾಹಾರಿ ಎಂದು ಕರೆದಂತೆ ಈ ಆಕ್ಷೇಪ ಇದೆ. ಅಲ್ಲ; ಕಾನೂನಿಗೆ ಸಂವಿಧಾನಕ್ಕೆ ವಿರುದ್ಧವಾದ ಕ್ರೂರ ದೌರ್ಜನ್ಯ ಮಾಡಿದ ಸ್ವಾಮಿಗಳನ್ನು ತಮ್ಮ ಗುರುಗಳೆಂದು ಕರೆದುಕೊಳ್ಳುವ ಈ ಮತಿವಂತರು ಅವರು ಮಾಡಿದ ಕೆಟ್ಟಕೆಲಸವೇನು ಎಂಬುದನ್ನು ಕೇವಲ ಬರಹದ ಮೂಲಕ ಪ್ರಾಜ್ಞ ಜನರ ಮುಂದೆ ತೆರೆದಿಟ್ಟ ನಮ್ಮ ಸಜ್ಜನಿಕೆಯನ್ನು ಅರಿಯದೆ ಇರುವುದು ದುರ್ದೈವದ ಸಂಗತಿ. ನಿತ್ಯಾನಿತ್ಯ ವಿವೇಕ ಪ್ರಜ್ಞೆ, ಪಾಪ-ಪುಣ್ಯಗಳ ಅರಿವು ಇಲ್ಲದವರಷ್ಟೆ ಅವರ ಗುರುಗಳು ಏನೇ ಮಾಡಿದರೂ ಅದನ್ನು ಸರಿ ಎಂದು ಒಪ್ಪಿಕೊಳ್ಳುವುದು.

೪. ''ಯಾರೋ ಕೆಲವರು ಕೆಟ್ಟ ಕೆಲಸ ಮಾಡಿದ್ದಿರಬಹುದು. ಅದಕ್ಕೆ ಚಿತ್ರದುರ್ಗದ ಬೃಹನ್ಮಠಾಧೀಶರು ಬೆಂಬಲವಾಗಿದ್ದಾರೆಂದು ಬರೆಯಬಹುದೇ ?'' ಎಂದು ಕೆಲವರ ಆಕ್ಷೇಪ. ಈ ಭಕ್ತವೃಂದವು ಸಜ್ಜನರು, ಸದಸದ್ ವಿವೇಕ ಪ್ರಜ್ಞೆಯುಳ್ಳವರು ಆಗಿರಬೇಕು. ಅದಕ್ಕೆ ಅವರಿಗೆ ದೌರ್ಜನ್ಯವು ಪಾಪಕರವೆಂದು, ಅಸಹ್ಯವೆಂದು ಕಂಡಿರಬೇಕು. ಇಂಥ ಕೆಲಸ ಮಾಡಿಸಿದ ಆರೋಪ ತಮ್ಮ ಗುರುಗಳಿಗ ಬರಬಾರದು ಎಂದು ಅವರ ಕಳಕಳಿ ಇರಬಹುದು. ಆದರೆ ಚಿತ್ರದುರ್ಗ ಬೃಹನ್ಮಠದವರು ಹಾಗೆ ಭಾವಿಸಿಲ್ಲ ; ಕೊಂಡೆಯ ಮಂಚಣ್ಣ, ನಾರಾಯಣ ಕ್ರಮಿತರು ಹೇಗೆ ಶರಣರನ್ನು ವಿರೋಧಿಸುವುದು ಶೌರ್ಯದ ಕೆಲಸ, ಧರ್ಮಯುದ್ಧ ಎಂದು (ವೈದಿಕ ಧರ್ಮದ ಚೌಕಟ್ಟಿನಲ್ಲಿ) ಭಾವಿಸಿದ್ದರೋ ಅದೇ ರೀತಿ ಬೃಹನ್ಮಠದವರು, ತರಲೆ ಕೇಂದ್ರ, ಜಗಳದ ಬಳಗದವರು ಕಾನೂನಿನ ಚೌಕಟ್ಟನ್ನು ಮೀರಿದ್ದರೂ ಅದು ಬಹಳ ಶೂರತ್ವದ (ಪ್ರವಚನ ಮಾಡುವ ನಿಸ್ಸಹಾಯಕ ಮಹಿಳೆಯರ ಮೇಲೆ ದೌರ್ಜನ್ಯ ಮಾಡಿದ ಹೇಡಿತನದ ಕಾರ್ಯ ಎಂಬ ತಿಳುವಳಿಕೆಯೂ ಇಲ್ಲದೆ) ಕೆಲಸವೆಂದೇ

ಭಾವಿಸಿ ಇದನ್ನು ತಾವೇ ಮಾಡಿರುವುದೆಂದು ಹೆಮ್ಮೆಯಿಂದ ಬೀಗುತ್ತಿದ್ದಾರೆ. ಆದ್ದರಿಂದ ಸೂಕ್ಷ್ಮಮತಿಗಳಾದ ಸದ್ಭಕ್ತರು ಸಂಕೋಚದಿಂದ ಮುಚ್ಚಿಟ್ಟುಕೊಳ್ಳುವ ಅಗತ್ಯವಿಲ್ಲ.

ವಚನಾಂಕಿತ ಬದಲಾವಣೆ ಅಸಹನೀಯ : ಸಾಣೇಹಳ್ಳಿ ಶ್ರೀ

ಕನ್ನಡ ಪ್ರಭ ವಾರ್ತೆ, ದಾವಣಗೆರೆ ಏ.೧೧ : ಹನ್ನೆರಡನೆ ಶತಮಾನದ ಕ್ರಾಂತಿಕಾರಿ ಬಸವಣ್ಣನವರ ವಚನಗಳ ಅಂಕಿತ ಬದಲಾವಣೆ ಮಾಡಿರುವುದನ್ನು ಯಾರೂ ಸಹಿಸಬಾರದು ಎಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಇಲ್ಲಿನ ಶ್ರೀ ಅಭಿನವ ರೇಣುಕ ಮಂದಿರದಲ್ಲಿ ನಡೆದ ಶರಣರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಸೋಮವಾರ ಮಾತನಾಡಿದರು.

ಬಸವಣ್ಣನವರ ಅಂಕಿತವನ್ನು ಬದಲಿಸಿ ಬೇರೆ ಹೆಸರಿನಲ್ಲಿ ಬರೆಯುವುದು ಒಪ್ಪಿಕೊಳ್ಳಲು ಸಾಧ್ಯವಾಗದ ಮಾತು. ಇಂತಹ ಕಾರ್ಯಕಗಳು ನಡೆದಾಗ ಸಮಾಜ ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಬೇಕು ಎಂದು ಅವರು ನುಡಿದರು.

ಮಾತೆ ಮಹಾದೇವಿ ಅವರ ಅನುಯಾಯಿಗಳು ಪ್ರವಚನದಲ್ಲಿ ಬಸವಣ್ಣನವರ ಅಂಕಿತವನ್ನು ಬದಲಿಸಿ ಪ್ರಯೋಗ ಮಾಡುತ್ತಿದ್ದಾರೆ. ಮಾತೆ ಮಹಾದೇವಿ ಅವರ ಕನಸಿನಲ್ಲಿ ಬಸವಣ್ಣನವರೆ ಬಂದು ಅಂಕಿತ ಬದಲಿಸುವಂತೆ ಸೂಚಿಸುವುದು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು.

ಶರಣರ ತತ್ವ ಪ್ರಚಾರದ ಹೆಸರಿನಲ್ಲಿ ಅದಕ್ಕೆ ಮಸಿ ಬಳಿಯುವ ಪ್ರಯತ್ನಗಳು ಸಾಗಿವೆ ಎಂದು ಅವರು ಪರೋಕ್ಷವಾಗಿ ನುಡಿದರು.

ಇತ್ತೀಚಿನ ದಿನಗಳಲ್ಲಿ ಮನುಷ್ಯ ನಾಗರಿಕನಾಗಿರುವ ಜೊತೆಗೆ ಸಂಸ್ಕೃತಿಹೀನ ಆಗುತ್ತಿದ್ದಾನೆ. ಸಾಂಸ್ಕೃತಿಕ ಅಧಃಪತನದ ಇಂದಿನ ಸನ್ನಿವೇಶದಲ್ಲಿ ಸಂಸ್ಕೃತಿವಂತರಾಗುವ ಅವಶ್ಯಕತೆಯಿದೆ ಎಂದು ಅವರು ಸಲಹೆ ಮಾಡಿದರು.

ಬದುಕಿಯೂ ಸತ್ತವರಂತೆ ಆಗದೆ ಸತ್ತರೂ ಕೂಡ ಬದುಕಿರುವ ವರ್ಗಕ್ಕೆ ಸೇರಬೇಕು, ಆ ಮೂಲಕ ಜೀವನದ ಸಾರ್ಥಕ್ಯ ಕಂಡುಕೊಳ್ಳಬೇಕು ಎಂದು ಅವರು ಹಿತ ನುಡಿದರು.

ಮೂರ್ತಿಪೂಜೆಗೆ ಬಸವಣ್ಣ ಎಂದೂ ಅವಕಾಶ ನೀಡಲಿಲ್ಲ. ಆದರೆ ಬಸವಣ್ಣನವರನ್ನೇ ಮೂರ್ತಿಯಾಗಿಸಿ ಪೂಜೆ ಮಾಡುವ ಕೆಲಸ ನಡೆಸುತ್ತಿರುವುದು ದುರ್ದೈವದ ಸಂಗತಿ, ಇದನ್ನು ಪ್ರತಿಭಟಿಸಬೇಕು ಎಂದು ಸ್ವಾಮೀಜಿ ಕರೆ ಕೊಟ್ಟರು.

- ಕನ್ನಡ ಪ್ರಭ ೧೨-೪-೨೦೦೦

ಈ ಮುನ್ನುಡಿಯೊಡನೆ ನಾನೀಗ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಭಾಷಣವನ್ನು ವಿಮರ್ಶಿಸುತ್ತೇನೆ. ಕಲ್ಯಾಣ ಕಿರಣದಲ್ಲಿ ಮೊದಲು ತಾತ್ವಿಕ ವಿಷಯಗಳಿರುತ್ತಿದ್ದವು ; ಈಗ ಬರೀ ಸ್ವಾಮಿಗಳ ಟೀಕೆ ಇರುತ್ತದೆ ಎಂದು ಒಂದೂರಿನ ಬಸವ ಕೇಂದ್ರದ ವ್ಯಕ್ತಿಯು ಹೇಳಿದನಂತೆ. ನಾವು ಯಾರನ್ನೂ ಟೀಕಿಸುವುದಿಲ್ಲ. ನಿಂದಿಸುವುದಿಲ್ಲ ; ವಿಮರ್ಶಿಸುತ್ತೇವೆ ಮಾತ್ರ. ಟೀಕೆ, ನಿಂದೆ ವೈಯಕ್ತಿಕ ದ್ವೇಷದಿಂದ ಕೂಡಿರುತ್ತದೆ. ವಿಮರ್ಶೆ ವಸ್ತುನಿಷ್ಠವಾಗಿ, ತಾತ್ವಿಕವಾಗಿ ಇರುತ್ತದೆ ಮತ್ತು ನಾವು ಯಾರನ್ನು ತಡವಲು ಹೋಗುವುದಿಲ್ಲ ; ಅವರು ತಡವಿದಾಗ ಮಾತ್ರ ನಾವು ಉತ್ತರಿಸುತ್ತೇವೆ. ಅಂದರೆ ಕಾರ್ಗಿಲ್‌ನಲ್ಲಿ ಪಾಕಿಸ್ತಾನ ಮಾಡಿದಂತೆ ಆಕ್ರಮಣವಲ್ಲ ; ನಮ್ಮದು ಆಕ್ರಮಣ ಮಾಡಿದ ಪಾಕಿಸ್ತಾನಕ್ಕೆ

ಭಾರತವು ಉತ್ತರ ಕೊಟ್ಟಂತೆ ಕೇವಲ ಆತ್ಮರಕ್ಷಣೆ ಮಾತ್ರ. ಸದಾಕಾಲ ದಿನನಿತ್ಯವೂ ದೊಡ್ಡ ದೊಡ್ಡ ದಿನ ಪತ್ರಿಕೆಗಳಲ್ಲಿ ಸುಳ್ಳು ಸುದ್ದಿಗಳನ್ನು ಹುಟ್ಟಿಸಿ, ಜನಗಳನ್ನು ದಾರಿ ತಪ್ಪಿಸಬೇಕೆಂದು, ಪ್ರವಚನಕ್ಕೆ ತೊಂದರೆ ಕೊಡಬೇಕೆಂದು ಬರಿದೇ ಅಪಪ್ರಚಾರ ಮಾಡುತ್ತಲಿರುವ ಬೃಹನ್ಮಠದವರ ಕೆಲಸ ಆಕ್ಷೇಪಾರ್ಹವೋ ಸೀಮಿತವಾದ ವ್ಯಾಪ್ತಿಯುಳ್ಳ ನಮ್ಮ ಸಂಸ್ಥೆಯ ಪತ್ರಿಕೆ ಕಲ್ಯಾಣ ಕಿರಣದ ಮೂಲಕ ಏನು ನಡೆಯಿತು ಎಂದು ನಾವು ನಮ್ಮ ಪತ್ರಿಕೆಯ ಓದುಗರಿಗೆ, ಅಭಿಮನಿಗಳಿಗೆ ತಿಳಿಯಪಡಿಸುವುದು ಆಕ್ಷೇಪಾರ್ಹವೋ ? ಇದೇ ರೀತಿಯ ಧೋರಣೆ, ಚಿಂತನೆ ಮುಂದುವರಿದರೆ ಆಗ ಶ್ರೀಮಂತರಾದ ರಾಜಕೀಯ ಪ್ರಭಾವವುಳ್ಳ ಮಠಾಧೀಶರು ಪಾಪ ಕರ್ಮಗಳನ್ನು ಮಾಡಿದರೆ ಅವೆಲ್ಲವೂ ಪಾವನ ಕೆಲಸಗಳೆಂದು ಸತ್ಯ-ಸದಾಚಾರ-ಸಜ್ಜನಿಕೆಯುಳ್ಳ ನಮ್ಮಂತಹವರು ವರ್ಷದ ೧೨ ತಿಂಗಳು, ದಿನದ ೨೪ ಗಂಟೆ ಪರಮಪವಿತ್ರವಾದ ಧಾರ್ಮಿಕ ಕೆಲಸಗಳನ್ನೇ ಮಾಡಿದರೂ ಅವು ಪಾಪ ಕಾರ್ಯಗಳೆಂದು ಜನ ಭಾವಿಸುವ ಸನ್ನಿವೇಶ ಒದಗೀತು. ಏಕೆಂದರೆ ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ ತಾನೆ ?

ಈ ಹಿನ್ನೆಲೆಯಲ್ಲಿ ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಟೀಕೆಯನ್ನು ವಿಮರ್ಶಿಸುತ್ತೇನೆ.

೧. ಬಸವಣ್ಣನವರ ಅಂಕಿತವನ್ನು ಬದಲಿಸಿ ಬೇರೆ ಹೆಸರಿನಲ್ಲಿ ಬರೆಯುವುದು ಒಪ್ಪಿಕೊಳ್ಳಲು ಸಾಧ್ಯವಾಗದ ಮಾತು. ಇಂತಹ ಕಾರ್ಯಗಳು ನಡೆದಾಗ ಸೂಕ್ತವಾಗಿ ಪ್ರತಿಕ್ರಿಯಿಸಬೇಕು.
೨. ಮಾತೆ ಮಹಾದೇವಿ ಅವರ ಅನುಯಾಯಿಗಳು ಪ್ರವಚನದಲ್ಲಿ ಬಸವಣ್ಣನವರ ಅಂಕಿತವನ್ನು ಬದಲಿಸಿ ಪ್ರಯೋಗ ಮಾಡುತ್ತಿದ್ದಾರೆ.
೩. ಮಾತೆ ಮಹಾದೇವಿ ಅವರ ಕನಸಿನಲ್ಲಿ ಬಸವಣ್ಣನವರು ಬಂದು ಅಂಕಿತ ಬದಲಿಸುವಂತೆ ಸೂಚಿಸುವುದು ಸಾಧ್ಯವಿಲ್ಲ.
೪. ಶರಣರ ತತ್ತ್ವ ಪ್ರಚಾರದ ಹೆಸರಿನಲ್ಲಿ ಅದಕ್ಕೆ ಮಸಿ ಬಳಿಯುವ ಪ್ರಯತ್ನಗಳು ಸಾಗಿವೆ.
೫. ಮೂರ್ತಿ ಪೂಜೆಗೆ ಬಸವಣ್ಣ ಎಂದೂ ಅವಕಾಶ ನೀಡಲಿಲ್ಲ. ಆದರೆ ಬಸವಣ್ಣನವರನ್ನೇ ಮೂರ್ತಿಯಾಗಿಸಿ, ಪೂಜೆ ಮಾಡುವ ಕೆಲಸ ನಡೆಯುತ್ತಿರುವುದು ದುರ್ದೈವದ ಸಂಗತಿ, ಇದನ್ನು ಪ್ರತಿಭಟಿಸಬೇಕು.

ಪೂಜ್ಯ ಶ್ರೀಗಳ ಟೀಕೆಯನ್ನು ವಿಮರ್ಶಿಸುವ ಮೊದಲು ಅವರಿಗೆ ಧರ್ಮಗುರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ವಚನ ಸಾಹಿತ್ಯದ ಬಗ್ಗೆ ಮಾತನಾಡಲು ನೈತಿಕ ಮತ್ತು ನೈತಿಕ ಹಕ್ಕಿದೆಯೆ ಎಂಬ ಪ್ರಶ್ನೆಯನ್ನು ಮೊದಲು ಕೇಳಬಯಸುತ್ತೇನೆ.

೧. ಅಂಗದ ಮೇಲೆ ಇಷ್ಟಲಿಂಗವಿದ್ದವರು ಎಲ್ಲರೂ ಸಮಾನರು ; ದೀಕ್ಷಾನಂತರ ಪೂರ್ವದ ಜಾತಿ-ಗುಂಪುಗಳನ್ನು ಸ್ಮರಿಸಿಕೊಳ್ಳಬಾರದು ಎಂಬುದೇ ಬಸವಾದಿ ಪ್ರಮಥರ ಮೂಲ ಸಿದ್ಧಾಂತ. ಹೀಗಿರುವಾಗ ಸಾಧು ಲಿಂಗಾಯತ ಎಂಬ ಪಂಗಡವನ್ನು ಪ್ರತ್ಯೇಕಿಸಿ, ಉಪಜಾತಿಯ ಸಂಘಟನೆ ಮಾಡಿ, ರಾಜಕೀಯವಾಗಿ ಸಹಿತ ಸಾಧು-ಸಾಧುಯೇತರ ಎಂಬ ತೀವ್ರ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿರುವುದು ಬಸವಾದಿ ಪ್ರಮಥರ ತತ್ತ್ವಕ್ಕೆ ಸರಿ ಬರುವ ವಿಚಾರವೆ ?

ನಮಗೆ ಗೊತ್ತಿದೆ, ಕೆಲವಾರು ದಶಕಗಳ ಹಿಂದೆ ಲಿಂಗಾಯತರಲ್ಲಿ ತಾವು ಮೇಲ್ಜಾತಿಯವರೆಂದು ಬೀಗುತ್ತಿದ್ದ ಅಯ್ಯನವರು, ಬಣಜಿಗರು, ಪಂಚಾಚಾರದವರು ಕೃಷಿ ಕಾಯಕ ಜೀವಿಗಳಾದ ಸಾಧು ಲಿಂಗಾಯತರನ್ನು ನಿಕೃಷ್ಟವಾಗಿ ಕಾಣುತ್ತಲಿದ್ದುದರಿಂದ ಸಿರಿಗೆರೆ ಮಠದವರು ಸಾಧು ಲಿಂಗಾಯತರಲ್ಲಿ ಸ್ವಾಭಿಮಾನ ಮೂಡಿಸಲು ಜಾತಿ ಸಂಘಟನೆ ಮಾಡಿದರು. ಆದರೆ ಈಗ ಅದು ಅತಿರೇಕಕ್ಕೆ ಹೋಗಿ

ನಿಂತಿರುವುದನ್ನು ಎಲ್ಲರೂ ಕಾಣುತ್ತಿದ್ದಾರೆ, ಅನುಭವಿಸುತ್ತಿದ್ದಾರೆ. ಪೂಜ್ಯ ಲಿಂಗೈಕ್ಯ ಲಿಂಗಾನಂದ ಮಹಾಸ್ವಾಮಿಗಳು ಹುಟ್ಟಿನಿಂದ ಪಂಚಮಸಾಲೆಯವರು. ಲಿಂಗಾಯತರಲ್ಲಿ ಆರ್ಥಿಕ ದೃಷ್ಟಿ, ಸಾಮಾಜಿಕ ದೃಷ್ಟಿಯಿಂದ ಉತ್ತರ ಕರ್ನಾಟಕದಲ್ಲಿ ಪಂಚಮಸಾಲೆಯವರು ಬಲಿಷ್ಠರು. ಒಂದು ದಿನ ಪಂಚಮಸಾಲೆ ಮುಖಂಡರು ಕೆಲವರು ಬಂದು ಸಾಧು-ವೀರಶೈವರಂತೆ ಪಂಚಮಸಾಲೆ ಜನಾಂಗಕ್ಕೆ ಒಂದು ಮಠ-ಪೀಠ ಮಾಡೋಣ. ತಾವೇ ಅದರ ಪೀಠಾಧೀಶರಾಗಬೇಕು ಎಂದು ವಿನಂತಿಸಿದರು. ಆಗ ಪೂಜ್ಯ ಲಿಂಗಾನಂದ ಸ್ವಾಮಿಗಳು ಹೇಳಿದರು, ''ಇದು ಬಸವ ಧರ್ಮಕ್ಕೆ ಹೊರತಾದ ಸಂಗತಿ. ಎಲ್ಲ ಜಾತಿಮತಕುಲ ಕಸುಬುಗಳವರನ್ನು ಬಸವಣ್ಣನವರು ಧರ್ಮ ಸಂಸ್ಕಾರದ ಮೂಲಕ ಒಂದು ಮಾಡಿದರು ಅಯ್ಯೋರು ಜಾತಿ ಪ್ರಜ್ಞೆಯಿಂದ ವರ್ತಿಸಿದರು ಎಂದು ಪ್ರತಿಯಾಗಿ ನಾವು ಅಂಥ ಕೆಲಸ ಮಾಡಬಾರದು. ಎಲ್ಲ ಒಳಗುಂಪುಗಳನ್ನು ಮರೆಸಿ ಅಖಂಡ ಸಮಾಜವನ್ನು ಕಟ್ಟುವುದು ನಮ್ಮ ಗುರಿ'' ಎಂದು ಹೇಳಿ ಜಾತಿ ಪೀಠದ ಸ್ಥಾಪನೆಯನ್ನು ಪ್ರೋತ್ಸಾಹಿಸಲಿಲ್ಲ, ಮುಂದೆ ಪೂಜ್ಯರು ಆರೋಹಿಸಿದ್ದು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ; ಇದು ಜಾತಿ ಪೀಠವಲ್ಲ ಜ್ಯೋತಿ ಪೀಠ ; ಇಡೀ ಸಮಾಜಕ್ಕೆ ಸಂಬಂಧಿಸಿ ಕೆಲಸ ಮಾಡುತ್ತದೆ. ಯಾವ ಜಾತಿಯ ಗುಂಪನ್ನೂ ಸಂಘಟಿಸಲು ಬಯಸುವುದಿಲ್ಲ.

೨. ಲಿಂಗಾಯತ ಧರ್ಮ ಸ್ಥಾಪಕರು ಬಸವಣ್ಣನವರು ; ಅವರಿಂದಾಗಿ ಚತುರ್ವರ್ಣಗಳಲ್ಲಿ ಕೇವಲ ೩ ವರ್ಣಗಳವರಿಗೆ ಮಾತ್ರ ಸೀಮಿತವಾಗಿದ್ದ ಧರ್ಮ ಸಂಸ್ಕಾರವು ಶೂದ್ರರು, ಪಂಚಮರು (ಅಸ್ಪೃಶ್ಯರು) ಮತ್ತು ಸ್ತ್ರೀಯರಿಗೆ ಲಭ್ಯವಾಯಿತು. ಇದನ್ನು ಸಿರಿಗೆರೆಯ ಮಠದವರು ಮರೆತಿರುವುದಲ್ಲದೆ, ಅಲ್ಲಮಪ್ರಭುದೇವರಿಂದ ಹಿಡಿದು ಷಣ್ಮುಖ ಶಿವಯೋಗಿಗಳವರೆಗೆ ಎಲ್ಲ ಶರಣರು 'ಧರ್ಮಗುರು ಬಸವಣ್ಣ' ಎಂದು ಸಾರಿದ್ದರೂ, ಎಲ್ಲೆಲ್ಲೂ ತಮ್ಮ ಬರಹ-ಭಾಷಣಗಳಲ್ಲಿ ಬಸವಣ್ಣನವರು ಧರ್ಮಗುರು ಎನ್ನುವುದಿಲ್ಲ ಅಂದಾಗ ಇವರಿಗೆ ಧರ್ಮಗುರು ಬಸವಣ್ಣನವರ ವಚನಗಳ ಬಗ್ಗೆ ಚಿಂತೆಯಾದರೂ ಏಕೆ ?

೩. ಏಕದೇವೋಪಾಸನೆ ಬಸವೋಕ್ತ ಲಿಂಗಾಯತ ಧರ್ಮದ ಜೀವಾಳ. ಗುರು-ಬಸವಣ್ಣ, ಲಿಂಗ-ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ, ಜಂಗಮ-ಬಸವರೇ ಆದಿ ಪ್ರಮಥರಾದ ಪರಂಪರೆಯ ಶರಣರು ಮತ್ತು ಇಂದಿನ ಅರ್ಹ ಜಂಗಮರು ; ಈ ಮೂರನ್ನು ಹೊರತು ಪಡಿಸಿ ಲಿಂಗಾಯತ ಧರ್ಮೀಯರು ಬೇರೇನನ್ನು ಪೂಜಿಸಬಾರದು. ಆದರೆ ಸಿರಿಗೆರೆಯ ಮಠದ ಗುರುಗಳು ಎಲ್ಲ ದೇವದೇವತೆಗಳು ; ನವಗ್ರಹ ಪೂಜೆ ನಡೆದಲ್ಲಿಗೆ ಸಹಿತ ಹೋಗುವರೆಂದು ಕೇಳಿದ್ದೇವೆ. ಅವರ ಮಠದ ಭಕ್ತರೇ ಹೇಳುತ್ತಾರೆ. ಅಂದರೆ ಇವರಿಗೆ ತಮ್ಮ ಧರ್ಮದ ಮೂಲಭೂತ ತತ್ತ್ವ ಸಿದ್ಧಾಂತಗಳಲ್ಲಿ, ಏಕದೇವೋಪಾಸನೆ ಹೇಳುವ ಬಸವ ವಾಣಿಯಲ್ಲಿ ಶ್ರದ್ಧೆ-ನಿಷ್ಠೆ ಇಲ್ಲವೆಂದಾಗುವುದಿಲ್ಲವೆ ? ಅಂದಾಗ ಏಕದೇವೋಪಾಸನೆ ಕಲಿಸುವ 'ಲಿಂಗದೇವ' ಪದ ಇವರಿಗೆ ಕೂರಲಗು ನೆಟ್ಟಂತೆ ತೊಂದರೆ ಕೊಟ್ಟರೆ ಆಶ್ಚರ್ಯವೇನಿದೆ ?

೪. ಸಿರಿಗೆರೆ ಮಠದವರು 'ಶಿವ' ಎಂಬ ಒಂದು ಲಾಂಛನವನ್ನು ಬಳಸುತ್ತಾರೆ. ಸಾಧು-ಲಿಂಗಾಯತರ ಮನೆಯಲ್ಲಿ ಆ ಫೋಟೋ ಇರುವುದು. ವಿವಾಹದ ಆಮಂತ್ರಣ ಪತ್ರದಲ್ಲೂ ಹಾಕುವರು. ಈವರೆಗೂ ಸಿರಿಗೆರೆ ಮಠದವರನ್ನು ಸೇರಿಸಿಕೊಂಡು ಉಳಿದೆಲ್ಲ ಮಠಾಧೀಶರು ಲಿಂಗಾಯತ ಧರ್ಮಕ್ಕೊಂದು ಗಣಲಾಂಛನ, ಅದರಿಂದ ಕೂಡಿದ ಧ್ವಜ ಬೇಕು ಎಂದು ಸಹ ಚಿಂತಿಸಿಲ್ಲದಿರುವುದು ಆಶ್ಚರ್ಯಕರ. ಎಲ್ಲ ಧರ್ಮಗಳವರು ಯಾವಾಗಲೋ ಗುರುತಿಸಿಕೊಂಡಿದ್ದಾರೆ. ಸಿರಿಗೆರೆ ಮಠದವರು 'ಶಿವ' ಅಕ್ಷರ ಸಹಿತ ಲಾಂಛನವನ್ನು ಸಾಧು ಲಿಂಗಾಯತರಿಗೆ ಸಂಬಂಧಿಸಿ ಬಳಸಲು

ಸೂಚನೆ ನೀಡಿರಬಹುದು. ಹಾಗಾದರೆ ಉಳಿದ ಲಿಂಗಾಯತರ ಆಚಾರ-ವಿಚಾರಗಳ ಬಗ್ಗೆ ಇವರು ಚಿಂತಿಸುವುದು ಅಗತ್ಯವಿಲ್ಲವೆ? 'ಶಿವ' ಅಕ್ಷರ ಸಹಿತ ಲಾಂಛನದ ಅರ್ಥವೇನು ? ಇದು ಕೈಲಾಸಾಧಿಪತಿ 'ಶಿವ'ನನ್ನು ಸಂಕೇತಿಸುವುದೋ ಅಥವಾ ಲಿಂಗೈಕ್ಯರಾದ ಹಿಂದಿನ ಗುರುಗಳನ್ನು ಸಂಕೇತಿಸುವುದೋ ? ಗಿರಿಜಾಪತಿ, ಕೈಲಾಸಾಧಿಪತಿ ಶಿವನು ನಮಗೆ ನೇರವಾಗಿ ಸಂಬಂಧಿಸಿಲ್ಲ; ನಾವು ಪೂಜಿಸುವ ಇಷ್ಟಲಿಂಗವು ಆ ಶಿವನ ಕುರುಹಲ್ಲ ; ಬ್ರಹ್ಮಾಂಡ ವ್ಯಾಪಿ ಲಿಂಗದೇವನ ಕುರುಹು. ಲಿಂಗೈಕ್ಯ ಸ್ವಾಮೀಜಿಯವರ ಸಂಕೇತವೇ ಆಗಿದ್ದರೆ ಆಗ ಆ ಲಾಂಛನ ಅವರ ಶಿಷ್ಯರುಗಳಿಗೆ ಮಾತ್ರ ಪೂಜನೀಯವಾಗುತ್ತದೆ. ಇಡೀ ಲಿಂಗಾಯತ ಸಮಾಜಕ್ಕೆ ಅಲ್ಲ. ಧರ್ಮಪಿತ ಬಸವಣ್ಣನವರ ವಚನಾಂಕಿತ ಕೂಡಲ ಸಂಗಮದೇವದ ಬದಲಿಗೆ ಸೃಷ್ಟಿಕರ್ತ ಸೂಚಕ 'ಲಿಂಗದೇವ'ವನ್ನು ನಾನು ಇಟ್ಟಾಗ, ಅದು ನಮ್ಮ ಲಿಂಗೈಕ್ಯ ಗುರುಗಳಾದ ಲಿಂಗಾನಂದ ಸ್ವಾಮಿಗಳ ಸೂಚಕಪದ ಎಂದು ಸುಂಟರಗಾಳಿ ಎಬ್ಬಿಸಿದವರು ಮಠಾಧೀಶರುಗಳೆ! ಜನರು ಆ ಪದದ ಆಳ-ಹರಹು ಅರ್ಥ ಮಾಡಿಕೊಳ್ಳುವ ಮೊದಲೇ ವಸ್ತು ಕಾಣದಿರಲು ಧೂಳೆಬ್ಬಿಸಿದಂತೆ, ಸುಳ್ಳು ಸುದ್ದಿ ಹರಡಿದರು. ಬಹುಶಃ ಸಿರಿಗೆರೆಯ ಮಠದವರ ಮನಸ್ಸಿನಲ್ಲಿ ತಾವು ಮಾಡಿದ ಲಾಂಛನ 'ಶಿವ' ಅವರ ಲಿಂಗೈಕ್ಯ ಗುರುಗಳು ತಮ್ಮ ಸಂಕೇತವಾಗಿ ಮಾಡಿಕೊಂಡಿದ್ದು ಎಂಬ ಪೂರ್ವಾನುಭವ ಇದ್ದುದರಿಂದಲೇ ನಮ್ಮ ಸಂಶೋಧನೆಯ ಬಗ್ಗೆಯೂ ಅವರು ಸಂದೇಹ ಪಟ್ಟಿರಬಹುದು.

'ಲಿಂಗದೇವ'- ಬೇರೆ, ಲಿಂಗಾನಂದ ಬೇರೆ. ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಲಿಂಗದೇವನು ಲಿಂಗ-ಅಂಗ ಸಾಮರಸ್ಯದ ಕಾಲದಲ್ಲಿ ಶರಣನಿಗೆ ನೀಡುವ ದಿವ್ಯ ದಾರ್ಶನಿಕ ಅನುಭವವೇ ಲಿಂಗಾನಂದ ; ವೇದಾಂತದಲ್ಲಿ ಇದಕ್ಕೆ ಬ್ರಹ್ಮಾನಂದ ಎನ್ನುತ್ತಾರೆ. ವಾಸ್ತವಿಕವಾಗಿ ನೋಡಿದರೆ ಲಿಂಗದೇವ-ಲಿಂಗಾನಂದ ಈ ಪದಗಳ ಮಧ್ಯೆ ಗೊಂದಲ ಉಂಟುಮಾಡಿಕೊಳ್ಳಲು ಅವಕಾಶವೇ ಇಲ್ಲ. ನನಗೆ ಗುರುಗಳ ಹೆಸರನ್ನೇ ಇಡಬೇಕೆಂದಿದ್ದರೆ 'ಲಿಂಗಾನಂದ' ಎಂದೇ ವಚನ ಮುದ್ರಿಕೆ ಇಟ್ಟು ಈಗ ಎದುರಿಸುವ ಟೀಕೆ-ಕಷ್ಟಗಳನ್ನೇ ಎದುರಿಸುತ್ತಿದ್ದೆ. ನನಗೆ ಬೇಕಾದುದು ಅಪ್ಪ ಬಸವಣ್ಣನವರು ದೇವನಿಗೆ ಇಟ್ಟ ಹೆಸರು. ವಚನಾಂಕಿತವು ಸಂಕೇತಿಸಬೇಕಾದುದು 'ಲಿಂಗಾನಂದ' ಎಂಬ ಅನುಭವವನ್ನಲ್ಲ, ಸೃಷ್ಟಿಗೊಡೆಯ ಲಿಂಗದೇವನನ್ನು.

ಈಗ ಜನರು-ಮುಖ್ಯವಾಗಿ ಪೂರ್ವಾಗ್ರಹ ಪೀಡಿತ ಮನೋಭಾವವಿರದ ಪ್ರಾಮಾಣಿಕ ಬಸವ ತತ್ವನಿಷ್ಠರು ಈಗ ಲಿಂಗದೇವನನ್ನು ಅರ್ಥಮಾಡಿಕೊಂಡು ಬಸವ ವಚನವಾಕ್ಯಗಳೆಂಬ ಬಂಗಾರದ ಚೌಕಟ್ಟಿನಲ್ಲಿ ಲಿಂಗದೇವನೆಂಬ ವಜ್ರವನ್ನಿಟ್ಟು ನೋಡಿ, ಕೇಳಿ, ಹಾಡಿ, ಅನುಭವಿಸಿ, ಆನಂದಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮಿಗಳಿಗಾಗಲಿ, ಏಕದೇವೋಪಾಸಕರಲ್ಲದವರು, ಜಾತಿಯ ಗುಂಪು ಕಟ್ಟುವವರು, ಬಸವಣ್ಣನನ್ನು ಧರ್ಮಗುರು ಮಂತ್ರಪುರುಷ ಎಂದೊಪ್ಪದವರಿಗೆ 'ಲಿಂಗದೇವ' ವಚನಾಂಕಿತದ ಬಗ್ಗೆ ಮಾತನಾಡಲು ತಾತ್ವಿಕ, ನೈತಿಕ ಅರ್ಹತೆ ಇಲ್ಲವೇ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಈಗ ಶ್ರೀಗಳ ಟೀಕೆಗಳಿಗೆ ಉತ್ತರಿಸುತ್ತೇನೆ.

೧. ವಚನಾಂಕಿತ ಬದಲಾವಣೆ ಸಹನೀಯವಲ್ಲ. ಇಂಥ ಕಾರ್ಯನಡೆದಾಗ ಸೂಕ್ತವಾಗಿ ಪ್ರತಿಕ್ರಯಿಸಬೇಕು.

★ ಬಹುದೇವತೋಪಾಸಕರಿಗೆ, ಶೈವ ಮಾರ್ಗಿಗಳಿಗೆ ಇಂಥ ಮಹತ್ತರ, ಕ್ರಾಂತಿಕಾರಿ ಕೆಲಸ ಎಂದೂ ಸಹನೀಯವಾಗದು. ಆದರೆ ಲಿಂಗಾಯತ ಧರ್ಮದ ಜೀವಾಳವಾದ ಏಕದೇವೋಪಾಸನೆ ಅವಲಂಬಿಸುವವರಿಗೆ ಇದು ಅತ್ಯಗತ್ಯ.

ನಾವು ಒಬ್ಬರಿಗೆ ಶುಭಹಾರೈಕೆ, ಶೋಕ ಸಂದೇಶ ಇತ್ಯಾದಿ ಕಳಿಸಬೇಕಾಗಿದೆ ಎಂದುಕೊಳ್ಳೋಣ.

ಆಗ 'ದೇವರು, ಪರಮಾತ್ಮ ಎಂಬ ಸಾಮಾನ್ಯ (General) ಪದಗಳನ್ನು ಬಳಸುವ ಬದಲು ಮುಸಲೀಮರು 'ಅಲ್ಲಹ' ಎಂಬ ಒಂದು ಪದ ಬಳಸಿದಂತೆ ಲಿಂಗದೇವನು ಆತ್ಮಕ್ಕೆ ಚಿರಶಾಂತಿ ನೀಡಲಿ ; ಲಿಂಗದೇವನು ಅನುಗ್ರಹಿಸಲಿ ಎಂದರೆ ಎಷ್ಟು ಅರ್ಥಗರ್ಭಿತವಲ್ಲವೆ ? ಇದರ ಬದಲಿಗೆ 'ಸಂಗಮದೇವ', 'ಗುಹೇಶ್ವರ' ಚನ್ನಮಲ್ಲಿಕಾರ್ಜುನ ಎಂದು ಒಬ್ಬೊಬ್ಬರು ಒಂದೊಂದು ಬಳಸುತ್ತಾ ಹೋದರೆ ಆ ಎಲ್ಲ ಪದಗಳಿಗೆ ಅರ್ಥವೂ ಇಲ್ಲ ; ಏಕರೂಪತೆ ಬರದು. ಸ್ವಾಮೀಜಿ ಸೂಕ್ತವಾಗಿ ಪ್ರತಿಕ್ರಯಿಸಬೇಕು ಎಂದಿದ್ದಾರೆ. ಪದವು ಬಹಳ ಸೂಚ್ಯವಾಗಿದೆ. ಸೂಕ್ತ ಪ್ರತಿಕ್ರಿಯೆ ಎಂದರೆ ದಾವಣಗೆರೆಯಲ್ಲಿ ಸಿ.ಎನ್.ಹಿರೇಮಠ, ಹೆಚ್.ಎಂ.ಸ್ವಾಮಿ, ಕೊಟ್ರಬಸಪ್ಪ ಮುಂತಾದವರು ತೋರಿಸಿದಂತಹ ಅನಾಗರೀಕ, ಅಸಭ್ಯ, ಕ್ರೂರ ರೀತಿಯ ಪ್ರತಿಭಟನೆಯೇ ಎಂಬುದನ್ನು ಸ್ಪಷ್ಟಪಡಿಸಿಲ್ಲ.

೨. ನಮ್ಮ ಅನುಯಾಯಿಗಳು ಪ್ರವಚನದಲ್ಲಿ ವಚನಾಂಕಿತ ಬದಲಿಸಿ ಪ್ರಯೋಗ ಮಾಡುತ್ತಿದ್ದಾರೆ ಎಂದಿದ್ದಾರೆ ಶ್ರೀಗಳು.

★ ಇದರಲ್ಲಿ ಕದ್ದು ಮುಚ್ಚಿ ಮಾಡುವ ಕೆಲಸವೇನಿಲ್ಲ. ಹೇಗೆ ಜಗತ್ತಿನ ಮಹಾಸಂತರು, ಪ್ರವಾದಿಗಳು ಒಂದು ಸತ್ಯವನ್ನು ಸಾರಿ, ಅದನ್ನು ಬಹಿರಂಗವಾಗಿ ಪ್ರಚಾರಕ್ಕೆ ತರಲು ಅಹರ್ನಿಶೆ ಶ್ರಮಿಸುವರೋ ಹಾಗೆ 'ಲಿಂಗದೇವ' ಎಂಬ ಪರಮಸತ್ಯವನ್ನು ಮನವರಿಕೆ ಮಾಡಿಕೊಡಲು ನಾವು ಶ್ರಮಿಸುತ್ತಿದ್ದೇವೆ. ಮನವರಿಕೆ ಮಾಡಿಕೊಂಡವರು ನಿರ್ಭಯವಾಗಿ ಅದನ್ನು ಬಳಸುತ್ತಾರೆ. ನಾವು ನಮ್ಮ ಶಿಷ್ಯರಲ್ಲಿ ಅನುಯಾಯಿಗಳಲ್ಲಿ ಕಲಿಸುವುದು ಸಮಯ ಸಾಧಕತನವನ್ನಲ್ಲ ತತ್ವನಿಷ್ಠೆಯನ್ನು. ತುಮಕೂರಿನಲ್ಲಿ ಮೊದಲ ಬಾರಿ ಪ್ರವಚನ ನಡೆದಾಗ ಪಂಚಾಚಾರ್ಯರ ಅನುಯಾಯಿಗಳು, "ನೀವು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು ಎನ್ನಬೇಡಿ ಕೇವಲ ಮತೋದ್ಧಾರಕರು ಎನ್ನಿ, ಕಾಣಿಕೆ ಕೊಡುತ್ತೇವೆ. ಗೌರವಿಸುತ್ತೇವೆ. ಇಲ್ಲದಿದ್ದರೆ ವಿರೋಧಿಸುತ್ತೇವೆ" ಎಂದು ಅಂದರು. "ನಮ್ಮ ನಾಲಿಗೆಯನ್ನು ಎಂದೂ ಹಣಕ್ಕಾಗಿ ಮಾರಿಕೊಂಡಿಲ್ಲ, ಮಾರಿಕೊಳ್ಳುವುದೂ ಇಲ್ಲ, ಸುಳ್ಳು ಹೇಳುವುದೂ ಇಲ್ಲ. ವಿರೋಧಕ್ಕಾಗಿ ಅಂಜುವುದೂ ಇಲ್ಲ" ಎಂದೆ. ಆ ಗುಂಪಿನವರು ಬಂದು ಹೀಗೆ ಒತ್ತಡ ತಂದಿದ್ದಾರೆ ಎಂದು ಗೊತ್ತಾಗಿ ಓರ್ವ ನಿಷ್ಠಾವಂತ ಬಸವ ಭಕ್ತರು (ಅವರೆಗೆ ನಮಗೆ ಅವರ ಹೆಚ್ಚಿನ ಪರಿಚಯವಿರಲಿಲ್ಲ) ಲಿಂ॥ ಕೋರಿ ಸದಣ್ಣ ಎಂಬುವವರು ಓಡಿ ಬಂದರು ; "ನಿಮ್ಮ ನಿಷ್ಠೆ ನಮಗೆ ಹಿಡಿಸಿದೆ" ಎಂದು ಮುಂದೆ ನಿಂತು ಪ್ರವಚನ ಮಾಡಿಸಿ ಯಶಸ್ವಿಗೊಳಿಸಿದರು ; ಕಡೆಯ ದಿನ ನಮ್ಮ ಮೆರವಣಿಗೆ ಸಹ ಮಾಡಿಸಿದರು.

ಒಂದು ವೇಳೆ ನಮ್ಮ ಶಿಷ್ಯರು ಕೆಲವೊಮ್ಮೆ ಮೌನತಳೆದರೆ ಅದು ಸಮಯಸಾಧಕತನದಿಂದಲ್ಲ ಅಥವಾ ವಿರೋಧಿಗಳಿಗೆ ಸಮ್ಮತಿಸಿದರೆಂದಲ್ಲ ಧರ್ಮಪಿತರ ಈ ವಚನ ವಾಕ್ಯವು ಕಲಿಸಿರುವ ಪಾಠದಂತೆ.

ಒಂದಕ್ಕೊಂಬತ್ತು ನುಡಿದು, ಕಣ್ಣ ಕೆಂಚನೆ ಮಾಡಿ, ಗಂಡು ಗೆದರಿ
ಮುಡುಹಿಕ್ಕಿ ಕೆಲೆವವರ ಕಂಡಡಂಜುವೆ, ಓಸರಿಸುವೆ !
ಓಡಿದೆನೆಂಬ ಭಂಗವಾದಡಾಗಲಿ
ನಮ್ಮ ಲಿಂಗದೇವರ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ. -ಬ.ವ.ದೀ ೪೪೫

ಸಮಯವಿರುದ್ಧಕಂಜಿ ವಿನಯವ ನುಡಿವೆ
ಕೊಂದಡೆ ಕೊಲ್ಲು, ಕಾಯ್ದಡೆ ಕಾಯಿ
ಎನ್ನವರೆಂದು ಮನ ಹಿಡಿಯದು, ಲಿಂಗದೇವಾ -ಬ.ವ.ದೀ. ೧೯೫೨

ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಚರ್ಚೆ ಮಾಡದೆ ಜಗಳಕ್ಕೆ ಇಳಿಯುವವರ ಜೊತೆ ವಾದ,

ಚರ್ಚೆ ಸಾಧ್ಯವೆ ? ಅಂಥವರೊಡನೆ ಮಾತನಾಡುವುದಕ್ಕಿಂತ ಮೌನವೇ ಲೇಸು ಎನ್ನುತ್ತಾರೆ ಧರ್ಮಪಿತರು. ಆ ಮೌನವು ಸಮ್ಮತಿಯೂ ಅಲ್ಲ; ಸೋಲೂ ಅಲ್ಲ. ಬೌದ್ಧಿಕ ಸಾಮರ್ಥ್ಯವಿಲ್ಲದವರು ತೋಳೇರಿಸಿ ಬರುತ್ತಾರೆ, ಅಂಥವರೊಡನೆ ಚರ್ಚೆ ಅರ್ಥರಹಿತವಾಗುತ್ತದೆ.

ಯಾರಿಗೆ 'ಲಿಂಗದೇವ' ಪದದ ಆಳ-ವಿಸ್ತಾರ ಅರ್ಥವಾಗುತ್ತಿದೆಯೋ ಅವರು ಈಗ ಈ ವಚನಾಂಕಿತ ಮಾಣಿಕ್ಯವನ್ನು ಬಸವ ವಚನದಲ್ಲಿ ಇಟ್ಟು ಓದಿ, ಹಾಡಿ ಆನಂದಿಸುತ್ತಾರೆ. ಇನ್ನಿತರರಿಗೂ ಮನವರಿಕೆ ಮಾಡಿಕೊಡುತ್ತಿದ್ದಾರೆ. ನಾವೇನು ಉಳಿದ ಅನೇಕ ಮಠಾಧಿಕಾರಿಗಳಂತೆ ಕಂಡವರ ಆಸ್ತಿ, ಮಠ ಕಬಳಿಸಲು ಹೋರಾಡುತ್ತಿಲ್ಲ ಸೃಷ್ಟಿಕರ್ತ ಲಿಂಗದೇವನ ಮಹಿಮೆ, ಕ್ರಾಂತಿಪುರುಷ ಬಸವಣ್ಣನವರ ನಿಲುವು-ಇವುಗಳನ್ನು ಲೋಕಕ್ಕೆ ತಿಳಿಸಿಕೊಡಲು ಶ್ರಮಿಸುತ್ತಿದ್ದೇವೆ, ಇದು ನಾಚಿಕೆ ಪಡುವ ವಿಷಯವೇನಲ್ಲ.

೩. **"ಮಾತೆ ಮಹಾದೇವಿಯವರ ಕನಸಿನಲ್ಲಿ ಬಸವಣ್ಣನವರು ಬಂದು ಅಂಕಿತ ಬದಲಿಸುವಂತೆ ಸೂಚಿಸುವುದು ಸಾಧ್ಯವಿಲ್ಲ"** ಎಂದು ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಅಭಿಪ್ರಾಯ ನೀಡಿದ್ದಾರೆ.

★ ಈ ಬಗ್ಗೆ ನಾನು *'ಲಿಂಗದೇವನ ಲೀಲಾ ವಿಶೇಷ'* ಮತ್ತು *'ಡಾ|| ಚಿದಾನಂದ ಮೂರ್ತಿಗಳಿಗೊಂದು ಕೈಗನ್ನಡಿ'* ಎಂಬ ಪುಸ್ತಕಗಳಲ್ಲಿ ಕನಸಿನ ಬಗ್ಗೆ ವಿವರವಾಗಿ ಬರೆದಿದ್ದೇನೆ. ಆಸಕ್ತರು ಓದಿಕೊಳ್ಳಬಹುದು. ಮರುಭೂಮಿಯಲ್ಲಿ ಕುರುಚಲು ಗಿಡ, ಮುಳ್ಳುಗಳ್ಳಿ ಮಾತ್ರ ಬೆಳೆಯುತ್ತವೆ. ಮಲ್ಲಿಗೆಯಂತಹ ಮೃದು ಬೇರುಗಳ ಸಸ್ಯಗಳು ಬೆಳೆಯುವುದಿಲ್ಲ- ಹಾಗೆ ದಿವ್ಯ ದರ್ಶನ, ದಿವ್ಯಾನುಭವಗಳು ಅಸೂಯೆ, ದ್ವೇಷ, ಈರ್ಷೆಗಳಿಂದ ತುಂಬಿದ, ಬರಡಾದ, ಯಾಂತ್ರಿಕ ಮನ ಬುದ್ಧಿಗಳಲ್ಲಿ ಸ್ಫುರಿಸವು. ಹೀಗಾಗಿ ಶ್ರೀಗಳಿಗೆ ಅಸಾಧ್ಯವೆಂದು ತೋರುವ ಅನೇಕ ಅನುಭವಗಳು ದಾರ್ಶನಿಕ (Mystic)ಹೃದಯಗಳಿಗೆ ಲಭ್ಯವಾಗುತ್ತವೆ ಎನ್ನದೇ ಗತ್ಯಂತರವಿಲ್ಲ.

೪. **"ಶರಣರ ತತ್ತ್ವ ಪ್ರಚಾರದ ಹೆಸರಿನಲ್ಲಿ ಅದಕ್ಕೆ ಮಸಿ ಬಳಿಯುವ ಪ್ರಯತ್ನಗಳು ಸಾಗಿವೆ"** ಶ್ರೀಗಳ ಟೀಕೆ.

ಈ ಮಾತು ಅಪ್ಪಟ ಸುಳ್ಳು, ಪೂಜ್ಯ ಅಪ್ಪಾಜಿಯವರು ದೀಕ್ಷಾಬದ್ಧರಾದಂದಿನಿಂದ ಇಂದಿನವರೆಗೆ ಪೂಜ್ಯ ಗುರುಗಳು, ನಾವು, ನಮ್ಮಿಂದ ತರಬೇತಿಗೊಂಡವರು ಬಸವ ತತ್ತ್ವಕ್ಕೆ ದ್ರೋಹ ಬಗೆಯುವ ಕೆಲಸವನ್ನು ಸಾಮಾನ್ಯವಾಗಿ ಮಾಡಿಲ್ಲ, ಮಾಡುವುದೂ ಇಲ್ಲ. ಶರಣರ ತತ್ತ್ವಗಳನ್ನು ಪುಸ್ತಕ, ಕೆಸೆಟ್ಟು, ಸಿನಿಮಾ, ಭಾವಚಿತ್ರಗಳು ಹೀಗೆ ಎಲ್ಲಾ ಮಾಧ್ಯಮಗಳ ಮೂಲಕ ನಾವು ಪ್ರಚಾರ, ಪುನರುತ್ಥಾನ ಮಾಡುತ್ತ ಬಂದಿದ್ದೇವೆ. ಇವರನ್ನು ಹಿಡಿದು ಬಹುಪಾಲು ಮಠಾಧೀಶರು ನಮ್ಮ ಮೇಲೆ ಮತ್ಸರ ಪೂರ್ಣ ಟೀಕೆ ಮಾಡುತ್ತಲೇ ಬಂದಿದ್ದಾರೆ. ಆದರೆ ಇಡೀ ಸಮಾಜವೇ ಒಪ್ಪಿಕೊಳ್ಳುತ್ತದೆ. ನಾವು ಮಾಡಿರುವ ಪ್ರಾಮಾಣಿಕ ಸೇವೆಯನ್ನು.

೫. **"ಮೂರ್ತಿ ಪೂಜೆಗೆ ಬಸವಣ್ಣ ಎಂದೂ ಅವಕಾಶ ನೀಡಲಿಲ್ಲ, ಆದರೆ ಬಸವಣ್ಣನವರನ್ನೇ ಮೂರ್ತಿಯಾಗಿಸಿ, ಪೂಜೆ ಮಾಡುವ ಕೆಲಸ ನಡೆಯುತ್ತಿರುವುದು ದುರ್ದೈವದ ಸಂಗತಿ. ಇದನ್ನು ಪ್ರತಿಭಟಿಸಬೇಕು."** ಇದು ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಹೇಳಿಕೆ.

"ಇವರು ಧರ್ಮಗುರು ಬಸವಣ್ಣನವರ ಯಾವ ತತ್ತ್ವವನ್ನು ಅನುಸರಿಸುತ್ತಿದ್ದಾರೆ ? ಇವರಿಗೆ ಬಸವಾದಿ ಪ್ರಮಥರ ಬಗ್ಗೆ ಮಾತನಾಡಲು ಯಾವ ಹಕ್ಕಿದೆ ?" ಎಂದು ಇತ್ತೀಚಿನ ಕೆಲವು ವರ್ಷಗಳಿಂದ ನಾನು ಚಿಂತಿಸುತ್ತಲಿದ್ದು, ಈಗಾಗಲೇ ಲೇಖನದ ಆರಂಭದಲ್ಲೇ ಪ್ರಸ್ತಾಪಿಸಿದ್ದೇನೆ.

ಮೂರ್ತಿ ಪೂಜೆಗಿಂತಲೂ ಬಹಳ ಕೆಟ್ಟದ್ದು ಮತ್ತು ಅಪಾಯಕಾರಿ ಉಪಜಾತಿಯ ಸಂಘಟನೆ.

ಇಡೀ ಮಾನವ ಸಮಾಜವನ್ನು ಒಂದು ಮಾಡಲು ಹೊರಟ ಬಸವಣ್ಣನವರ ತತ್ತ್ವಕ್ಕೆ ವಿರುದ್ಧವಾಗಿ **ಮಾನವ ಸಮಾಜ ಇರಲಿ, ಲಿಂಗಾಯತ ಸಮಾಜದೊಳಗಣ ಒಂದು ಉಪಪಂಗಡದ ಸಂಘಟನೆ ಮಾಡುತ್ತಿರುವುದು ವಿಪರೀತ ಅಪಾಯಕಾರಿ ಮತ್ತು ಖಂಡನಾರ್ಹ.** ಅಜ್ಞಾನಿ ಜನರು ಸರಿಯಾದ ತಿಳುವಳಿಕೆಯಿಲ್ಲದೆ ಉಪಪಂಗಡಗಳ ಸಂಘಟನೆ ಮಾಡಹೋದರೂ, ಗುರುಗಳು ಬುದ್ಧಿ ಹೇಳಿ ಅಂಥ ಒಡೆಯುವ ಕೆಲಸ ಮಾಡಬಾರದೆಂದು ಜನರಿಗೆ ತಿಳಿಹೇಳಬೇಕು. ಇದನ್ನು ಶ್ರೀ ಪಂಡಿತಾರಾಧ್ಯರಾಗಲೀ, ಅವರ ಶ್ರೀಮಠವಾಗಲಿ ಮಾಡುತ್ತಿದೆಯೆ ? **ಚಿತ್ರದುರ್ಗ ಬೃಹನ್ಮಠದವರು ಈಗ ಮಾಡುತ್ತಲಿರುವ ದೌರ್ಜನ್ಯ, ಅನ್ಯರ ಆಸ್ತಿ-ಪಾಸ್ತಿ, ಮಠ-ಸಂಘ-ಸಂಸ್ಥೆಗಳ ಕಬಳಿಕೆ, ಗೂಂಡಾಗಿರಿ ಮೂರ್ತಿಪೂಜೆ ಗಿಂತಲೂ ನೂರುಪಟ್ಟು, ಸಾವಿರಪಟ್ಟು ಕೆಟ್ಟದ್ದು. ಇದನ್ನು ಪ್ರತಿಭಟಿಸುವ ತಾಕತ್ತು ಶ್ರೀ ಪಂಡಿತಾರಾಧ್ಯ ಸ್ವಾಮಿಗಳಿಗೆ ಇದೆಯೆ ?**

ಧರ್ಮಪಿತ ಬಸವಣ್ಣನವರು, ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮುಂತಾದ ಐತಿಹಾಸಿಕ ಪುರುಷರ ಗುಡಿಗಳಲ್ಲಿ ನಾಲ್ಕು ಕಾಲಿನ, ಎರಡು ಕೊಂಬಿನ, ಒಂದು ಬಾಲದ ನಂದಿಯನ್ನು ಕೂರಿಸಲಾಗಿದೆ. ಅತ್ಯಂತ ಉನ್ನತ ಮಟ್ಟದ ಮಹಾಪುರುಷರಾದ ಅವರನ್ನು ಪ್ರಾಣಿಗಳ ರೂಪದಲ್ಲಿ ಸಂಕೇತಿಸುವುದು ಅವರಿಗೆ ಮಾಡುವ ಘೋರ ಅಪಚಾರ. **ಇದನ್ನು ಪ್ರತಿಭಟಿಸುವ ತಾಕತ್ತು ಶ್ರೀ ಪಂಡಿತಾರಾಧ್ಯರಿಗಾಗಲೀ ಚಿತ್ರದುರ್ಗದ ಬೃಹನ್ಮಠದವರಿಗಾಗಲೀ ಇದೆಯೆ ?** ಅತ್ಯಂತ ಪವಿತ್ರವಾದ, ಅದ್ಭುತವಾದ ವಿಶಾಲ ಪರಿಕಲ್ಪನೆಯ ಲಿಂಗದೇವ ಪದವನ್ನು ವಿರೋಧಿಸುವ ಆ ಮಹಾಸ್ವಾಮಿಗಳು ಶರಣರ ಗುಡಿಗಳಲ್ಲಿ ಇಡಲಾದ ನಂದಿಯ ಮೂರ್ತಿಗಳನ್ನು ತೆಗೆಸಿ ಅದರ ಬದಲು ಗೋಳಾಕಾರದ ಲಿಂಗವನ್ನಾಗಲಿ, ಅಥವಾ ಆಯಾ ಮಹಾಪುರುಷರ ಮೂರ್ತಿಗಳನ್ನಾಗಲೀ ಕೂರಿಸಲು ಹೋರಾಟಮಾಡಬಲ್ಲರೇ ? **"ಮಾರಿ ಕಣ್ಣು ಹೋತನ ಮೇಲೆ" ಎಂಬಂತೆ, ಕೇವಲ ಮಹಿಳಾ ಜಗದ್ಗುರುಗಳು ಮಾಡುವ ಜನಜಾಗೃತಿ, ಧರ್ಮ ಪ್ರಚಾರ ವಿರೋಧಿಸುವ ಬದಲು ಮೂಢ ಆಚಾರಗಳನ್ನು ವಿರೋಧಿಸುವ ಧೈರ್ಯ ತಾಳಲಿ.** ಇದರಿಂದ ಸಮಾಜಕ್ಕೆ ಮಹದುಪಕಾರವಾಗುವುದು.

ವಚನ ವಾಙ್ಮಯವು ವಿಶ್ವಗುರು ಬಸವಣ್ಣನವರನ್ನು ಧರ್ಮಗುರುವೆಂದು, ಲಿಂಗಾಯತ ಧರ್ಮದ ಆದ್ಯರೆಂದು ಸಾರಿ ಸಾರಿ ಹೇಳಿದ್ದರೂ ಸಿರಿಗೆರೆಯ ಮಠದವರು ಅದನ್ನು ಎಲ್ಲೆಲ್ಲಿಯೂ ಬರೆಯುವುದಿಲ್ಲ. ಯಾವುದೇ ಕ್ರೈಸ್ತರ ಸಭೆಗಳಲ್ಲಿ ಏಸುವಿಗೆ, ಶಿಲುಬೆಗೆ ಅಗ್ರಸ್ಥಾನ, ಬೌದ್ಧರ ಸಭೆಗಳಲ್ಲಿ ಬುದ್ಧನಿಗೆ ಅಗ್ರಪೀಠ, ಜೈನರ ಸಮಾರಂಭಗಳಲ್ಲಿ ತೀರ್ಥಂಕರರಿಗೆ ಅಗ್ರಪೀಠ ; ತರಳಬಾಳು ಹುಣ್ಣಿಮೆಯಲ್ಲಿ ಎಲ್ಲೆಲ್ಲಿಯೂ ಅರಿತಾಗಲೀ, ಮರೆತಾಗಲಿ ವೇದಿಕೆಯ ಮೇಲೆ ಒಂದು ಬಸವ ಭಾವಚಿತ್ರವಿಲ್ಲ. ಶಿವಮೊಗ್ಗ ರಾಷ್ಟ್ರೀಯ ಬಸವ ದಳದವರು ಮುಗ್ಧ ಮನೋಭಾವದಿಂದ ಫೋನ್ ಮಾಡಿ ಕೇಳಿದರು. "ಒಂದು ಕಟ್ಟು, ಗಾಜು ಹಾಕಿಸಿದ ಭಾವಚಿತ್ರ, ಕಾಣಿಕೆಯಾಗಿ ಕೊಡೋಣವೇ ?" ಎಂದು. ನಾನು ಹೇಳಿದೆ" ಅವರು ಉದ್ದೇಶಪೂರ್ವಕವಾಗಿ ಇಟ್ಟಿಲ್ಲ. ಕೆಲವಾರು ವರ್ಷಗಳ ಹಿಂದೆ ತರಳಬಾಳು ಹುಣ್ಣಿಮೆಯ ವೇದಿಕೆಯ ಮೇಲೆ ಧರ್ಮಪಿತ ಬಸವಣ್ಣನವರ ಮತ್ತು ವಿಶ್ವಬಂಧು ಮರುಳಸಿದ್ಧರ ಫೋಟೋ ಇರುತ್ತಿದ್ದವು. ಈಗ ಬಸವಣ್ಣನವರ ಭಾವಚಿತ್ರ ಇಲ್ಲ ಎಂದರೆ ಉದ್ದೇಶಪೂರ್ವಕವಾಗಿ ಬಿಟ್ಟಿದ್ದಾರೆ. ನೀವೇಕೆ ಕೊಡಲು ಹೋಗುತ್ತೀರಿ ? ಕೊಟ್ಟರೂ ಇಡುವುದಿಲ್ಲ" ಎಂದು ಹೇಳಿದೆ. ನಮ್ಮ ಸಂಸ್ಥೆಯ ಬುಕ್‌ಸ್ಟಾಲ್ ಕಳಿಸಲಾಗಿತ್ತು. ಅದೂ ಶರಣೆ ಜಯಮ್ಮನವರ ಒತ್ತಾಯದ ಮೇರೆಗೆ. "ಬೇಡ, ನಮ್ಮ ಮಠಾಧೀಶರು ಸಂತೋಷ ಪಡುವುದಿಲ್ಲ" ಎಂದು ಅವರಿಗೆ ಹೇಳಿದ್ದೆ. "ಇಲ್ಲ, ನಮ್ಮ ಜಾತಿ ಬಂಧುಗಳೇ (ಸಾಧು ಲಿಂಗಾಯತರು) ಸಮ್ಮೇಳನ ಸಮಿತಿಯಲ್ಲಿದ್ದಾರೆ. ಕೆಲವರು ನಮ್ಮ ಬಂಧುಗಳು. ನಿಮ್ಮ ಸಾಹಿತ್ಯ ಬರದೆ ಇದ್ದರೆ ಜನರಿಗೆ ಬಹಳ ನಷ್ಟ. ದಯವಿಟ್ಟು ಕಳಿಸಿರಿ.

ಜನರಿಗೆ ಅಗತ್ಯವಿದೆ. ಬಸವಣ್ಣನವರು, ಇತರ ಶರಣರ ಭಾವಚಿತ್ರ ಇನ್ನಾರೂ ಪ್ರಕಟಿಸಿಲ್ಲ. ನಿಮ್ಮ ಕೆಸೆಟ್ಟುಗಳಂತೂ ಬಲು ಮಧುರ. ನನ್ನ ಮೇಲೆ ವಿಶ್ವಾಸವಿಟ್ಟು ದಯವಿಟ್ಟು ಕಳಿಸಿರಿ.'' ಎಂದು ಒತ್ತಾಯಿಸಿದರು. ಗಣನಾಯಕಿಯಾದ ಶರಣೆ ಜಯಮ್ಮನವರು ಸಾಧು ಲಿಂಗಾಯತರೇ ಇದ್ದುದರಿಂದ, ಸ್ವಜಾತಿ ಪ್ರೇಮದಿಂದಲಾದರೂ ತೊಂದರೆ ಕೊಡಲಿಕ್ಕಿಲ್ಲ ಎಂದು ನಂಬಿ, ಶರಣೆ ಜಯಮ್ಮನವರ ಒತ್ತಡಕ್ಕೆ ಮಣಿದು ಸಾಹಿತ್ಯವನ್ನು ಕಳಿಸಿದೆವು.

ಬೆಲ್ಲಕ್ಕೆ ಇರುವೆ ಮುತ್ತುವಂತೆ ಜನರು ಮುಗಿಬಿದ್ದು ಸಾಹಿತ್ಯವನ್ನು ಖರೀದಿಸತೊಡಗಿದರಂತೆ. ೩ ದಿನ ಸುಸೂತ್ರವಾಗಿ ಬಸವ ಭಾವಚಿತ್ರ, ಕೆಸೆಟ್ಟು, ಸಾಹಿತ್ಯ ಭರಾಟೆಯಿಂದ ಖರ್ಚಾದವು. ನಾಲ್ಕನೆಯ ದಿನ ಕೆಲವು ಮಹಾನುಭಾವರ ದೃಷ್ಟಿ ಬಿದ್ದಿತು. ಮತ್ಸರ ತಲೆ ಎತ್ತಿತು. ''ಹೋಗಿ, ಇಲ್ಲಿಡಬೇಡಿ'' ಎಂಬ ಆಜ್ಞೆ ಬಂದಾಗ ಜಯಮ್ಮನವರಿಗೆ ದಿಗ್ಭ್ರಾಂತಿ. ''ಯಾಕರಿ, ನಮ್ಮ ಧರ್ಮಕ್ಕೆ ವಿರುದ್ಧವಾದುದು ಯಾವುದೂ ಇಲ್ಲ. ಎಲ್ಲ ಶರಣ ತತ್ವಕ್ಕೆ ಸಂಬಂಧಿಸಿದ್ದು'' ಎಂದು ಅಚ್ಚರಿಯಿಂದ ಕೇಳಿದರು.

''ಬಸವ ವಚನ ದೀಪ್ತಿ ಇಡುತ್ತೀರಿ'' ಒಂದು ಪಿಳ್ಳೆನೆವ! ಇಲ್ಲ; ಪ್ರತಿಗಳು ಮುಗಿದಿವೆ ಎಂದು ಅದನ್ನು ಕಳಿಸಿಯೇ ಇಲ್ಲ. ಮಾರುವುದೆಲ್ಲಿಂದ ಬಂತು ? ಮಜಯಮ್ಮನವರ ಉತ್ತರ. ಆಗ ಸ್ವಜಾತಿ ಬಾಂಧವರು ಮಾತ್ರವಲ್ಲ ಬಂಧುಗಳು ಎಂಬುದನ್ನು ಮರೆತು ಓರ್ವರು ಶರಣೆ ಜಯಮ್ಮನಂತಹ ಸುಸಂಸ್ಕೃತ ಪ್ರೌಢ ಶರಣೆಯ ಮೇಲೆ ಕೈ ಎತ್ತಿ ಹೊಡೆಯಲು ಹೋದಾಗ ಕೆಲವು ಜನ ಗುಂಪುಗೂಡಿ, ''ಏನ್ರೀ ದೊಡ್ಡ ಮನುಷ್ಯರಂತೆ ಕಾಣುತ್ತೀರಿ. ಓರ್ವ ಮಹಿಳೆಯ ಮೇಲೆ ಕೈ ಎತ್ತಲು ನಾಚಿಕೆಯಾಗದೆ?'' ಎಂದು ಕರೆದೊಯ್ದರಂತೆ. ಎಲ್ಲಿ ನೋಡಿದರೂ ಮಾರಾಟಕ್ಕೆ ಸಿರಿಗೆರೆ ಮಠದ ಹಿರಿಯ-ಕಿರಿಯ ಶ್ರೀಗಳದೇ ಫೋಟೋಗಳಂತೆ. ಧರ್ಮಗುರು ಬಸವಣ್ಣನವರಂತೂ ಗಡಿಪಾರಾಗಿದ್ದಾರೆ. ಸದ್ಯ ಪೀಠದ ಪ್ರೇರಕ ಶ್ರೀ ಮರುಳಸಿದ್ಧರಿಗಾದರೂ ವೇದಿಕೆಯ ಮೇಲೆ ಸ್ಥಳಸಿಕ್ಕರೆ ನಮ್ಮ ಸಮಾಜದ ಸುದೈವ ಎನ್ನಲು ಅಡ್ಡಿಯಿಲ್ಲವಷ್ಟೆ ?.

ಇಂಥದನ್ನು ಶ್ರೀ ಪಂಡಿತಾರಾಧ್ಯ ಶ್ರೀಗಳು ಪ್ರತಿಭಟಿಸುವ ಆತ್ಮ ವಿಶ್ವಾಸ ಹೊಂದಿರುವರೇ ? ತಪ್ಪು ಹೊರಗಿದ್ದರೇನು ಒಳಗಿದ್ದರೇನು ಪ್ರತಿಭಟಿಸುವುದೇ ತತ್ವನಿಷ್ಠೆ. ಇಬ್ಬರು ವಿದೇಶಿ ಸಂದರ್ಶಕರು ಕರ್ನಾಟಕದಲ್ಲಿ ಸುತ್ತಿ, ಸಿರಿಗೆರೆ ಮಠಕ್ಕೂ ಹೋಗಿ ತಮ್ಮ ಲೇಖನದಲ್ಲಿ ಬರೆದಿದ್ದಾರೆ, ''ಲಿಂಗೈಕ್ಯ ಸ್ವಾಮಿಗಳ ಗದ್ದುಗೆಗೇ ಮುಖ್ಯ ಸ್ಥಾನ'' ಎಂದು.

The head matha of the Taralbalu branch of Virashaivas in Sirigere is dominated by the tombs of the deceased mahaswamis. When we visited the matha in February 1994, a big mousoleum over Shivakumara, the predecessor of the present leader, was being built in the centre of the matha. At many places, we saw paintings of him and of Marulasiddha, the founder of the Taralabalu mathas, and puja in traditional Hindu forms was performed in front of them. In the Taralabalu cenrtre, being under construction in Bangalore, we found a painting of Marulasiddha in the focus in the assembly hall. It seems to us that in present Virashaivism there is a tendency of deifying, or at least sanctifying, the matha leaders.

Birgit and sten Rodhe,
"The Lingayats of Karnataka' An introduction. Page.93

ನಮ್ಮ ಬಸವ ಮಂಟಪಕ್ಕೆ ಬನ್ನಿ, ಧರ್ಮಗುರು ಬಸವಣ್ಣನವರಿಗೇ ಮುಖ್ಯ ಸ್ಥಾನ ; ಕೂಡಲಸಂಗಮಕ್ಕೆ ಮಹಾಮನೆಯ ಶರಣ ಲೋಕಕ್ಕೆ ಬನ್ನಿ. ಗಣಲಿಂಗ (ಇಷ್ಟಲಿಂಗದ ಬೃಹದ್ರೂಪ)ಕ್ಕೆ ಅರ್ಥಾತ್ ಸೃಷ್ಟಿಕರ್ತ ಲಿಂಗದೇವನ ಕುರುಹಿಗೆ ಅಗ್ರಸ್ಥಾನ, ನಂತರದ ಸ್ಥಾನ ಧರ್ಮಗುರು ಬಸವಣ್ಣನವರಿಗೆ; ಪೂಜ್ಯ ಲಿಂಗೈಕ್ಯ ಗುರುಗಳಿಗೆ ನಂತರದ ಸ್ಥಾನ. ಸಮಾಧಿ-ಗದ್ದುಗೆ ನಿರ್ಮಾಣ ಶರಣರ ಸಂಪ್ರದಾಯವಾದ ಕಾರಣ ಅದು ಸರಳವಾದ ಗದ್ದುಗೆ. ಅದರ ಮೇಲೆ ಶರಣಾಲಯ. ಈ ತತ್ವನಿಷ್ಠೆ ಮತ್ತೆಲ್ಲಿ ಕಾಣಬಹುದು ? ಇದು ಗುರುಗಳಿಗೆ ತೋರಿಸಿದ ಅಗೌರವವಲ್ಲ. ಪೂಜ್ಯ ಗುರುಗಳು ನಮಗೆಲ್ಲ ಕಲಿಸಿರುವ ಪಾಠ. ಸೃಷ್ಟಿಕರ್ತನಿಗೆ (ಲಿಂಗದೇವ) ಅತ್ಯುನ್ನತ ಸ್ಥಾನ, ನಂತರದ ಸ್ಥಾನ ಧರ್ಮಗುರು ಬಸವಣ್ಣನವರಿಗೆ, ಆನಂತರದ ಸ್ಥಾನ ಶರಣರಿಗೆ, ನಂತರದ ಸ್ಥಾನ ದೀಕ್ಷಾಗುರುಗಳಿಗೆ ಎಂಬುದೆ ಲಿಂಗೈಕ್ಯ ಅಪ್ಪಾಜಿಯವರ ಬೋಧೆ. ಬಹುಪಾಲು ಮಠಾಧೀಶರು ಧರ್ಮಗುರು ಬಸವಣ್ಣನವರಿಗೆ ಗೌರವಪೂರ್ಣ ಸ್ಥಾನವನ್ನು ಕೊಡದಿರುವುದನ್ನು, ನಿಧಾನವಾಗಿ ಮರೆಸುತ್ತಿರುವುದನ್ನು ಗಮನಿಸಿ, ಗುರುತಿಸಿ, ಜಗತ್ತಿನ ಎಲ್ಲಾ ಧರ್ಮಗಳಲ್ಲಿ ಧರ್ಮಗುರುವಿಗೆ ಅಗ್ರಪೀಠ ಇರುವುದನ್ನು ಸಮೀಕ್ಷೆ ಮಾಡಿ ಬೌದ್ಧರು ಬುದ್ಧನಿಗೆ, ಜೈನರು ತೀರ್ಥಂಕರ ಮಹಾವೀರರಿಗೆ, ಕ್ರೈಸ್ತರು ಏಸುಕ್ರಿಸ್ತರಿಗೆ, ಮುಸಲೀಮರು ಮೊಹಮ್ಮದರಿಗೆ ಕೊಡುತ್ತಿರುವ ಗೌರವವನ್ನು ಗ್ರಹಿಸಿ, ನಾವು ಧರ್ಮಪಿತ ಬಸವಣ್ಣನವರ ಬಸವ ಭಾವಚಿತ್ರವನ್ನು, ಬಸವ ಗುರು ಮೂರ್ತಿಯನ್ನು ಪೂಜಿಸಬೇಕೆಂದು ೧೯೭೭ರಲ್ಲಿ ನಿರ್ಧರಿಸಿ, ಆಚರಣೆಗೆ ತಂದೆವು. ಲಿಂಗಾಯತರು ದಿಕ್ಕು ತಪ್ಪಿದವರಾಗಿ ನವಗ್ರಹ ಪೂಜೆ, ಸತ್ಯನಾರಾಯಣ, ಸಂಕಷ್ಟಿ ಗಣಪತಿ, ವರದಾ ಶಂಕರ, ಸಂತೋಷಿ ಮಾ ವ್ರತ ಎಲ್ಲ ಮಾಡುತ್ತಿರುವುದನ್ನು ನೋಡಿ ಮರಮರ ಮರುಗಿ ''ಬಸವೇಶ್ವರ ಪೂಜಾ ವ್ರತ'' ಬಳಕೆಗೆ ತಂದೆವು. ಇದಕ್ಕೆ ಪ್ರೇರಣೆ ನೀಡಿದವರು ಶ್ರೀ ಸಿದ್ಧರಾಮೇಶ್ವರರು; ಕೆಳಕಂಡ ವಚನದ ಮೂಲಕ

ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನ

ನಮ್ಮ ಈ ಆಚರಣೆಗೆ ಶರಣ ಪರಂಪರೆಯ ಅವಿಭಕ್ತ ಕುಟುಂಬದ ನಮ್ಮ ''ಸೋದರ ಮಾವ'' ವೀರಗಣಾಚಾರಿ ಮಡಿವಾಳ ಮಾಚಿದೇವರು ಇನ್ನಷ್ಟು ಪುಷ್ಟಿ ನೀಡಿದ್ದಾರೆ.

ನೆನೆವೆನಯ್ಯಾ ಬಸವಣ್ಣ
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವನ್ನಕ್ಕ ;
ನೋಡುವೆನಯ್ಯಾ ಬಸವಣ್ಣ
ನಿಮ್ಮ ಮೂರ್ತಿ ಎನ್ನಂಗವಿಸುವನ್ನಕ್ಕ
ಪೂಜಿಸುವೆನಯ್ಯಾ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ ;
ನಿಮ್ಮ ಆಹ್ವಾನಿಸುವೆನಯ್ಯಾ ಬಸವಣ್ಣ
ಅನಿಮಿಷ ನಿಮಿಷ ನಿಮಿಷಗಳಿಲ್ಲವೆಂದೆನಿಸುವನ್ನಕ್ಕ ;
ನಿಮ್ಮ ಧ್ಯಾನಿಸುವೆನಯ್ಯಾ ಬಸವಣ್ಣ
ಜ್ಞಾನಾಜ್ಞಾನವಿಲ್ಲವೆನಿಸುವನ್ನಕ್ಕ ;
ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ

ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ ;
ಬಸವಣ್ಣಾ ಎಂದು ಹಾಡುವೆನಯ್ಯಾ
ಎನ್ನ ತನುವಿನ ಗಮನ ನಿರ್ಗಮನವಹನ್ನಕ್ಕ ;
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎನುತಿರ್ದೆನಯ್ಯಾ
ಕಲಿದೇವರದೇವನೆಂಬ ಶಬ್ದವುಳ್ಳನ್ನಕ್ಕ ! -ಮಡಿವಾಳ ಮಾಚಿದೇವ ೬೬೦

ಆದ್ದರಿಂದ ನಮ್ಮನ್ನು ಶರಣ ತತ್ತ್ವದ ವಿರೋಧಿಗಳೆಂದು ಕರೆದು, ನಮ್ಮ ವಿರುದ್ಧ ಸೂಕ್ತ ಪ್ರತಿಭಟನೆ ಮಾಡಲು ಕರೆ ನೀಡುವ ಮೊದಲು ಶ್ರೀ ಪಂಡಿತಾರಾಧ್ಯ ಶ್ರೀಗಳು ಮೊದಲು ತಮ್ಮ ಮಠ, ನಂತರ ಇತರ ಮಠಗಳಲ್ಲಿ ಒಮ್ಮೆ ಹಾಯ್ದು ನಮ್ಮ ಬಳಿಗೆ ಕೊನೆಯಲ್ಲಿ ಬರುವುದು ಒಳ್ಳೆಯದು. ಏಕೆಂದರೆ ನಮ್ಮ ಮಠ ಬಸವಾದಿ ಪ್ರಮಥರ ಕರುಳಬಳ್ಳಿ ! ಇದು ಹುಟ್ಟಿದ್ದೇ ಬಸವ ಧರ್ಮದ ಪುನರ್‌ಪ್ರತಿಷ್ಠಾಪನೆಗೆ, ಆದಿ ಶರಣರ ಆಶೋತ್ತರ ಪೂರೈಸಲು. ★

ಸಮಸ್ಯೆ - ಸಮಾಧಾನ

-ಶಿವಪ್ರಸಾದ ಕೌದಿಶೆಟ್ಟರ, ಹುಬ್ಬಳ್ಳಿ- ''ಗುರು ವಿರಕ್ತರು ಒಂದಾಗಬೇಕು ; ಪಂಚಪೀಠದವರು ಮತ್ತು ಮೂರು ಸಾವಿರ ಮಠದವರು ಒಂದಾಗಬೇಕು'' ಎಂಬ ನಿರ್ಣಯಕ್ಕೆ ಬರಲಾಯಿತು ಎಂದು ವಾರ್ತಾ ಪತ್ರಿಕೆಗಳಲ್ಲಿ ಓದಿದೆವು. ತಮ್ಮ ಅಭಿಪ್ರಾಯವೇನು ?

★ ಅಹುದು, ಅವರುಗಳು ಒಂದಾಗಬೇಕು ಒಳ್ಳೆಯದು. ಏಕೆಂದರೆ ಇಬ್ಬರೂ ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪದ, ವಚನ ಸಾಹಿತ್ಯವನ್ನೂ ಧಾರ್ಮಿಕ ಸಂವಿಧಾನ ಎಂದು ಮನ್ನಿಸದ, ಸಮಾನತೆ ಒಪ್ಪದೆ ಜಂಗಮವು ಒಂದು ಜಾತಿ ಎಂಬ, ಬಹುದೇವತೋಪಾಸಕರು. ವೈಯಕ್ತಿಕ ಪ್ರತಿಷ್ಠೆ ಬಿಟ್ಟರೆ ಉಭಯತರಲ್ಲೂ ಯಾವುದೇ ತಾತ್ತ್ವಿಕ ವ್ಯತ್ಯಾಸ ಇಲ್ಲ. ಆದ್ದರಿಂದ ಒಂದೇ ಇರುವರಾದ ಕಾರಣ ಒಂದಾಗಲಿ. ಇದು ಬಸವ ಧರ್ಮೀಯರಿಗೆ ಎಳ್ಳಷ್ಟೂ ಸಂಬಂಧಪಡದ ವಿಷಯ.

-ರೇಣುಕಾಚಾರ್ಯ ಮುಂತಾದವರು ಬಸವ ಪೂರ್ವದ ಐತಿಹಾಸಿಕ ಪುರಾತನ ಪುರುಷರು ಎಂದು ಯುಗಮಾನೋತ್ಸವ ಆಚರಿಸುವರಲ್ಲ, ಅವರ ಐತಿಹಾಸಿಕ ಆಧಾರಗಳೇನು ?

★ ರೇಣುಕಾಚಾರ್ಯರ ಹೆಸರಿನಲ್ಲಿ ಕಟ್ಟಿಸಿರುವ, ಕಟ್ಟಿಸಲಾಗುತ್ತಿರುವ ವಿವಾಹ ಭವನಗಳು, ಕಾಲೇಜು ಕಟ್ಟಡಗಳು ಮುಂತಾದವು! ಒಂದು ಸಲ ಓರ್ವ ಗುರು ಓರ್ವ ಶಿಷ್ಯ ತಮಾಷೆ ಮಾಡುತ್ತಿದ್ದರು. ಶಿಷ್ಯ ಹೇಳಿದ. ''ಗುರುಗಳೇ ನಾನೊಂದು ಪ್ರಶ್ನೆ ಕೇಳುತ್ತೇನೆ. ಅದಕ್ಕೆ ನೀವು ಉತ್ತರಿಸಿದರೆ ನಾನು ಐದು ರೂ. ಕೊಡುತ್ತೇನೆ. ನೀವು ಉತ್ತರಿಸದಿದ್ದರೆ ನನಗೆ ನೀವು ೧೦ ರೂ. ಕೊಡಬೇಕು''. ಗುರುಗಳು ಒಪ್ಪಿದರು. ಶಿಷ್ಯ ಹೇಳಿದ ''ಹತ್ತು ಕಾಲು, ಆರು ಕೈಯಿ; ಮೂರು ತಲೆ ಇರುವ ಪ್ರಾಣಿ ಯಾವುದು ?'' ಗುರುಗಳು ಉತ್ತರಿಸಲಾರದೆ ೧೦ ರೂ. ಕೊಟ್ಟು ಕುತೂಹಲದಿಂದ ಯಾವ ಪ್ರಾಣಿ ಹೇಳು ? ಎಂದರು. ಆಗ ಶಿಷ್ಯ; ''ಇದು ನನಗೂ ಗೊತ್ತಿಲ್ಲ, ತಗೊಳ್ಳಿ ೫ ರೂ.'' ಎಂದ. ಅವನಿಗೆ ೫ ರೂ. ಲಾಭವಾದುದಷ್ಟೆ ಪ್ರಯೋಜನ. ಹೀಗೇ ಇದೆ ಪಂಚಪೀಠದ ಗುರುಗಳ ಮತ್ತು ಅವರ ಶಿಷ್ಯರ ಅವಾಂತರ. ಏನನ್ನೂ ಐತಿಹಾಸಿಕವಾಗಿ ಸಿದ್ಧಮಾಡಲಾಗದೆ ಸದ್ದು ಮಾಡುವುದಷ್ಟೆ ಅವರ ಕೆಲಸ.

-ಬಸವ ಪ್ರಭು, ಬಳ್ಳಾರಿ - ಮಾತಾಜಿಯವರು ಸದಾ ಸುದ್ದಿಯಲ್ಲಿರ ಬಯಸಿ ಏನೇನೋ ಮಾಡುತ್ತಿರುತ್ತಾರೆ ಎಂದು ಕೆಲವರು ಅನ್ನುತ್ತಾರಲ್ಲ ?

★ ನಾವು ಸುದ್ದಿಯಲ್ಲಿರಬಯಸಿ ಏನೂ ಮಾಡ ಹೋಗುವುದಿಲ್ಲ. ಬಸವ ಧರ್ಮದ

ಉದ್ದೀಪನೆ, ಸಮಾಜ ಸಂಘಟನೆಗಾಗಿ ಕೆಲವೊಂದು ಕಾರ್ಯ ಮಾಡುತ್ತೇವೆ. ಅದನ್ನು ವಿವಾದವನ್ನಾಗಿ ಮಾಡಿ, ವಿರೋಧ ವ್ಯಕ್ತಪಡಿಸಿ ಸುದ್ದಿಯಲ್ಲಿರಬಯಸುವವರು ನಮ್ಮನ್ನು ಅಸಹನೆಯಿಂದ ಕಾಣುವವರು. ಅದಕ್ಕಾಗಿ ನಾವೇನು ಮಾಡಲಾದೀತು.

-ಬಸವರಾಜ ಯಂಡಿಗೇರಿ, ಬೆಳಗಾಂವ - ಲಿಂಗಾಯತ ಧರ್ಮ ಬೇರೆ, ವೀರಶೈವ ಮತ ಬೇರೆ ಎಂದು ನೀವು ವಿವರಿಸುತ್ತಿರುವುದು ನಮಗೆಲ್ಲ ಸಾಕಷ್ಟು ಮನವರಿಕೆಯಾಗುತ್ತಿದೆ. ಕರ್ನಾಟಕದಲ್ಲಿ ಲಿಂಗಾಯತರ ಸಂಖ್ಯೆ ಎಷ್ಟು ? ವೀರಶೈವರ ಸಂಖ್ಯೆ ಎಷ್ಟು ?

★ ಕರ್ನಾಟಕದಲ್ಲಿ ವೀರಶೈವರು ಇಲ್ಲವೇ ಇಲ್ಲ; ಇರುವವರೆಲ್ಲ ಲಿಂಗಾಯತರೆ. ತಪ್ಪುತಪ್ಪಾಗಿ ಕೆಲವು ಲಿಂಗಾಯತರು ತಾವು ವೀರಶೈವರೆಂದು ಕರೆದುಕೊಳ್ಳುತ್ತಾರೆ. ಗೋಳಾಕಾರದ ಇಷ್ಟಲಿಂಗವನ್ನು ಧರಿಸುವವರೆಲ್ಲರು ಲಿಂಗಾಯತರೇ ವಿನಾ ವೀರಶೈವರಲ್ಲ.

-ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ ಎಂದು ಹೇಳುವುದರಿಂದ ಲಿಂಗಾಯತ ಸಮಾಜವು ಒಡೆಯುವುದಿಲ್ಲವೆ ?

★ ಒಡೆಯುವುದಿಲ್ಲ, ಶುದ್ಧವಾಗುತ್ತದೆ. ಒಬ್ಬ ಗುರು, ಒಂದು ದೇವರು, ಒಂದು ಧರ್ಮಶಾಸ್ತ್ರ - ಹೀಗೆ ಒಂದು ತತ್ತ್ವಸಂಹಿತೆಯನ್ನು ನಂಬಿಕೊಂಡು ಸಮಾಜವನ್ನು ಕಟ್ಟಿದರೆ ಅದು ಸುಂದರ ಬಂಧುರ ಸಮಾಜವಾಗುತ್ತದೆ. ಪ್ರಗತಿಪರ ಚಿಂತಕರಾದ ವಿಶ್ವಧರ್ಮಿ ಬಸವಣ್ಣನವರನ್ನು ಧರ್ಮಗುರುವೆಂದು ವಚನ ಸಾಹಿತ್ಯವನ್ನು ಧರ್ಮ ಸಂಹಿತೆ ಎಂದು ನಂಬದವರು, ಅವರು ತಮ್ಮನ್ನು ತಾವು ಹೇಗಾದರೂ ಕರೆದುಕೊಳ್ಳಲಿ. ಹೀಗೆ ಸ್ಪಷ್ಟವಾಗಿ ಧ್ರುವೀಕರಣವಾದರೆ ಈಗಿರುವ ನೂರೆಂಟು ಜಾತಿ, ಒಳಪಂಗಡಗಳು ತೊಲಗಿ ಆಗ ಸ್ಪಷ್ಟವಾಗಿ ಒಂದು ಅಖಂಡ ಸಮಾಜವು ರೂಪುಗೊಳ್ಳುವುದು.

-ಟಿ.ಎ.ದಾಸಪ್ಪ, ತಿಪಟೂರು.- 'ಲಿಂಗದೇವ' ವಚನಾಂಕಿತ ಬದಲಾವಣೆಯಿಂದ ನಿಮಗೆ ಸಾಕಷ್ಟು ಕಿರುಕುಳ, ಮಾನಸಿಕ ಹಿಂಸೆಯುಂಟಾಗಿರಬೇಕು. ಕೋರ್ಟ್ -ಕಛೇರಿ ಎಂದು ಸಾಕಷ್ಟು ಕಿರಿಕಿರಿಯಾಗುತ್ತಿದೆಯಲ್ಲವೆ ?

★ ಇದು ಕಿರಿಕಿರಿಯ ವಿಷಯವಲ್ಲ ಹೆಮ್ಮೆಯ ಸಂಗತಿ.

ಹೆಣ್ಣಿಗಾಗಿ ಸತ್ತವರೊಂದು ಕೋಟಿ
ಹೊನ್ನಿಗಾಗಿ ಸತ್ತವರೊಂದು ಕೋಟಿ
ಮಣ್ಣಿಗಾಗಿ ಸತ್ತವರೊಂದು ಕೋಟಿ
ನಿನಗಾಗಿ ಸತ್ತವರನಾರನೂ ಕಾಣೆ ಗುಹೇಶ್ವರ !

ಎನ್ನುತ್ತಾರೆ ಅಲ್ಲಮ ಪ್ರಭುಗಳು. ಹೆಣ್ಣು-ಹೊನ್ನು-ಮಣ್ಣಿಗಾಗಿ ಕೋಟಿ ಕೋಟಿ ಜನರು ಸಾಯುವರು. ಅವರೆಲ್ಲ ಸತ್ತಾಗ ಪೂರ್ತಿ ಸತ್ತು ಹೋಗುವರು. ಆದರೆ ಯಾರು ದೇವನಿಗಾಗಿ ಶ್ರಮಿಸುವರೋ ಅವರು ಅಮರರಾಗುವರು. ಅನೇಕ ಮಠಾಧೀಶರು ಕೋರ್ಟ್‌ಗಳಲ್ಲಿ ದಾವೆ ಮಾಡುವುದುಂಟು, ದಾವೆ ನಡೆಸುವುದುಂಟು. ಅದು ಅನ್ಯರ ಆಸ್ತಿಯನ್ನು ಕಬಳಿಸಲಿಕ್ಕೆ ಅಥವಾ ತಮ್ಮ ಆಸ್ತಿಯನ್ನು ಉಳಿಸಿಕೊಳ್ಳಲಿಕ್ಕೆ. ನಾವು ಹೋರಾಡುತ್ತಿರುವುದು ಲಿಂಗದೇವನ ಲೀಲೆಯನ್ನು ಮೆರೆಸಲಿಕ್ಕೆ ! ಇದು ಸಾಮಾನ್ಯ ಭಾಗ್ಯವೆ ? ಇದಕ್ಕೆ ಹೆಮ್ಮೆ ಪಡಬೇಕು. ಇವನ್ನೆಲ್ಲ ಕಿರಿಕಿರಿ ಎಂದು ತಿಳಿಯಬಾರದು.

-ಬಿ.ಎಂ.ರುದ್ರಶೆಟ್ಟಿ, ಹಾಸನ. ರಾಷ್ಟ್ರೀಯ ಬಸವ ದಳದ ಕೆಲವು ಜನರು ಬಸವ ಕೇಂದ್ರದ ಕಾರ್ಯಕ್ರಮಕ್ಕೆ ಹೋಗುವರು ; ಅವರ ಕೆಲವು ಜನರು ನಮ್ಮಗಳ ಕಾರ್ಯಕ್ರಮಕ್ಕೆ ಬರುವರು. ಹೀಗೆ ಎಲ್ಲಾ ಕಡೆ ಆದರೆ ಒಳ್ಳೆಯದಲ್ಲವೆ ?

★ ಉತ್ತಮ ಸಂಸ್ಕಾರದ ಕೆಲವರು ಅಪರೂಪಕ್ಕೆ ಬಂದು ಸೇರಿರುವ ಬಸವ ಕೇಂದ್ರ ನಿಮ್ಮೂರನ್ನು ಸೇರಿ ಎರಡು ಮೂರೋ ಇದ್ದರೆ ಹೆಚ್ಚಾದೀತು. ಉಳಿದ ಕಡೆ ನೋಡಿದಾಗ ಏನು ಅವರ ಸಂಸ್ಕಾರ, ನಡೆ-ನುಡಿ, ಬೈಗುಳ, ಅವಾಚ್ಯ ಶಬ್ದಗಳು, ಗೂಂಡಾಗಿರಿ, ಅನಾಗರೀಕತೆ ! ಅಂಥ ಜನರ ಜೊತೆ ಸಖ್ಯವೆ, ಸಾಮರಸ್ಯವೇ ? ಹಣಕ್ಕಾಗಿ ಯಾವ ಕೆಲಸ ಮಾಡಲೂ ಹೇಸದ ಜನರೇ ಹೆಚ್ಚು ಸೇರಿದ್ದಾರೆ. ಜಹಿರಾಬಾದ್‌ನಲ್ಲಿ ಮಾಡಿಟ್ಟ ಅಡಿಗೆಯಲ್ಲಿ ಸಗಣಿ ಕಲಸಿದರು ; ಇತರರ ವಿವಾಹಗಳಂತಹ ಮಂಗಲ ಸಮಾರಂಭಗಳಲ್ಲಿ ಹೋಗಿ ಅಮಂಗಲ ವರ್ತನೆ ಮಾಡುವ ಅನಾಗರೀಕ ಜನರು. ಪ್ರವಚನ ಕೇಳಿ, ಪ್ರಾರ್ಥನೆಯಲ್ಲಿ ಆಸಕ್ತರಾಗಿ, ಮಾನಸ ಸರೋವರದಲ್ಲಿ ತೇಲುವ ಹಂಸ ಪಕ್ಷಿ, ಕೆಸರಿನಲ್ಲಿ ಮುಳುಗೇಳುವ ಬಾತುಕೋಳಿಯೊಡನೆ ಸಖ್ಯ ಮಾಡಿದಂತೆ, ಅಂಥ ಮಟ್ಟದ ಜನರೊಡನೆ ಬೆರೆಯುವುದೇ ಬೇಡ. ಧರ್ಮಪಿತರೇ ಹೇಳಿಲ್ಲವೆ ?

ಅರೆ ಭಕ್ತರಾದವರ ನೆರೆ ಬೇಡ ಹೊರೆ ಬೇಡ
ದಾರಿ ಸಂಗಡ ಬೇಡ, ದೂರ, ನುಡಿಯಲು ಬೇಡ
ಲಿಂಗದೇವನ ಶರಣರಲ್ಲಿ ಅಚ್ಚಲಿಂಗೈಕ್ಯಂಗೆ
ತೊತ್ತಾಗಿಹುದಯ್ಯ.

-ಓರ್ವ ಮುಖಂಡರು. ಚಾಮರಾಜನಗರ - ನಿಮ್ಮ ಪ್ರವಚನ ಕೇಳಿ, ಪುಸ್ತಕ ಓದಿ, ಕೆಸೆಟ್ಟು ಕೇಳಿದರೆ ನಿಮ್ಮ ವಿಚಾರ ನೂರಕ್ಕೆ ನೂರು ಸತ್ಯ ಎನಿಸುತ್ತದೆ. ಆದರಿಷ್ಟೆ, ''ಲಿಂಗಾಯತ ಪದ ಒಂದೇ ಇರಲಿ, ವೀರಶೈವ ಬೇಡ ; ಲಿಂಗಾಯತ ಧರ್ಮದ ದೇವರು ಲಿಂಗದೇವರು.'' ಇವನ್ನು ಇನ್ನಷ್ಟು ನಿಧಾನವಾಗಿ, ಹಂತಹಂತವಾಗಿ ಹೇಳುವುದು ಒಳ್ಳೆತಲ್ಲವೆ ?

★'' ಆಲಸ್ಯಂ ಅಮೃತಮ್ ವಿಷಂ'' ಎಂಬೊಂದು ಮಾತಿದೆ. ಆಲಸ್ಯದಿಂದ ಅಮೃತವೂ ವಿಷವಾಗುತ್ತದೆ. ಸತ್ಯವನ್ನು ಹೇಳುವುದರಲ್ಲಿ ನಿಧಾನ ಮಾಡಿದಷ್ಟೂ ಒಳ್ಳೆಯ ವಿಚಾರಗಳೂ ನಾಶವಾಗುತ್ತವೆ. ನಾವು ಸತ್ಯವನ್ನು ಜನರ ಎದುರಿಗೆ ಇಟ್ಟು, ಅದನ್ನು ಅರಿತುಕೊಳ್ಳುವಂತೆ ಜನರ ಮನಸ್ಸನ್ನು ತರಬೇತಿಗೊಳಿಸಬೇಕೇ ವಿನಾ ಜನರು ಕೆಲವರಿಗೆ ಅರ್ಥವಾಗದೆಂದು ಸತ್ಯವನ್ನು ನಿಸ್ತೇಜಗೊಳಿಸಬಾರದು. ಹೈ ಜಂಪ್ ಮಾಡುವಾಗ ಒಂದು ಅಡ್ಡ ಕೋಲನ್ನು ಇಡುತ್ತಾರೆ. ಆಟಗಾರ ಅದರ ಮೇಲೆ ಹಾರಬೇಕು. ಆಟಗಾರನಿಗೆ ಹಾರಲು ಸಾಧ್ಯವಾಗದೆಂದು ಅಡ್ಡಕೋಲನ್ನು ಇಳಿಸುವುದಿಲ್ಲ. ಕ್ರೈಸ್ತ, ಇಸ್ಲಾಂ, ಸಿಖ್ ಸಮಾಜದಲ್ಲಿ ಅವರು ತಮ್ಮ ಧರ್ಮಗ್ರಂಥಗಳನ್ನಿಟ್ಟು ಅದರಂತೆ ನಡೆಯಲು ಹೇಳಿದರೇ ವಿನಾ, ಜನರಿಗೆ ಆಗದೆಂದು ಸ್ವೇಚ್ಛೆಗೆ ಅವಕಾಶ ನೀಡಿಲ್ಲ.

- ಬಿ.ಎಂ.ರುದ್ರಶೆಟ್ಟರು, ಹಾಸನ- ''ಬಸವಣ್ಣನವರು, ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ ? ಎಂದರು. ಬೈದವರನ್ನು ಬಂಧುಗಳು ಎಂದರು. ಬಸವ ತತ್ತ್ವ ಹೇಳುವ ಮಾತಾಜಿಯವರು ಏಕೆ ಉಳಿದವರ ಟೀಕೆಗಳಿಗೆ ಕಲ್ಯಾಣ ಕಿರಣದಲ್ಲಿ ಉತ್ತರ ಕೊಡಬೇಕು.'' ಎಂದು ಕೆಲವು ನಮ್ಮ ಮಿತ್ರರು ಕೇಳುತ್ತಾರೆ.

★ ಕಲ್ಯಾಣ ಕಿರಣದಲ್ಲಿ ಅನ್ಯರ ಟೀಕೆಗೆ ಕೊಡುವ ನಮ್ಮ ಉತ್ತರ ವಸ್ತುನಿಷ್ಠವಾಗಿ, ತಾತ್ತ್ವಿಕವಾಗಿ, ಉದ್ಬೋಧಕವಾಗಿ ಇರುತ್ತವೆ. ಎರಡನೆಯದಾಗಿ ನಾವಾಗಿ ಯಾರನ್ನೂ ತಡವಲು ಹೋಗುವುದಿಲ್ಲ. ಇತರರು ಎರಗಿದಾಗ ಸುಮ್ಮನೆ ಕೂರುವ ಹೇಡಿತನ ಒಪ್ಪುವುದಿಲ್ಲ. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ಕೊಡು ಎಂದು ಹೇಳಿದ ಏಸುಕ್ರಿಸ್ತರ ದಾರಿ, ತನಗೆ ಮುನಿವವರಿಗೆ ತಾ ಮುನಿಯಲೇಕೆ ? ಎಂಬ ಬಸವ ವಾಣಿ ಆ ಮಹಾಪುರುಷನಿಗೆ ರಿಸರ್ವ್ ಇಟ್ಟು ನಾವು ಮಡಿವಾಳ ಮಾಚಿದೇವರ ಗಣಾಚಾರದ ದಾರಿ ಆಯ್ದುಕೊಂಡಿದ್ದೇವೆ. ಅದಕ್ಕೆ ಅವ್ವ ನೀಲಾಂಬಿಕೆಯ ಸಮ್ಮತಿ ಇದೆ.

ನಾರಿ ಒಬ್ಬಳು ಬಂದು ಭಾರಿ ಅಬ್ಬರ ಹೊತ್ತು
ಆರೂಢ ಭಿಕ್ಷವ ಬೇಡ್ಯಾಳು । ನಮ್ಮ
ವೀರ ಬಸವಣ್ಣ ಬರುವಾಗ ಸುವ್ವಿ ॥

ಈಗ ಉದಿಸಿರುವ (ತತ್ವ)ವರು ವೀರ ಬಸವಣ್ಣ ! ನಿಮ್ಮ ಮಿತ್ರರ ಮಾತು ಹೇಗಿದೆ ಎಂದರೆ ಮನೆಗೆ ನುಗ್ಗಿ ದರೋಡೆ ಮಾಡಿದವರದು ತಪ್ಪಲ್ಲ ; ದರೋಡೆಯಾಗಿದೆ ಎಂದು ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟವರದು ತಪ್ಪು ಎಂಬಂತಿದೆ. ದೌರ್ಜನ್ಯಕ್ಕೆ ಬಲಿಯಾಗಿ ನೊಂದವರು ಈ ಸತ್ಯ ಸಂಗತಿಯನ್ನು ಜನತೆಯ ಮುಂದೆ ಬಿಚ್ಚಿಡುವುದೂ ತಪ್ಪೆ ?

-ಇಂದು ಶೇಖರ್, ಬಸವೇಶ್ವರ ನಗರ, ಬೆಂಗಳೂರು - ಡಾ॥ ಚಿದಾನಂದಮೂರ್ತಿಯವರ ಪತ್ರಿಕಾ ಹೇಳಿಕೆಗಳನ್ನು ಇಂದಿನ (೧೯-೪-೨೦೦೦) ಪತ್ರಿಕೆಗಳಲ್ಲಿ ಗಮನಿಸಿದೆವು. ವೀರಶೈವವು ಹಿಂದು ಧರ್ಮದ ಅಂಗ ಎಂದಿದ್ದಾರೆ. ಬಸವಣ್ಣನವರಿಗೂ ಪೂರ್ವದಲ್ಲಿ ಇತ್ತು ಎಂದಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು ?.

★ ಎರಡು ವಿಷಯಗಳಲ್ಲಿ ಡಾ॥ ಚಿ.ಮೂ. ಅವರೊಡನೆ ನಮಗೆ ಸಂಪೂರ್ಣ ಸಹಮತವಿದೆ. ೧. ಅದು ಬಸವ ಪೂರ್ವದ್ದು. ೨. ಹಿಂದು ಧರ್ಮದ ಅಂಗ. ಆದರೆ ಬಾಕಿ ಎಲ್ಲ ವಿಷಯಗಳಲ್ಲೂ ನಮ್ಮ ನಿಲುವು ಬೇರೆ. ವೀರಶೈವವು ಬಸವ ಪೂರ್ವದ ಒಂದು ಪಂಥ, ಶೈವದ ಸಪ್ತ ಶಾಖೆಗಳಲ್ಲೊಂದು. ಅದು ವೇದ, ಆಗಮ, ಶ್ರುತಿ ಪುರಾಣಾಧಾರಿತವಾದ್ದರಿಂದ ಹಿಂದು ಧರ್ಮದ ಒಂದು ಅಂಗ.

ಆದರೆ ಲಿಂಗಾಯತವು ಒಂದು ಸ್ವತಂತ್ರ ಧರ್ಮ. ಧರ್ಮಪಿತ ಬಸವಣ್ಣನವರಿಂದ ಕೊಡಲ್ಪಟ್ಟುದು. ಈ ಧರ್ಮವು ವೇದಾಗಮ ಶ್ರುತಿಸ್ಮೃತಿ ಪುರಾಣಗಳ ಆಧಾರವನ್ನು ಒಪ್ಪದಿರುವುದರಿಂದ ಇದು ಹಿಂದು ಒಂದು ಧರ್ಮ ಎಂದು ನಿರ್ಧರಿಸಿದರೆ ಆಗ ಲಿಂಗಾಯತವು ಅಹಿಂದು ಧರ್ಮವಾಗುತ್ತದೆ. ಡಾ॥ ಚಿ.ಮೂರವರು ಒಂದು ರೀತಿ ಅತಂತ್ರರಾಗಿದ್ದಾರೆ. ಬಸವಣ್ಣನ ಕೊಡುಗೆಯಾದ ಲಿಂಗಾಯತ ಧರ್ಮಕ್ಕೆ ಅವರೇ ಆದ್ಯರೆಂಬುದನ್ನು ಒಪ್ಪುವ ಪ್ರಾಮಾಣಿಕತೆ ಇಲ್ಲ. ಇನ್ನು ವೀರಶೈವವು ಪಂಚಾಚಾರ್ಯರಾದ ರೇಣುಕಾಚಾರ್ಯ ಮುಂತಾದವರ ಕೊಡುಗೆ ಎನ್ನಲು ಧೈರ್ಯವಿಲ್ಲ. ಏಕೆಂದರೆ ಅವರು ಐತಿಹಾಸಿಕ ವ್ಯಕ್ತಿಗಳೆಂದು ಹೇಳುವ ಧೈರ್ಯವನ್ನು ಯಾವ ಸಂಶೋಧಕರೂ ಮಾಡಲಾರರು. ಹಾಗೆ ಹೋದರೆ ''ಕಳ ಹೋಗಿ ಕೆಮ್ಮಿ ಸತ್ತಂತೆ '' ತಾಪತ್ರಯವಾಗುತ್ತದೆ. ಎಂದು ಅವರಿಗೆ ಗೊತ್ತಿದೆ. ವೀರಶೈವವನ್ನು ಹಿಡಿದುಕೊಂಡು ಗಿಂಜಾಡುವ ಚಿ.ಮೂ. ಅವರು ಶರಣರನ್ನು ವೀರಶೈವದೊಡನೆ ಗಂಟುಹಾಕುವುದು ಮಾತ್ರ ಖಂಡನಾರ್ಹ ತಪ್ಪು.

★

೨೦೦೧ನೆಯ ಇಸವಿಯಲ್ಲಿ ಜನಗಣತಿ ಬರುತ್ತಿದ್ದು ಲಿಂಗಾಯತ ಧರ್ಮೀಯರು ಕಾಲಮ್ ನಂ.೮ **Religion** ಧರ್ಮ ಎಂದಿದ್ದಲ್ಲಿ ಲಿಂಗಾಯತ ಎಂದೇ ಬರೆಸಬೇಕು. ಈ ವಿಷಯವನ್ನು ಈ ವರ್ಷ (೨೦೦೦) ನೀವು ಮುದ್ರಿಸುವ ವಿವಾಹ ಆಮಂತ್ರಣ, ಗೃಹಪ್ರವೇಶ ಮುಂತಾದ ಎಲ್ಲ ಕರಪತ್ರ, ಆಹ್ವಾನ ಎಲ್ಲ ಕರಪತ್ರ, ಆಹ್ವಾನ ಪತ್ರಗಳಲ್ಲಿ ಮುದ್ರಿಸಿ ಪ್ರಚಾರಮಾಡಿರಿ.

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೇಪಿಸಿ,
ನಿಮ್ಮ ಬಂಧು-ಮಿತ್ರರಿಗೆ ಉಡುಗೊರೆಯಾಗಿ ಕಳಿಸಿರಿ

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ..

"ಹೇ ಪರಮಾತ್ಮಾ" ಪದ್ಯ ಕುರಿತು

ಏಪ್ರಿಲ್ ಕಲ್ಯಾಣ ಕಿರಣದ ಮೊದಲನೆಯ ಪುಟದಲ್ಲಿ **"ಹೇ ಪರಮಾತ್ಮಾ ಲೋಕದ ಮಿತ್ರ"** ಹಾಡನ್ನು ಕೊಟ್ಟಿದ್ದೆ. ನಾನು ಬರೆದ ಗೀತೆಗಳಲ್ಲಿ ಅತ್ಯಂತ ಜನಪ್ರಿಯವಾಗಿ ದಿನ ನಿತ್ಯ ಹಾಡಲ್ಪಡುವ ಗೀತೆಗಳೆಂದರೆ, ಹೇ ಪರಮಾತ್ಮಾ ಎಂಬ ದೇವ ಪ್ರಾರ್ಥನೆ, ಮುಕ್ತಿದಾಯಕ-ಬಸವಪ್ರಾರ್ಥನೆ, ಓಂ ಗುರು ಬಸವ ಪ್ರಭು ಎಂಬ ಮಂಗಲಗೀತೆ. ಹೇ ಪರಮಾತ್ಮಾದಲ್ಲಿ ಇನ್ನೊಂದು ಚರಣ ೪ ವಾಕ್ಯಗಳದ್ದು ನನಗೆ ಪ್ರೇರಣೆಯಾಗಿ ಬರೆದು, ಇದನ್ನು ಅಳವಡಿಸಿದರೆ ಹೇಗೆ ಎನ್ನಿಸಿ ಕಲ್ಯಾಣಕಿರಣದಲ್ಲಿ ಅಭಿಪ್ರಾಯ ಕೇಳಿದ್ದೆ.

ವೇದಾಂತಿಗಳು ಪರಬ್ರಹ್ಮನೆಂಬರು
ಆಗಮಿಕರು ಪರಶಿವನೆಂಬರು
ಅಲ್ಲಹ ಯಹೋವ ಸುಪ್ರೀಂ ಗಾಡ್
ಲಿಂಗದೇವಾ ನಿನ್ನಯ ಹೆಸರು ॥ ಪದ್ಯ ೩

ಈ ಬಗ್ಗೆ ಭಾನುವಾರದಂದು ಬಸವ ಮಂಟಪದಲ್ಲಿ ಸ್ವಾರಸ್ಯಕರ ಚರ್ಚೆಯಾಯಿತು. ಪತ್ರದ ಮೂಲಕ ತಿಳಿಸಿದವರು, ಚರ್ಚೆಯಲ್ಲಿ ಅಭಿಪ್ರಾಯ ನೀಡಿದವರಲ್ಲಿ ಈ ಪದ್ಯವನ್ನು ಸೇರಿಸಬೇಕು ಎಂಬುವವರ ಸಂಖ್ಯೆಯೇ ಜಾಸ್ತಿಯಾಯಿತು. ಬೇಡ ಎಂದವರು ಮುಖ್ಯವಾಗಿ ಮೂರು ಕಾರಣ ಮುಂದಿಟ್ಟರು

೧. ಈಗಾಗಲೇ ರೂಢಿಯಾಗಿ ದಿನ ನಿತ್ಯ ಹಾಡುತ್ತಿದ್ದೇವೆ ; ಮತ್ತೆ ಬದಲಾವಣೆ ಮಾಡಿದರೆ ರೂಢಿಗೆ ತರುವುದು ಕಷ್ಟ.

೨. ನಾವೇಕೆ ಮುಸಲ್ಮಾನರ ದೇವರು ಅಲ್ಲಹನನ್ನು, ಕ್ರೈಸ್ತರ ದೇವರು ಯಹೋವಾನನ್ನು ಸ್ಮರಿಸಬೇಕು. ನಾವು ಸ್ಮರಿಸಿಕೊಂಡಂತೆ ಮುಸಲೀಮರು, ಕ್ರೈಸ್ತರು ನಮ್ಮ ದೇವರನ್ನು ಸ್ಮರಿಸುವರೆ ?

೩. ನಮ್ಮ (ಲಿಂಗಾಯತ ಧರ್ಮ) ದೇವರು ಸರ್ವವ್ಯಾಪಿ, ಸರ್ವಶಕ್ತ ; ಇಸ್ಲಾಂ, ಕ್ರೈಸ್ತರ ದೇವರು ಪರಲೋಕವಾಸಿ, ನಮ್ಮ ಧರ್ಮವು ಸಸ್ಯಾಹಾರಿ, ಅಹಿಂಸಾಧರ್ಮ. ಅವರವು ಮಾಂಸಾಹಾರ ಹೇಳುವ ಹಿಂಸಾತ್ಮಕ ಧರ್ಮಗಳು. ಆದ್ದರಿಂದ ಸರಿಗಟ್ಟಿ ಮಾತನಾಡಬಾರದು.

ಮೊದಲ ಸಂದೇಹಕ್ಕೆ ಉತ್ತರ ಏನೆಂದರೆ, ಮೊದಲು ಈ ಪ್ರಾರ್ಥನಾ ಗೀತೆಯನ್ನೇ ತಿಳಿದಿರಲಿಲ್ಲ, ಕಲಿತಿರಲಿಲ್ಲ. ನಂತರ ಪಲ್ಲವಿ, ಅನುಪಲ್ಲವಿ ೫ ಚರಣಗಳನ್ನು ಕಲಿತವರಿಗೆ ಇನ್ನೂ ೪ ವಾಕ್ಯಗಳ ಇನ್ನೊಂದು ಚರಣ ಕಲಿಯುವುದು ಕಷ್ಟವೆ ?

ಎರಡನೆಯ ಸಂದೇಹಕ್ಕೆ ಉತ್ತರ : ಇನ್ನೂ ಅನೇಕರಿಗೆ ಎಷ್ಟು ಸಲ ಹೇಳಿದರೂ ದೇವರ ಸ್ವರೂಪ ಅರ್ಥವೇ ಆಗುತ್ತಿಲ್ಲ. ಕೇವಲ ಕುಲದೈವ (Clan gods) ಬಣ ದೈವ (tribal gods)ಗಳು ಬೇರೆ ಬೇರೆ ಜಾತಿಕುಲಗಳಿಗೆ ಬೇರೆ ಬೇರೆ ಇರುತ್ತವೆ. ಆದರೆ ಸೃಷ್ಟಿಕರ್ತನಾದ ದೇವರು ಮುಸಲೀಮರಿಗೆ ಬೇರೆ, ಕ್ರೈಸ್ತರಿಗೆ ಬೇರೆ, ಲಿಂಗಾಯತರಿಗೆ ಬೇರೆ, ಹಿಂದುಗಳಿಗೆ ಬೇರೆ ಇರುವುದುಂಟೆ ? ಇರುವವನು ಒಬ್ಬನೇ ದೇವರು. ಅವನಿಗೆ ನಾಮ ಹಲವು. ವೇದಾಂತದಲ್ಲಿ **ಪರಬ್ರಹ್ಮ** ಎಂದು, ಆಗಮಗಳಲ್ಲಿ **ಪರಶಿವ**ನೆಂದು, ಅರಾಬಿಕ್ ಭಾಷೆಯಲ್ಲಿ **ಅಲ್ಲಹ** ಎಂದು, ಹೀಬ್ರೂದಲ್ಲಿ **ಯಹೋವ**ನೆಂದು, ಆಂಗ್ಲ ಭಾಷೆಯಲ್ಲಿ **GOD** ಎಂದು ಕರೆಯಲಾದರೆ ಲಿಂಗಾಯತ ಧರ್ಮ ಸಿದ್ಧಾಂತವು **'ಲಿಂಗದೇವ'** ಎಂದು ಕರೆದಿದೆ. ಒಬ್ಬ ದೇವನಿಗೆ ಈ ಎಲ್ಲ ಹೆಸರುಗಳು ಎಂದು ಹೇಳಲಾಗಿದೆಯೇ ವಿನಾ ಇವೆಲ್ಲ ಬೇರೆ ಬೇರೆ ಜನಾಂಗದ ದೇವರುಗಳಲ್ಲ.

ಪ್ರತಿ ಧರ್ಮದಲ್ಲಿಯೂ ಮತಾಂಧರು-ಉದಾರವಾದಿಗಳು ಎಂದು ಎರಡು ಪ್ರಕಾರವಾಗಿ ಇರುತ್ತಾರೆ. ಮತಾಂಧರು ಎಂದೂ ಇನ್ನೊಬ್ಬರ ವಿಚಾರಧಾರೆಯನ್ನು ಗೌರವಿಸುವುದಿಲ್ಲ. ಆದ್ದರಿಂದ

ಅವರನ್ನೇ ಗಮನದಲ್ಲಿಟ್ಟುಕೊಂಡು ನಾವು ವರ್ತಿಸಬಾರದು. ಉದಾತ್ತ ವಿಚಾರಗಳನ್ನು ಬಿತ್ತಿ ಬೆಳೆಸಬೇಕು.

೩. ಈಗ ಮಾತನಾಡುತ್ತಿರುವುದು ದೇವರನ್ನು ಕುರಿತು. ಸಮಾಜ ಶಾಸ್ತ್ರ, ನೀತಿಶಾಸ್ತ್ರ ಸಂಪ್ರದಾಯ, ಆಚರಣೆ, ವಿಧಿ ವಿಧಾನ ಕುರಿತು ಅಲ್ಲ. ಆದ್ದರಿಂದ ಆಹಾರ ಪದ್ಧತಿ, ನೀತಿಯ ಪರಿಕಲ್ಪನೆ ಮುಂತಾದವುಗಳನ್ನು ಹೋಲಿಸಲು ಹೋಗಬಾರದು. ಇನ್ನು ದೇವರ ಸ್ವರೂಪವನ್ನೇ ತೆಗೆದುಕೊಂಡರೆ ವ್ಯಕ್ತ-ಅವ್ಯಕ್ತ, ಸರ್ವವ್ಯಾಪಿ-ಪರಂಧಾಮುವಾಸಿ ಇವೆಲ್ಲ ಸಿದ್ಧಾಂತಕ್ಕೆ ಸಂಬಂಧಪಟ್ಟವು. ಇದಾವುದನ್ನು ಚರ್ಚಿಸದೆ ದೇವರು ಅರ್ಥಾತ್ ಸೃಷ್ಟಿಕರ್ತನನ್ನು ಹೇಗೆ ವಿವಿಧ ಧರ್ಮಗಳವರು ಕರೆದಿದ್ದಾರೆ ಎಂಬುದನ್ನಷ್ಟೆ ಈ ಗೀತೆಯಲ್ಲಿ ಪ್ರಸ್ತಾಪಿಸಲಾಗಿದೆ.

ಎಲ್ಲರಿಗೂ ಸಮಾನವಾದ ಕರ್ತನನ್ನು ಕುರಿತು ಪ್ರಾರ್ಥನೆ, ಭಜನೆಯಲ್ಲಿ ೨ ಪದಗಳನ್ನು ಬಳಸಲಾಗುತ್ತಿದೆ. ೧. ಗಾಂಧೀಜಿ ಹೇಳಿದಂತಹ

ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಹ ತೇರೇ ನಾಮ್, ಸಬಕೋ ಸನ್ಮತಿ ದೇ ಭಗವಾನ್

ಇದು ತಾತ್ವಿಕ ದೋಷದಿಂದ ಕೂಡಿದೆ. ಈಶ್ವರ ಎಂಬ ಪದವನ್ನು ತತ್ವಶಾಸ್ತ್ರದಲ್ಲಿ ಶಿವ ಎಂಬರ್ಥದಲ್ಲಿ ಬಳಸದೆ ಸೃಷ್ಟಿಕರ್ತ ಎಂದು ಬಳಸುವರು. ಆಗ ಈಶ್ವರ-ಅಲ್ಲಹ ಒಂದೇ ಅರ್ಥ ಕೊಡುತ್ತವೆ. ಅದೇ ರೀತಿ ನಿರಾಕಾರದ ಅರ್ಥದಲ್ಲಿ ತೆಗೆದುಕೊಂಡರೆ ರಾಮ್ ಸಹಿತ ಉದಾತ್ತ ಅರ್ಥ ಕೊಡುತ್ತದೆ. ಆದರೆ ರಘುಪತಿ, ರಾಘವ, ರಾಜ, ಸೀತಾಪತಿ ರಾಮ್ ಎನ್ನುತ್ತಲೇ ಸೃಷ್ಟಿಕರ್ತನ ಪರಿಕಲ್ಪನೆ ಬಿದ್ದು ಹೋಗುತ್ತದೆ.

೨. ಯಂ ಶೈವಮುಪಾಸತೆ ಶಿವ ಇತಿ ಬ್ರಹ್ಮೇತಿ ವೇದಾಂತಿನೋ

ಎಂಬ ಪದ್ಯದಲ್ಲಿ ಶಿವ, ಬ್ರಹ್ಮ, ಕರ್ತ ಎಲ್ಲ ಸರಿ, ಬೌದ್ಧರು ಬುದ್ಧನೆಂದು ಕರೆಯುತ್ತಾರೆ ಎಂದು ಕರ್ತನೊಡನೆ ಸಮೀಕರಿಸ ಹೋದರೆ ದೇವರ ಕಲ್ಪನೆ ನೆಲ ಕಚ್ಚುತ್ತದೆ.

ಈ ಎಲ್ಲ ದೋಷ ಪರಿಹರಿಸುವಂತೆ, ಶಾಲೆಗಳಲ್ಲಿ, ಎಲ್ಲ ಧರ್ಮದವರೂ ಪ್ರಾರ್ಥನೆ ಮಾಡಲು ಅನುಕೂಲವಾಗುವಂತೆ 'ಹೇ ಪರಮಾತ್ಮಾ' ಇದೆ. ಈಗಿರುವ ೫ ಪದ್ಯಗಳೂ ತುಂಬಾ ಉತ್ತಮವಾಗಿರುವುದು ಸತ್ಯವಾದರೂ ಈಗ ಹೊಸದಾಗಿ ಸೇರಿಸಬೇಕೆಂದು ಸ್ಫುರಣಗೊಂಡಿರುವ ಚರಣ(ಪದ್ಯ)ವು ಇನ್ನೂ ಹೆಚ್ಚಿನ ಅರ್ಥವನ್ನೂ, ತೂಕವನ್ನು ತಂದುಕೊಡುತ್ತವೆ ಎಂದೇ ನಮ್ಮ ಅಭಿಪ್ರಾಯ.

ಎರಡೂ ಬಗೆಯ ಅಭಿಪ್ರಾಯಗಳನ್ನು ಸಂಗ್ರಹಿಸುವಾಗ ನಾನು ಗಮನಿಸಿದುದು ಕೆಲವು ಅಂಶಗಳೆಂದರೆ ತತ್ವನಿಷ್ಠರು ಏಕದೇವೋಪಾಸಕರು, ಒಂದು ತತ್ವವನ್ನು ಪ್ರತಿಪಾದನೆ ಮಾಡಿ ಇತರರ ಮನವೊಲಿಸುವ ಸಾಮರ್ಥ್ಯವಿರುವವರು ಈ ಪದ್ಯವನ್ನು ಸೇರಿಸಬೇಕು ಎಂದು ಅಭಿಪ್ರಾಯಪಟ್ಟರೆ ಬಹುದೇವತೋಪಾಸನೆ ಅಂಧಶ್ರದ್ಧೆ ತೊರೆಯಲಾರದವರು, ತಮ್ಮ ಪತ್ನಿ ಕುಟುಂಬವರ್ಗದವರನ್ನು, ಸುತ್ತಲಿನವರನ್ನು ಮನವೊಲಿಸಲಾರದವರು ಪದ್ಯವನ್ನು ಸೇರಿಸುವುದು ಅಗತ್ಯವಿಲ್ಲ ಎಂದು ಅಂದಿದ್ದಾರೆ. ಅವರೆಲ್ಲರ ಅಭಿಪ್ರಾಯ 'ಈಗಿರುವಂತೆಯೇ ಗೀತೆಯು ಶಕ್ತಿಶಾಲಿ (powerful) ಆಗಿದೆ ; ಪೂರ್ಣ (complete) ಆಗಿದೆ' ಇದನ್ನು ನಾನೂ ಒಪ್ಪುವೆ, ಆದರೆ ಆ ಪದ್ಯವನ್ನು ಸೇರಿಸಿದರೆ ಈ ಗೀತೆಯು (superpowerful) ಅತ್ಯಂತ ಶಕ್ತಿಶಾಲಿಯು ಪರಿ-ಪೂರ್ಣ (perfect) ಆಗಿ ಲಿಂಗಾಯತೇತರರ ಗಮನವನ್ನು ಸೆಳೆಯಬಲ್ಲದು ಎಂದು ನನ್ನ ಭಾವನೆ. ಜೊತೆಗೆ ಧರ್ಮಪಿತ ಬಸವಣ್ಣನವರು ಪ್ರೀತಿಯಿಂದ ದೇವರನ್ನು ಸಂಬೋಧಿಸಿದ ಪದ **'ಲಿಂಗದೇವ'** ವಿಶ್ವದ ತತ್ವಜ್ಞಾನಿಗಳನ್ನು, ದಾರ್ಶನಿಕರನ್ನು ಆಕರ್ಷಿಸುವುದು ಎಂದು ನನ್ನ ಅಭಿಪ್ರಾಯ ★

ಗುರುಮಹಿಮೆಯ ವಚನಗಳು

೧. ಗುರುಮಾತೆಯ ಹಸ್ತ ಎನ್ನ ಮಸ್ತಕದ ಮೇಲಿರಲು
ಎನ್ನ ಮನದ ಬಯಲಲ್ಲಿ ತಂಗಾಳಿ ಸುಳಿಯುವುದ ಕಂಡೆ
ಎನ್ನ ಭಾವದ ಬಯಲಲ್ಲಿ ಹುಣ್ಣಿಮೆಯ ಚಂದ್ರನ ಕಂಡೆ
ಎನ್ನ ಅಂತರಂಗದ ಬಯಲು ನಿಸ್ತರಂಗವಾದುದ ಕಂಡೆ
ಎನ್ನ ನಿಸ್ತರಂಗದಂತರಂಗದ ಹುಣ್ಣಿಮೆಯ ಬೆಳಕಲ್ಲಿ
ಬಸವಲಿಂಗ ಪ್ರಭುವಿನ ಪಾದ ಪರುಷವ ಕಂಡೆ
ವನಜಾಪ್ರಿಯ ಬಸವಾತ್ಮಜೆಯ ಮಹತ್ವವನರಿದು ಸುಖವ ಸೂರೆಗೊಂಡೆ.

೨. ಗುರುತಾಯೆ ಮಹಾದೇವಿ ನಿಮ್ಮಿಂದ
ನಿತ್ಯ ಯಾವುದು ಅನಿತ್ಯಯಾವುದೆಂದರಿದೆ ;
ಸತ್ಯ ಯಾವುದು ಮಿಥ್ಯಯಾವುದೆಂದರಿದೆ ;
ಸುಖ ಯಾವುದು ದುಃಖ ಯಾವುದೆಂದರಿದೆ ;
ವಿವೇಕ ಯಾವುದು ಅವಿವೇಕ ಯಾವುದೆಂದರಿದೆ ;
ಜ್ಞಾನ ಯಾವುದು ಅಜ್ಞಾನಯಾವುದೆಂದರಿದೆ ;
ಗುರುತಾಯೆ ಇವುಗಳ ಭೇದವನರಿತೇನು ಫಲ
ನಿಜದಲ್ಲಿ ಅನುಷ್ಠಾನಗೈಯದೆ ?
ವನಜಾಪ್ರಿಯ ಬಸವಾತ್ಮಜೆ ಕರುಣಿಸಿ ಹರಸಿರೆನ್ನ
ನೀವು ಅರುಹಿಹ ಅರಿವ ಅನುಷ್ಠಾನಗೈಯಲೆಂದು.

೩. ಗುರುಮಾತೆ ಮಹಾದೇವಿ **ಮಾತಿನ ಮಹತ್ವವೆ !**
ಗುರುಮಾತೆ ಮಹಾದೇವಿ **ಭಾಷೆಯ ಭಾಗ್ಯವೆ !**
ಗುರುಮಾತೆ ಮಹಾದೇವಿ **ಸಾಹಿತ್ಯದ ಸತ್ಯವೆ !**
ಗುರುಮಾತೆ ಮಹಾದೇವಿ **ವಚನದ ವೈಭವವೆ !**
ಗುರುಮಾತೆ ಮಹಾದೇವಿ **ಧರ್ಮದ ಧಾತ್ರವೆ !**
ಗುರುಮಾತೆ ಮಹಾದೇವಿ **ಕಾರ್ಯದ ಕರ್ತೃವೆ !**
ಗುರುಮಾತೆ ಮಹಾದೇವಿ **ಜ್ಞಾನಾಗ್ನಿ ಕುಂಡವೆ !**
ಗುರುಮಾತೆ ಮಹಾದೇವಿ **ಸಕಲ ತತ್ವದ ಸಾರವೆ !**
ಗುರುಮಾತೆ ಮಹಾದೇವಿ **ವಿಶ್ವದ ವಿಸ್ಮಯವೆ**
ಗುರುಮಾತೆ ಮಹಾದೇವಿ ವನಜಾಪ್ರಿಯ ಬಸವಾತ್ಮಜೆ
ನಿಮ್ಮಡಿಗೆ ಅನಂತಕೋಟಿ ಶರಣು ಶರಣಾರ್ಥಿ.

ರಚನೆ : **ವನಜಾ ಶ್ರೀನಿವಾಸ್.** ಎಂ.ಎ
ಕಮಲಾನಗರ, ಬೆಂಗಳೂರು-೭೯

ಕಲ್ಯಾಣ ಕಿರಣದ ಓದುಗರೆಲ್ಲರಿಗೂ ಬಸವ ಜಯಂತಿಯ ಶುಭಾಶಯಗಳು

ಲಿಂಗಾಯತ-ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ

-ಮಾತಾಜಿ

ಕಾಡಿನಲ್ಲಿ ಕೆಲವು ವೃಕ್ಷಗಳು ಬೆಳೆದಿರುತ್ತವೆ. ಅವುಗಳ ಕೊಂಬೆಗಳನ್ನು ಸುತ್ತಿಕೊಂಡು ಕೆಲವು ಪರೋಪಜೀವಿ ಗಿಡಗಳು ಬೆಳೆಯುತ್ತವೆ. ಈ ಪರೋಪಜೀವಿಗಳಿಗೆ ತಮ್ಮದೇ ಆದ ನೀರು ಮತ್ತು ಸಾರವನ್ನು ಭೂಮಿಯಿಂದ ಎಳೆದುಕೊಳ್ಳಲು ಬೇಕಾದ ಬೇರುಗಳು ಇರುವುದಿಲ್ಲ. ಅವು ಕಳ್ಳತನ ಮಾಡುತ್ತವೆ. ತಮ್ಮ ಬೇರುಗಳನ್ನು ಪಕ್ಕದಲ್ಲಿ ಇರುವ ಸ್ವತಂತ್ರ ವೃಕ್ಷವೊಂದರ ನಾಳಗಳಲ್ಲಿ ತೂರಿಸಿ ಅಲ್ಲಿಂದ ಸಾರವನ್ನು ಹೀರಿ, ಸಂಗ್ರಹಿಸಿ ಬದುಕುತ್ತವೆ. ಈ ಪರೋಪಜೀವಿ (parasitic) ಗಿಡಗಳಲ್ಲಿ ಎರಡು ಪ್ರಕಾರ ಅರೆ ಮತ್ತು ಪೂರ್ಣ ಪರೋಪಜೀವಿ ಎಂದು. ಕೆಲವು ಪರೋಪಜೀವಿಗಳು ಮಾತೃವೃಕ್ಷಕ್ಕೆ ಯಾವುದೇ ಧಕ್ಕೆ ಮಾಡದೆ ಮಾತೃ ವೃಕ್ಷವನ್ನು ಆಶ್ರಯಿಸಿಕೊಂಡು ಬೆಳೆಯುತ್ತವೆ. ಮತ್ತೆ ಕೆಲವು ಮಾತೃವೃಕ್ಷದ ಕೊಂಬೆಗಳನ್ನು ಹಾವಿನಂತೆ ಸುತ್ತಿಕೊಂಡು, ಬಲವಾಗಿ ಬಿಗಿದು ಮಾತೃವೃಕ್ಷಕ್ಕೆ ಅಪಾರ ಹಾನಿಯನ್ನುಂಟು ಮಾಡುತ್ತವೆ. ಅರೆ ಪರೋಪಜೀವಿಗಳು ಕಳ್ಳರಂತೆ, ವಸ್ತು ಹಾನಿಯನ್ನು ಮಾಡುತ್ತವೆ. ಪೂರ್ಣ ಪರೋಪಜೀವಿಗಳು ದರೋಡೆಕೋರರಂತೆ ಜೀವಕ್ಕೆ ಎರವಾಗುತ್ತವೆ.

ಧರ್ಮಪಿತ ಬಸವಣ್ಣನವರು ಪ್ರಗತಿಪರವಾದ ಲಿಂಗಾಯತ ಧರ್ಮವನ್ನು ಕೊಟ್ಟಾಗ ಅನೇಕ ಮತ ಪಂಥಗಳವರು ವಿವಿಧ ಜಾತಿಗಳವರು ಅದರಲ್ಲಿ ಪ್ರವೇಶ ಮಾಡಿದರು. ಹಾಗೆ ಪ್ರವೇಶ ಮಾಡಿದ ಕೆಲವರು ತಮ್ಮ ಮೂಲ ಬಣಾಚರಣೆ, ಸಂಪ್ರದಾಯಗಳ ಕೊಳೆಯನ್ನು ತಂದು ಲಿಂಗಾಯತ (ಶರಣ) ಸಮಾಜದಲ್ಲಿ ಸೇರಿಸಿದರು. ಆದರೆ ವೀರಶೈವವು ಮಾಡಿದ ಅನ್ಯಾಯ ಬಹಳ. ಏಕೆಂದರೆ ಬಸವ ಪೂರ್ವದ ವೀರಶೈವಕ್ಕೆ ಸರಿಯಾದ ಸಾಮಾಜಿಕ ಭದ್ರತೆ ಇರಲಿಲ್ಲವಾಗಿ ಅದರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಬಂದರು. ಆದರೆ ವೀರಶೈವದ ಕಂದಾಚಾರ ಸಹಿತ ಮಡಿವಂತಿಕೆ, ಕುಲಾಚಾರಗಳನ್ನು, ವರ್ಣಾಶ್ರಮ ವ್ಯವಸ್ಥೆಯನ್ನು ತಂದು ತೂರಿಸಿ ಲಿಂಗಾಯತ ಧರ್ಮ ಸಮಾಜಗಳ ಶುದ್ಧಿಯನ್ನು ಕೆಡಿಸಿದರು. ತಮಗೆ ಒಂದು ವಿಶಿಷ್ಟ ಸಮಾಜ, ನೆಲೆ ಇಲ್ಲದ ಅವರು ಪರೋಪಜೀವಿ ಸಸ್ಯದಂತೆ ಇದ್ದು ನಂತರ ತಾವು ಆಶ್ರಯಿಸಿದ ಮಾತೃವೃಕ್ಷ ಲಿಂಗಾಯತ ಧರ್ಮವನ್ನು, ಸಮಾಜವನ್ನು ಬಲವಾಗಿ ಬಿಗಿದು ಕೊರೆಯತೊಡಗಿದರು. ಲಿಂಗಾಯತ ಧರ್ಮದ ಮಠಮಾನ್ಯಗಳಲ್ಲಿ ಕಾಳಾಮುಖ, ಪಾಶುಪತ, ಸಿದ್ಧ ಮುಂತಾದ ಅನೇಕ ಸಂಪ್ರದಾಯಗಳವರು ಸೇರಿದ್ದರೂ ಇಂದಿಗೂ ಅವರೆಲ್ಲರಿಗಿಂತ ಹೆಚ್ಚು ಬಾಧೆಕೊಡುತ್ತಿರುವವರು ವೀರಶೈವವಾದಿಗಳು. ವಚನ ವಾಙ್ಮಯವನ್ನು ವೈದಿಕೀಕರಣ, ಶೈವೀಕರಣಗೊಳಿಸಿ ಅದರ ಶುಚಿಯನ್ನು ಕೆಡಿಸಿದ್ದಲ್ಲದೆ ಧರ್ಮಪಿತ ಬಸವಣ್ಣನವರು ಕೊಟ್ಟ ಧರ್ಮದಲ್ಲಿ ಬಂದು ಸೇರಿದ್ದಲ್ಲದೆ ಡೇರೆಯಲ್ಲಿ ತಲೆ ಇಡಲು ಸ್ಥಳ ಕೇಳಿದ ಒಂಟೆ ಇಡೀ ಡೇರೆಯನ್ನೇ ಆಕ್ರಮಿಸಿಕೊಂಡು, ಅದನ್ನು ಕಿತ್ತುಹಾಕಿದಂತೆ ಬಸವಣ್ಣನವರೇ ವೀರಶೈವ ದೀಕ್ಷೆಯನ್ನು ಪಡೆದರೆಂದು ಅಪಪ್ರಚಾರ ಮಾಡಿ ಸಮಾಜದಲ್ಲಿ ಗಲಿಬಿಲಿ-ಗೊಂದಲಗಳನ್ನು ಉಂಟು ಮಾಡಿದರು. ವಚನ ವಾಙ್ಮಯದಲ್ಲಾಗಲೀ ಬಸವಣ್ಣನವರನ್ನು ಕುರಿತಾದ ಕಾವ್ಯಗಳಲ್ಲಾಗಲೀ ಎಲ್ಲೆಲ್ಲೂ ಬಸವಣ್ಣನವರಿಗೆ ವೀರಶೈವ ದೀಕ್ಷೆ ಆದ ದಾಖಲೆಯೇ ಇಲ್ಲ. ಯಾವುದೇ ಆಧಾರ ಇಲ್ಲದೆಯೇ ಜಾತವೇದ ಮುನಿಗಳಿಂದ ದೀಕ್ಷೆ ಆಯಿತೆಂದು ಸುಳ್ಳು ವದಂತಿ ಹಬ್ಬಿಸಿದರು. ಕ್ರಾಂತಿಪುರುಷ ಬಸವಣ್ಣನವರು ವೀರಶೈವ ದೀಕ್ಷೆಯನ್ನು ಪಡೆಯಲಿಲ್ಲ ; ಅಷ್ಟೇ ಅಲ್ಲ ಅವೆಲ್ಲವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಈ ನನ್ನ ವಾದವನ್ನು ಸ್ಪಷ್ಟೀಕರಿಸುವ ಅತ್ಯಂತ ಮಹತ್ವಪೂರ್ಣ ಒಂದು ವಚನ ಲಭ್ಯವಾಗಿದ್ದು ಇದನ್ನು ಓದುಗರ ಗಮನಕ್ಕೆ ತರಲೆಂದು ಈ ಲೇಖನವನ್ನು ಬರೆದಿದ್ದೇನೆ.

ಮೋಳಿಗೆ ಮಾರಯ್ಯನವರು, ಸಂಕೀರ್ಣ ವಚನ ಸಂಪುಟ ೩, ವಚನ ಸಂಖ್ಯೆ ೨೯೯೨

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,
ಹೊಕ್ಕು ಭಕ್ತಿಯಲ್ಲಿ, ಲೆಕ್ಕ ತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥನಾಮಮಂ ಪಡೆದು,
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ
ಸತ್ಯದ ಬಟ್ಟೆಯಂ ಕಾಣದ, ಚಿದ್ಘನಲಿಂಗವ ಹೊಗಲರಿಯದೆ,
ಬದ್ಧಕತನವನು ಸುಬದ್ಧವ ಮಾಡದೆ,
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ,
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶ ಘನಲಿಂಗ
ಕೈಯಲ್ಲಿದ್ದಂತೆ ಹೊದ್ದಿದನೇಕರುದ್ರ ಮೂರ್ತಿಯಲ್ಲಿ
ರಜತಾದ್ರಿಯಲ್ಲಿರ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ,
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ದಲ್ಲಿ
ಸುದ್ದಿಯ ಹೇಳುವರನಾರನೂ ಕಾಣೆ.
ಇನ್ನಿದ್ದವರಿಗೆ ಬುದ್ಧಿ ಇನ್ನಾವುದೊ ?
ಶುದ್ಧಶೈವವ ಹೊದ್ದದೆ, ಪೂರ್ವಶೈವವನಾಚರಿಸದೆ
ಮಾರ್ಗಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ
ಆದಿಶೈವವನನುಕರಿಸದೆ, ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು,
ಸಕಲೇಂದ್ರಿಯವ ಮರೆದು
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ
ಬೇರೊಂದರಸಲಿಲ್ಲವಾಗಿ ಬಯಕೆಯರತು,
ಭವಹಿಂಗಿ, ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ.

– ಬಸವ ದರ್ಶನ ಪುಟ ೮೭-೨೬೧

ಈ ವಚನದಲ್ಲಿ ಅತ್ಯಂತ ಸ್ಪಷ್ಟವಾಗಿ ಮೋಳಿಗೆಯ ಮಾರಯ್ಯನವರು ಹೇಳಿದ್ದಾರೆ.

ಶುದ್ಧಶೈವ ಕಪ್ಪಡಿ ಸಂಗಮನಾಥನಲ್ಲಿ (ವಾಕ್ಯ ೮)

ಶುದ್ಧಶೈವವ ಹೊದ್ದದೆ ಪೂರ್ವಶೈವವನಾಚರಿಸದೆ
ಮಾರ್ಗಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ
ಆದಿ ಶೈವವನನುಕರಿಸದೆ (ವಾಕ್ಯ ೧೫ರಿಂದ ೧೭)

ಕಪ್ಪಡಿಯ ದೇವಾಲಯವು ಶುದ್ಧಶೈವ ಸಂಪ್ರದಾಯದ ಗುಡಿ ಎಂದೂ, ಬಸವಣ್ಣನವರು ''ಅವತಾರದಲ್ಲಿ ಬಂದು ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥ ನಾಮಮಂ ಪಡೆದು, ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿದರು'' ಎಂದು ಮೋಳಿಗೆಯ ಮಾರಯ್ಯನವರು ಹೇಳುತ್ತಾರೆ.

ಈ ಭಕ್ತಿ ಮಾರ್ಗವು ಹೊಂದಿರುವ ಲಕ್ಷಣವೆಂದರೆ,
''ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು ಮನದಲ್ಲಿ ಸಿಂಹಾಸನಂಗೆಯ್ದು
ಸಕಲೇಂದ್ರಿಯವ ಮರೆದು
ಕಾಯ ಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ
ಬೇರೊಂದರಸಲಿಲ್ಲವಾಗಿ ಬಯಕೆಯರತು,
ಭವ ಹಿಂಗಿ, ತಾನೆನ್ನದೆ, ಇದಿರೆನ್ನದೆ
ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ ನಿಃಕಳಂಕ ಮಲ್ಲಿಕಾರ್ಜುನಾ

ಎಲ್ಲರಿಗೂ ದೀಕ್ಷೆಯನ್ನು ನೀಡುವ ಒಂದು ಧರ್ಮವು ಉದಯಿಸಿದಾಗ ಅದರ ಕಕ್ಷೆಯೊಳಕ್ಕೆ ಅನೇಕ ಧರ್ಮ ಮತ ಪಂಥಗಳು ಸೇರುವುದು ಸಹಜ. ಈ ಪ್ರಕ್ರಿಯೆಯು ಎಲ್ಲ ಜಾಗತಿಕ ಧರ್ಮಗಳಲ್ಲಿಯೂ ನಡೆದಿದೆ. ಆದರೆ ಅವು ತಮ್ಮ ಮೊದಲಿನ ನಂಬಿಕೆ, ಆಚರಣೆಗಳನ್ನು ಪ್ರಾಮಾಣಿಕವಾಗಿ ತೊರೆದು ಸ್ವೀಕರಿಸಿದ ಧರ್ಮವನ್ನು ಮಾತ್ರ ಪೋಷಿಸಿ ಬೆಳೆಸಬೇಕು. ಇದನ್ನು ವೀರಶೈವವು ಮಾಡದುದೇ ಇಂದಿನ ಗೊಂದಲಕ್ಕೆ ಕಾರಣ. ಆದ್ದರಿಂದ ಈಗಿನ ಲಿಂಗಾಯತರು ಈ ತಪ್ಪನ್ನು ಸರಿಪಡಿಸಿಕೊಳ್ಳುವುದು ಅವರ ಆದ್ಯ ಕರ್ತವ್ಯ. ★

ವಿಶ್ವ ವಿಭೂತಿ ಬಸವಣ್ಣ

ವಿಶ್ವ ವಿಭೂತಿ ಬಸವಣ್ಣ
ಇವ ಜಗದ ಜನರಿಗೆ ಗುರುವಣ್ಣ ॥ ಪಲ್ಲವಿ ॥

ಸಂಪ್ರದಾಯದ ಬಲೆಗೆ ಸಿಗದೆ
ಮಾತಾಪಿತರನು ತೊರೆದು ಬಂದೆ
ಸಂಗಮ ಕ್ಷೇತ್ರದಲಿ ತಪವ ನೀ ಗೈದೆ
ಲಿಂಗದೇವನ ಕರುಣೆಯ ಸುತನಾದೆ ॥ ೧ ॥

ಕಲ್ಯಾಣ ರಾಜ್ಯ ನಿರ್ಮಾಪಕನಾಗಿ ಬಂದು
ಬಿಜ್ಜಳನ ಮಹಾಮಂತ್ರಿಯಾದೆ ಅಂದು
ವಚನ ಶಾಸ್ತ್ರದ ಬುತ್ತಿಯ ಹೊತ್ತು ತಂದು
ಮರೆಯಲಾಗದು ನಿನ್ನ ಈ ಸಾಧನೆ ಅಂದು,
ಇಂದು ಎಂದೆಂದೂ ॥ ೨ ॥

ಮರ್ತ್ಯದಲ್ಲಿ ಮಹಾಮನೆಯ ಕಟ್ಟಿ
ಕರೆದೆ ಶಿವಶರಣರ ಎದೆಯ ಕದ ತಟ್ಟಿ
ಅನುಭವ ಮಂಟಪವನು ರಚಿಸಿ ನೀನು
ಮಾಡಿದ ಭಕ್ತರ ಜೀವನ ಹಾಲುಜೇನು ॥ ೩ ॥

ಪತಿತ ಕುಲಕೆ ನೀ ದೀಕ್ಷೆಯ ನೀಡಿ
ತಿಳಿಸಿದೆ ಅವರಿಗೂ ಸತ್ಯದ ಮೋಡಿ
ಸ್ತ್ರೀ ಸ್ವಾತಂತ್ರ್ಯದ ಕಾಲವನು ನೋಡಿ
ಆ ಕ್ರಾಂತಿಪುರುಷನ ನಾಮ ಕೊಂಡಾಡಿ ॥ ೪ ॥

ಕಾಯಕ ತತ್ವವ ಲೋಕಕೆ ಸಾರುತ
ಇಷ್ಟಲಿಂಗವನು ಕರಕೆ ನೀಡುತ
ಜಾತಿ ಭೇದಗಳನು ದೂರ ನಿಲಿಸುತ
ಸಾರಿದ ಜಗಕೆ ನಾವೆಲ್ಲಾ ಒಂದೇ ಎನುತ ॥ ೫ ॥

ಇವನೆ ಬಸವನು ಇವನೆ ಬಸವನು
ಇವ ಜಗದ ಕಲ್ಯಾಣ ಚಿಂತಕನು
ಇವನೆ ಬಸವನು ಇವನೆ ಬಸವನು
ಲಿಂಗದೇವನಲಿ ಲೀನನಾದನು ॥ ೬ ॥

ದಿವ್ಯ.ಜಿ
ರಾಷ್ಟ್ರೀಯ ಬಸವ ದಳ, ಮೈಸೂರು

ಬಸವ ವಚನ ಸುಧೆ : -ಬಸವಾತ್ಮಜೆ

೧. ಜಂಗಮ ಮುಖಿಯ ನಡಾವಳಿ

ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ-ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
''ಆಸನೇ ಶಯನೇ ಯಾನೇ ಸಂಪರ್ಕೆ ಸಹಭೋಜನೇ!
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ !!
ಎಂಬ ಶ್ರುತಿಯ ಬಸವಣ್ಣನೋದುವನು'' ಎಂಬರು
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ ? ಕೊಡಲಮ್ಮೆ !
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ
ಕುದಿದೆನಾದಡೆ ತಲೆದಂಡ ! ಲಿಂಗದೇವಾ. -ಬ.ವ.ದೀ ೭೦೭

ಧರ್ಮಪಿತ ಬಸವಣ್ಣನವರ ಈ ವಚನವು ಬಹುಮುಖ ಸಂದೇಶವನ್ನು ಸಾರುತ್ತದೆ.

ಮನುಷ್ಯ ಬೆಳಿಗ್ಗೆ ಏಳುತ್ತಲೇ, ಕೆಲವೊಮ್ಮೆ ಹಾಸಿಗೆಯ ಮೇಲೆ ಮಲಗಿಯೇ ಒಡಲ ಚಿಂತೆಯಲ್ಲಿ ತೊಡಗುತ್ತಾನೆ. ಕಣ್ಣು ಹೊಸಕಿಕೊಳ್ಳುತ್ತ ''ಇಂದು ಬೆಳಗಿನ ಉಪಾಹಾರ ಏನಿರಬಹುದು ?'' ಎಂದು ಆಲೋಚಿಸಿ ಬಾಯಲ್ಲಿ ನೀರೂರಿಸಿಕೊಳ್ಳುತ್ತಾನೆ. ''ಇಂದು ಎಂಥಾ ಬಟ್ಟೆ ತೊಡಲಿ? ಇಂಥಾ ಯಾರೋ ಭೆಟ್ಟಿಯಾಗುತ್ತಾರೆ. ಆಗ ಇಂಥ ಬಟ್ಟೆ ಇದ್ದರೆ ಚೆಂದವಲ್ಲವೆ ? ಯಾವ ಯಾವ ಅಲಂಕಾರ ಮಾಡಿಕೊಳ್ಳಲಿ ? ಯಾವ ಒಡವೆ ತೊಡಲಿ ?'' ಹೀಗೆಲ್ಲ ಒಡಲಿನ ಚಿಂತೆ ಮಾಡುತ್ತಾನೆ. ನಂತರ ಒಡವೆಯ ಚಿಂತೆ; ಇಲ್ಲಿ ಒಡವೆ ಎಂದರೆ ಕೇವಲ ಆಭರಣ ಎಂದಲ್ಲ; ಆಸ್ತಿ ಎಂದು ಅರ್ಥ. ''ಇಂದು ಏನು ವಿಶೇಷ ಸಂಪಾದನೆಯಾದೀತು ? ಹೊಲಕೊಳ್ಳಲೇ ? ಮನೆಕೊಳ್ಳಲೇ ? ಹೆಚ್ಚುವರಿ ಹಣವನ್ನು ಎಲ್ಲಿ ಮುಚ್ಚಿಡಲಿ?'' ಒಡಲಿನ, ಒಡವೆಯ ಚಿಂತೆ ಆದ ಮೇಲೆ ಮಡದಿಯ, ಮಕ್ಕಳ ಚಿಂತೆ. ''ಹೆಂಡತಿಯನ್ನು (ಅಥವಾ ಗಂಡನನ್ನು)ಸಂತೋಷದಲ್ಲಿಡಲು ಏನು ಮಾಡಲಿ ? ಏನು ತರಲಿ ? ಎಲ್ಲಿಗೆ ಕರೆದೊಯ್ಯಲಿ? ಮಕ್ಕಳನ್ನು ಹೇಗೆ ಖುಷಿ ಪಡಿಸಲಿ, ಅವರಿಗಾಗಿ ಏನೇನು ಗಳಿಸಲಿ ?'' ಹೀಗೆ ತನ್ನಿಂದ ಪ್ರಾರಂಭವಾದ ಈ ಚಿಂತನೆ ವಿಸ್ತಾರಗೊಳ್ಳುತ್ತ ಹೋಗುತ್ತದೆ. ಆದರೆ ಇದು ವಿಶಾಲತೆಯ ವಿಸ್ತಾರವಲ್ಲ ತನ್ನನ್ನು, ತನ್ನ ಸುಖವನ್ನು ಗಮನದಲ್ಲಿ ಇಟ್ಟುಕೊಂಡ ಸ್ವಕೇಂದ್ರಿಕೃತವಾದ (Self Centered)ಸೀಮಿತ ಚಿಂತನೆ.

ಆದರೆ ವಿಶ್ವಕುಟುಂಬಿ ಬಸವಣ್ಣನವರು ಹಾಗೆ ಚಿಂತಿಸುವುದಿಲ್ಲ. ಹೊತ್ತಾರೆ ಎದ್ದು ಒಡಲಿಂಗೆ, ಒಡವೆಗೆ, ಮಡದಿಗಾಗಿ, ಮಕ್ಕಳಿಗಾಗಿ ಚಿಂತಿಸದೆ ಲೋಕದ ಲೇಸಿಗಾಗಿ ಚಿಂತಿಸುವರು. ಹಾಗೆ ಸೀಮಿತವಾಗಿ ಮನಸ್ಸು ಚಿಂತಿಸಿದರೆ ಅವರ ಅಂತರ್ಮನವೇ ನ್ಯಾಯಾಧೀಶನಾಗಲಿ, ತಲೆ ಬಿದ್ದು ಹೋಗಲಿ ಎಂದು ಮನಸ್ಸಿಗೆ ಸವಾಲು ಒಡ್ಡುವರು.

''ಭವಿಗಳ ಜೊತೆಗೆ ಸಮಾನವಾಗಿ ಕುಳಿತುಕೊಳ್ಳುವುದಿಲ್ಲ ; ಮಲಗುವುದಿಲ್ಲ, ಯಾವುದೇ ರೀತಿಯ ಸಂಪರ್ಕ ವ್ಯವಹಾರವನ್ನು ಇರಿಸಿಕೊಳ್ಳುವುದಿಲ್ಲ, ಸಹ ಭೋಜನವನ್ನು ಮಾಡುವುದಿಲ್ಲ. ಹಾಗೆ

ಮಾಡಿದರೆ ಅನಂತಕಾಲ ನರಕದಲ್ಲಿ ಸಂಚರಿಸಬೇಕಾಗುತ್ತದೆ.'' ಎಂಬ ಶ್ರುತಿ (ಶಾಸ್ತ್ರ)ವಚನವನ್ನು ಬಸವಣ್ಣನವರು ಓದುತ್ತಾರೆ. ಆದರೆ ಸಮಾನ ಧರ್ಮೀಯನಲ್ಲದ ಭವಿ ಬಿಜ್ಜಳನ ಗದ್ದುಗೆಯ ಕೆಳಗಿನ ಸ್ಥಾನದಲ್ಲಿ ಕುಳಿತು ಕಾಯಕ ಮಾಡುತ್ತಾರೆ '' ಎಂದು ಕೆಲವರು ಟೀಕಿಸುತ್ತಾರೆ. ಇವರಿಗೆ ಉತ್ತರವ ಕೊಡುವೆನೆ ? ಕೊಡಲು ಹೋಗುವುದಿಲ್ಲ ; ಏಕೆಂದರೆ ಅವರು ನನ್ನನ್ನು, ನನ್ನ ವಿಚಾರಧಾರೆಯನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಕಾಯಕ ಮಾಡಲು ಯಾರ ಸನ್ನಿಧಿಯಾದರೇನು, ರಾಜ ಬಿಜ್ಜಳನ ಬಳಿ ಮಾಡುವುದಿರಲಿ ; ಸಮಾಜದ ವ್ಯವಸ್ಥೆಯಲ್ಲಿ (ತಮ್ಮದಲ್ಲದ ತಪ್ಪಿಗೆ) ಬಹಿಷ್ಕೃತರಾಗಿ ಅತ್ಯಂತ ಕೆಳಗೆ ಇರುವ ಹೊಲೆಯರ ಮನೆಯೊಳಗಣ ಯಾವುದಾದರೂ ಉದ್ಯೋಗವನ್ನು ಮಾಡಿಯಾದರೆಯೂ, ಕಡೆಗೆ ಕೈಕೂಲಿಯ ಮಾಡಿಯಾದರೆಯೂ ನಾನು ಬದುಕುವೆ, ಕಾಯಕ ಮಗ್ನನಾಗುವೆ. ದೇವನಿಗಾಗಿ ಅವನ ಮುಖವಾದ ಸಮಾಜಕ್ಕಾಗಿ, ಜಂಗಮಕ್ಕಾಗಿ ಕುದಿವೆನಲ್ಲದೆ ಒಡಲಿನ ಧಾವತಿಗಾಗಿ ಚಿಂತಿಸಿದರೆ ನನ್ನ ತಲೆಯೇ ಬಿದ್ದುಹೋಗಲಿ.'' ಎನ್ನುತ್ತಾರೆ. ಈ ವಚನ ಬಹುಮುಖ ಮಾರ್ಗದರ್ಶನ ಮಾಡುತ್ತದೆ.

೧. ಸಾರ್ವಜನಿಕ ಕಾರ್ಯಕ್ಕೆ, ಸಮಾಜ ಸೇವೆಗೆ, ತೊಡಗಿಸಿಕೊಂಡ ವ್ಯಕ್ತಿ ಕೇವಲ ತನ್ನ ಶರೀರ ಸುಖಕ್ಕಾಗಿ, ಆಸ್ತಿ ಸಂಪಾದನೆಗಾಗಿ, ಮಡದಿ-ಮಕ್ಕಳ ಸುಖಕ್ಕಾಗಿ ಬದುಕುವುದಲ್ಲ. ಸಮಷ್ಟಿಯ ಕಲ್ಯಾಣಕ್ಕಾಗಿ ಮೀಸಲಾಗಬೇಕು.

೨. ಶ್ರುತಿಗಳು ಅರ್ಥಾತ್ ಸಂಪ್ರದಾಯಿಕ ಶಾಸ್ತ್ರಗಳು ಕೊಡುವ ಭವಿ-ಭಕ್ತರ ವ್ಯಾಖ್ಯಾನವೇ ಬೇರೆ. ಒಂದು ವಿಶಿಷ್ಟ ಧರ್ಮ, ಮತಪಂಥದ ದೀಕ್ಷೆ ಪಡೆದವನು ಭಕ್ತ, ಪಡೆಯದವನು ಭವಿ ಎಂದು ಮತೀಯ ದೃಷ್ಟಿಯಿಂದ ಅರ್ಥ ಮಾಡುತ್ತಾರೆ. ಆದರೆ ಬಸವಾದಿ ಪ್ರಮಥರು ಮತೀಯ ದೃಷ್ಟಿಯಿಂದ ಅರ್ಥ ಮಾಡದೆ ನೈತಿಕ ಆಧಾರದ ಮೇಲೆ ಗುಣವಾಚಕವಾಗಿ ಅರ್ಥ ಮಾಡುತ್ತಾರೆ.

೩. ಓರ್ವ ಮಾಲಿಕ ಸ್ವಧರ್ಮೀಯನಿರಬಹುದು, ಬಿಡಬಹುದು. ಅವನ ಬಳಿ ಉದ್ಯೋಗ ಮಾಡಲಿಕ್ಕೆ ಶರಣನು ಸಂಕೋಚಪಡಬೇಕಾಗಿಲ್ಲ. ಇಲ್ಲಿ ಸ್ವಾಮಿ-ಭೃತ್ಯ ಸಂಬಂಧ ಧಾರ್ಮಿಕವಲ್ಲ ಕೇವಲ ಔದ್ಯೋಗಿಕ, ತನ್ನ ಧಾರ್ಮಿಕ ನಂಬಿಕೆಗೆ ಅಡ್ಡಿಯುಂಟು ಮಾಡದ, ಹಸ್ತಕ್ಷೇಪ ಮಾಡದ ಒಡೆಯನಿದ್ದರೆ ಅವನು ಪರಧರ್ಮಿಯಿದ್ದರೂ ಆತನ ಬಳಿ ಕಾಯಕ ಮಾಡಲು ಸಂಕೋಚಪಡಬಾರದು. ಅದು ಧಾರ್ಮಿಕ ಅಪರಾಧ ಎಂದು ಭಾವಿಸಬಾರದು.

೪. ಉದ್ಯೋಗಗಳಲ್ಲಿ ಸ್ವಾವಲಂಬಿ ಉದ್ಯೋಗಗಳೆಂದರೆ ಕೃಷಿ ಮತ್ತು ವ್ಯಾಪಾರ. ಭೂಮಿ ಇದ್ದವನು ಕೃಷಿ ಕಾಯಕ (ಆರಂಬ)ಮಾಡುತ್ತ ಯಾರ ಹಂಗಿನಲ್ಲೂ ಇರದೆ ಸ್ವಾವಲಂಬಿಯಾಗಬಹುದು ಹಣವಿದ್ದವನು ವ್ಯಾಪಾರ ಕೈಗೊಳ್ಳಬಹುದು. ಅವನೂ ಸ್ವಾವಲಂಬಿಯೆ! ಆದರೆ ಭೂಮಿ-ಹಣ ಎರಡೂ ಇಲ್ಲದವನು ಬೇರೆಯವರ ಬಳಿ ದುಡಿದು ಬದುಕಬೇಕಾಗುತ್ತದೆ. ಹಾಗೆ ದುಡಿಯುವಾಗ ಅನ್ಯಾಯ, ಅನಾಚಾರ, ಶೋಷಣೆಗೆ ಆ ಉದ್ಯೋಗವು ಕಾರಣವಾಗದೆ ಇದ್ದರೆ ಆಗ ಶರಣನು ಪರಸೇವೆ ಮಾಡಲು ಯಾವುದೇ ಆಕ್ಷೇಪವಿರದು. ಹೀಗೆ ಮಾಡುವಾಗ ಹೊಲೆಯರ ಮನೆಯೊಳಗೆ ಚರ್ಮ ಹದ ಮಾಡುವ, ಚಪ್ಪಲಿ ಹೊಲಿಯುವ ಕಾಯಕವಿದ್ದರೇನು ಅದನ್ನಾದರೂ ಮಾಡಲು, ಕಡೆಗೆ ಕೈಕೂಲಿಯನ್ನು ಮಾಡಿಯಾದರೆಯೂ ತನ್ನ ಉಪಜೀವನ ನಡೆಸಲು ಶರಣನು ಸಿದ್ಧನಿರಬೇಕೇ ವಿನಾ ಅವನು ಪರಾವಲಂಬಿಯಾಗಿ ಬದುಕಬಾರದು. ತನ್ನ ಧರ್ಮಾಚರಣೆಗೆ, ಪ್ರಾಮಾಣಿಕತೆಗೆ, ತತ್ವನಿಷ್ಠೆಗೆ ಚ್ಯುತಿ ಬಂದಾಗ ಒಡೆಯನಿದ್ದರೇನು ಪ್ರತಿಭಟಿಸಬೇಕು ; ಮನವರಿಕೆ ಮಾಡಿಕೊಡಬೇಕು. ಒಡೆಯನು ಪರಿವರ್ತನೆಗೊಳ್ಳದಿದ್ದರೆ ಅವನ ಊಳಿಗವನ್ನು ತೊರೆದು ಹೋಗಬೇಕೇ ವಿನಾ ತಾತ್ವಿಕವಾಗಿ ರಾಜಿ ಮಾಡಿಕೊಳ್ಳಬಾರದು.

ಅಂತೂ ಯಾವುದೇ ಉದ್ಯೋಗವನ್ನು ಅವಲಂಬಿಸಿ ಹಣವನ್ನು ಗಳಿಸಿದರೇನು ಗುರಿ ಮಾತ್ರ ಕೇವಲ ತನಗಾಗಿ, ತನ್ನ ಒಡಲ ತೃಪ್ತಿಗಾಗಿ, ಮಡದಿ ಮಕ್ಕಳ ಸುಖಕ್ಕಾಗಿ ಬದುಕುವುದಾಗಿರದೆ ದೇವನಿಗಾಗಿ ಅವನ ಸಾಕಾರವಾದ ಸಮಾಜದ ಹಿತಕ್ಕಾಗಿ ದುಡಿಯುವಂಥದ್ದಾಗಿರಬೇಕು.

ಈ ವಚನದ ಮೂಲಕ ಸಹ ವೀರಶೈವ ಮತ್ತು ಲಿಂಗಾಯತದ ವ್ಯತ್ಯಾಸವನ್ನು ಗಮನಿಸಬಹುದು. ಬಸವ ಪುರಾಣದಲ್ಲಿ ಒಂದು ಕಥೆ ಬರುತ್ತದೆ. ಒಮ್ಮೆ ಕೊಂಡೆಯ ಮಂಚಣ್ಣನ ಗುಂಪಿನವರು ಬಿಜ್ಜಳ ರಾಜನಿಗೆ ಹೇಳುವರು, ''ರಾಜನಾಗಿದ್ದರೂ ನಿನಗೆ ಪ್ರಧಾನಿಯಾದ ಬಸವಣ್ಣನವರು ನಮಸ್ಕರಿಸುವುದಿಲ್ಲ ; ತಮ್ಮ ಕೈಯೊಳಗಿನ ನಂದಿಯುಂಗುರಕ್ಕೆ ನಮಸ್ಕರಿಸುವರು'' ಎಂದು. ಇದು ಬಿಜ್ಜಳನಿಗೆ ಕೋಪವನ್ನು ತರಿಸುತ್ತದೆ. ಒಮ್ಮೆ ಕೇಳಿಯೇ ಬಿಡುತ್ತಾನೆ. ಬಸವಣ್ಣನವರು ಬಿಜ್ಜಳನನ್ನು ಸಿಂಹಾಸನ ಬಿಟ್ಟು ಬೇರೆ ಕೂರಲು ಹೇಳಿ, ನಂದಿಯುಂಗುರವನ್ನು ತೆಗೆದು ಆ ಸಿಂಹಾಸನಕ್ಕೆ ನಮಸ್ಕರಿಸುವರು. ಆಗ ಅದಕ್ಕೆ ಬೆಂಕಿ ಹೊತ್ತಿ ಉರಿಯುತ್ತದೆ. ಇದರ ಅಂತರಾರ್ಥ ಏನೆಂದರೆ, ಮಹಿಮಾಶಾಲಿಗಳಾದ ಪವಾಡಪುರುಷ ಬಸವಣ್ಣನವರು ಬಿಜ್ಜಳನಿಗೆ ನಮಸ್ಕರಿಸದೆ ನಂದಿಯುಂಗುರಕ್ಕೆ ನಮಸ್ಕರಿಸುತ್ತಿದ್ದರು ಎಂದು.

ಈ ವಿಚಾರಧಾರೆ ಬಸವ ಸಿದ್ಧಾಂತಕ್ಕೆ ಸರಿ ಬರದ ಮತಾಂಧ ವಿಚಾರಧಾರೆ. ಬಸವಣ್ಣನವರಿಗೆ ತಾವು ಮಹಿಮಾಶಾಲಿಗಳೆಂಬ ಅಹಂ ಇರಲಿಲ್ಲ. ''ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'' ಎಂಬ ಸಿದ್ಧಾಂತದ ಪ್ರತಿಪಾದಕ ಬಸವಣ್ಣನವರಿಗೆ ನಂದಿಯುಂಗುರ ಸ್ಥಾವರ, ಜೀವಂತ ವ್ಯಕ್ತಿ ಬಿಜ್ಜಳನು (ಧಾರ್ಮಿಕ ಅರ್ಥದಲ್ಲಲ್ಲ, ಸಾಮಾಜಿಕ ಅರ್ಥದಲ್ಲಿ)ಜಂಗಮ. ಅಂದಾಗ ಅವರು ಬಿಜ್ಜಳನಿಗೆ ನಮಸ್ಕರಿಸದೆ ನಂದಿಯುಂಗುರಕ್ಕೆ ನಮಸ್ಕರಿಸುತ್ತಿದ್ದರು ಎಂಬುದು ಅವರ ಸಿದ್ಧಾಂತಕ್ಕೆ ಬಗೆಯುವ ಅಪಚಾರ ; ಅವರ ಉದಾರ ವ್ಯಕ್ತಿತ್ವಕ್ಕೆ ತರುವ ಕುಂದು. ಅಂಥ ಉದ್ಧಟತನವನ್ನು ನಾವು ಖಂಡಿತಾ ಆರೋಪಿಸಬಾರದು. ಮತ ದೃಷ್ಟಿಯಿಂದ ಭವಿ-ಭಕ್ತ ಎಂಬ ಭೇದ ಮಾಡುವುದು ಶೈವದ ಒಂದು ಶಾಖೆಯಾದ ವೀರಶೈವದ ಲಕ್ಷಣವೇ ವಿನಾ ಪ್ರಗತಿಪರ ಚಿಂತನೆಯ ಲಿಂಗಾಯತ ಧರ್ಮದ ಲಕ್ಷಣವಲ್ಲ. ಅಂದು ಬಂದು ಸೇರಿದ ವೀರಶೈವರು ಮತ್ತು ಅದೇ ದೃಷ್ಟಿಯಿಂದ ಕಾವ್ಯಗಳನ್ನು ರಚಿಸಿದ ವೀರಶೈವ ಕವಿಗಳು ಬಸವಣ್ಣನವರ ಚೈತನ್ಯಶೀಲ (Dynamic)ಸಿದ್ಧಾಂತ, ವ್ಯಕ್ತಿತ್ವ ಅರಿಯದೆ ಧರ್ಮಪಿತರ ದಿವ್ಯಭವ್ಯ ವ್ಯಕ್ತಿತ್ವಕ್ಕೆ ಕುಂದು ತಂದಿದ್ದಾರೆ ಎನ್ನಬಹುದು.

ಅನುಕಂಪ-ಕರುಣೆಗಳ ಸಾಕಾರ ಬಸವಣ್ಣ

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೆ ಇದಾರೆ
ಆನು ದೇವಾ, ಹೊರಗಣವನು
ಸಂಬೋಳಿ, ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದ್ದೇನೆ
ಲಿಂಗದೇವಾ, ನಿಮ್ಮ ನಾಮವಿಡಿದ ಅನಾಮಿಕ ನಾನು

-ಬ.ವ.ದೀ. ೯೨೮

ಮಾನವತಾವಾದಿ ಬಸವಣ್ಣನವರ ಮಾನವೀಯ ಸಮುಹೃದಯತೆಗೆ ಜ್ವಲಂತ ಸಾಕ್ಷಿ ಈ ವಚನ. ದೇವಸ್ಥಾನದ ಕಲ್ಪನೆಯ ಹಿನ್ನೆಲೆಯಲ್ಲೂ ಈ ವಚನವನ್ನು ಅರ್ಥ ಮಾಡಬಹುದು. ಮಹಾಮನೆಯ ಹಿನ್ನೆಲೆಯಲ್ಲೂ ಅರ್ಥ ಮಾಡಬಹುದು.

ಶಿವಾಲಯದ ಗರ್ಭಗುಡಿಯ ಒಳಗೆ ಹೋಗಿ ಹೆಮ್ಮೆಯಿಂದ ಅಧಿಕೃತವಾಗಿ ಪೂಜೆ ಮಾಡುವ

''ಉತ್ತಮರು'' ಸಲಿಗೆವಂತರಾಗಿ ಒಳಗೆ ಹೋಗಿ ಸಹಸ್ರ ಬಿಲ್ವಾರ್ಚನೆ, ಆ ಪೂಜೆ ಈ ಪೂಜೆ ಮುಂತಾಗಿ ಮಾಡುತ್ತಲಿದ್ದಾರೆ. ಆದರೆ ದೀನರಾದ ದಲಿತರು ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿ ಇಡಲ್ಪಟ್ಟವರು ಪಾಪ, ದೇವಾಲಯದ ಒಳಗೆ ಹೋಗುವುದಿರಲಿ ದೇವಾಲಯದ ಸಮೀಪಕ್ಕೆ ಸಹ ಬರುವ ಧೈರ್ಯ ಮಾಡಿಯಾರೆ ? ಅವರಿಗಾಗಿ ಧರ್ಮಪಿತ ಬಸವಣ್ಣನವರ ಹೃದಯ ಮಿಡಿಯುತ್ತಿದೆ, ಕರುಳು ಚುರುಕ್ಕೆನ್ನುತ್ತಿದೆ. ಒಳಗೆ ಪೂಜಿಸುವವರಿಗಾಗಿ ಹತ್ತಾರು ಪೂಜಾರಿಗಳು ಇದ್ದಾರೆ. ಅದಕ್ಕಾಗಿ ಗುಡಿಯ ಸಮೀಪ ಸಹ ಬರದ ನಿಕೃಷ್ಟ ಜನರನ್ನು ಬರಮಾಡಿಕೊಳ್ಳಲು ಬಸವಣ್ಣನವರು ಗುಡಿಯ ಹೊರಗಿದ್ದಾರೆ. ತಮ್ಮನ್ನು ತಾವು ತಗ್ಗಿಸಿಕೊಂಡು ''ಸಂಬೋಳಿ ಸಂಬೋಳಿ'' ಎನ್ನುತ್ತಿದ್ದಾರೆ. ಸಾಂಪ್ರದಾಯಿಕ ವರ್ಣವ್ಯವಸ್ಥೆಯ ಸಮಾಜದಲ್ಲಿ ಪಂಚಮ ವರ್ಣೀಯರಾದ ಅಸ್ಪೃಶ್ಯರು ಓಡಾಡುವಾಗ 'ಸಂಬೋಳಿ' ಎಂದು ಕೂಗುತ್ತ ಬಾಯಿಗೆ ಒಂದು ಕುಡಿಕೆ. ಸೊಂಟಕ್ಕೆ ಕಸಪೊರಕೆ ಕಟ್ಟಿಕೊಂಡು ಓಡಾಡಬೇಕಿತ್ತು. ಉತ್ತಮರ ಕೇರಿಯಲ್ಲಿ ಸತ್ತುಬಿದ್ದ ಪ್ರಾಣಿಯನ್ನು ಎತ್ತಿ ಒಯ್ಯಲು, ಮಾಡಿದ ಚಪ್ಪಲಿಗಳನ್ನು ತಂದುಕೊಡಲು ಅವರು ಉತ್ತಮರ ಕೇರಿಗೆ ಬರಬೇಕಾಗುತ್ತಿತ್ತು. ಆಗ ಈ ರೀತಿ ಕೂಗುತ್ತ ಬಂದಾಗ ಅಸ್ಪೃಶ್ಯರ ನೆರಳು ತಮ್ಮ ಮೇಲೆ ಬೀಳದಂತೆ ಉತ್ತಮರು ಮನೆಯ ಒಳಸೇರಿ, ಕದವನ್ನು ಮುಂದೆ ಮಾಡಿಕೊಳ್ಳುತ್ತಿದ್ದರು.

ಇಲ್ಲಿ ಬಸವಣ್ಣನವರು ಸಂಬೋಳಿ ಎಂದು ಕೂಗುತ್ತ ಗುಡಿಯ ಹೊರಗೆ, ಕಾಯುತ್ತ ನಿಂತಿರುವುದೇಕೆ ? ''ಅಯ್ಯಾ, ಬನ್ನಿರಿ. ದೇವರು ಎಲ್ಲರಿಗಾಗಿ ಇದ್ದಾನೆ. ನಾನೂ ನಿಮ್ಮವನೆ ! ನಾನು ಯಾರೋ ಮೇಲು ಕುಲದವನು ಎಂದು ಅವಿಶ್ವಾಸ ಮಾಡದಿರಿ'' ಎಂದು ದಲಿತರಲ್ಲಿ, ಶೋಷಿತರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಲಕ್ಕಾಗಿ !

ಮಹಾಮನೆಯ ಹಿನ್ನೆಲೆಯಲ್ಲೂ ಈ ವಚನವನ್ನು ಅರ್ಥೈಸಬಹುದು. ಮೇಲು ಜಾತಿಯವರು ಹೆಮ್ಮೆಯಿಂದ ದೀಕ್ಷೆಯನ್ನು ಪಡೆದುಕೊಂಡು ಅತ್ಯಂತ ಸಲುಗೆಯಿಂದ ಲಿಂಗಾರ್ಚನೆಯಲ್ಲಿ ತೊಡಗಿದ್ದಾರೆ. ಇದರಿಂದ ಬಸವಣ್ಣನವರಿಗೆ ಸಂತೋಷವೇ. ಆದರೆ ಅವರ ಕರುಳು ಕರೆಯುತ್ತಿರುವುದು, ಹೃದಯ ಕಾಯುತ್ತಿರುವುದು ದೀನ ದುರ್ಬಲ ದಲಿತರಿಗಾಗಿ. ಅವರುಗಳಲ್ಲಿ ಕೀಳರಿಮೆ, ಕ್ಲೈಬ್ಯ, ಭಯ. ಮೇಲುಜಾತಿ, ಉತ್ತಮ ಕುಲದವರಷ್ಟು ಸಲುಗೆಯಿಂದ ಅವರು ಮಹಾಮನೆಯೊಳಗೆ ಅರ್ಥಾತ್ ಧರ್ಮದೊಳಕ್ಕೆ ಬರಲಾರರು. ಅಂಥವರಿಗಾಗಿ ಮಿಡಿಯುವ ಬಸವಣ್ಣನವರ ಹೃದಯ ಲಿಂಗಾರ್ಚನೆ ಮಾಡುವ ಮಹಿಮರನ್ನು ಹಿರಿಯರನ್ನು ಅವರವರ ನೇಮಾಚರಣೆಗಾಗಿ ಒಳಗೆ ಬಿಟ್ಟು, ಹೊರಗೆ ನಿಂತು ದೀನದಲಿತರಿಗಾಗಿ ಕಾಯುತ್ತಿದೆ. ''ಈತ ನಮ್ಮವನೆ, ನಮ್ಮಿಂದ ಬೇರೆಯಲ್ಲ, ದೂರವಲ್ಲ'' ಎಂಬ ವಿಶ್ವಾಸ ಅವರಲ್ಲಿ ಮೂಡಲಿ ಎಂದು ಅವರಂತೆ 'ಸಂಬೋಳಿ ಸಂಬೋಳಿ' ಎಂದು ಧ್ವನಿ ಮಾಡುತ್ತಿದ್ದಾರೆ. ಇಲ್ಲಿ ತಮ್ಮನ್ನು ತಾವು ತಗ್ಗಿಸಿಕೊಂಡು ಬಸವಣ್ಣನವರು ಶೋಷಿತರು, ದಲಿತರಿಗಾಗಿ ಮಿಡಿಯುವುದನ್ನು ಕಂಡಾಗ ನಮ್ಮ ಕಣ್ಣುಗಳು ಹನಿದುಂಬುತ್ತವೆ. ಎಂಥಾ ಮಮತಾಮಯಿ ಸಂವೇದನಾಶೀಲರು ! ''ಲಿಂಗದೇವಾ, ನಿಮ್ಮ ನಾಮವಿಡಿದ ಅನಾಮಿಕ ನಾನು'' ಎಂಬ ವಾಕ್ಯ ಅರ್ಥಪೂರಿತ. ದೇವನ ಹೆಸರನ್ನು ತಮ್ಮ ಪ್ರಾಣವಾಗಿ ಮಾಡಿಕೊಂಡ ಬಸವಣ್ಣನವರು ಅನಾಮಿಕರಾಗಿ (unknown)ಉಳಿದು ದೀನದಲಿತ ದುರ್ಬಲರ ನೊಂದ ಹೃದಯಗಳನ್ನು ಸಂತೈಸಲು ಬಯಸುತ್ತಾರೆ. ಸಾಮಾನ್ಯವಾಗಿ ನಾವು ಒಂದು ಪ್ರಕ್ರಿಯೆಯನ್ನು ಗಮನಿಸುತ್ತೇವೆ. ಏನೆಂದರೆ ಯಾರಾದರೂ ಉನ್ನತ ಸ್ಥಾನಕ್ಕೆ ಏರಿದರೆ ಅವರು ತನ್ನ ಜಾತಿಯವರಾಗಲೀ, ಬಂಧುಗಳಲ್ಲಿ ಸಾಮಾನ್ಯ ಸ್ಥಿತಿಯಲ್ಲಿದ್ದರೆ ಅವರೊಡನೆ ಆಗಲಿ ಬೆರೆಯಲು ಇಷ್ಟಪಡುವುದಿಲ್ಲ, ಬೆರೆತರೆ

ತಮ್ಮ ಘನತೆಗೆ ಧಕ್ಕೆ ಎಂದುಕೊಳ್ಳುತ್ತಾರೆ. ಶೂದ್ರರು ವೈದಿಕೀಕರಣಗೊಂಡು ವೈದಿಕಾಚರಣೆಗಳನ್ನು ಹೆಚ್ಚಾಗಿ ಮಾಡಿ, ತಾವು ಬಹಳ ಶ್ರೇಷ್ಠರೆಂದು ತೋರಿಸಿಕೊಳ್ಳಲು ಬಯಸುತ್ತಾರೆ. ಗುರುಗಳು, ಮಠಾಧೀಶರು ಜನಸಾಮಾನ್ಯರೊಡನೆ ಬೆರೆಯುವುದು, ಅವರನ್ನು ಸಾಂತ್ವನಿಸುವುದು ಘನತೆಗೆ ಕುಂದು ; ದೊಡ್ಡ ದೊಡ್ಡ ಶ್ರೀಮಂತರು, ಉನ್ನತ ಮಟ್ಟದ ರಾಜಕಾರಣಿಗಳು- ಅವರು ಎಂಥದೆ ಭ್ರಷ್ಟಜೀವನ ನಡೆಸುತ್ತಿರಲಿ ಅಂಥ ದೊಡ್ಡವರೊಡನೆ ಬೆರೆಯುವುದೇ ದೊಡ್ಡಸ್ತಿಕೆ ಎಂದು ಭಾವಿಸುತ್ತಾರೆ.

ಆದರೆ ನಿಜ ಮಹಾತ್ಮರ, ಪ್ರವಾದಿಗಳ ಜೀವನ ಪರಿಶೀಲಿಸಿದರೆ ಅವರ ಹೃದಯ-ಮನಸ್ಸುಗಳು ನೊಂದವರೊಡನೆ, ದೀನರಲ್ಲಿ ದೀನರೊಡನೆ ಒಡನಾಡಿ ದೈವೀತೃಪ್ತಿ (divine satisfaction) ಕಂಡುಕೊಳ್ಳಲು ಬಯಸುತ್ತವೆ. ಅಂಥ ನಡೆನುಡಿಯಿಂದ ಮಹಾತ್ಮರ ಅಂತರಾತ್ಮವು ಅಪರೂಪದ ಸಂತೋಷವನ್ನು ಅನುಭವಿಸುತ್ತದೆ. ಅದೇ ದೇವನು ಮೆಚ್ಚಿದ್ದಕ್ಕೆ ಕುರುಹು ಎಂದುಕೊಳ್ಳುತ್ತಾರೆ. ಈ ಪ್ರಕ್ರಿಯೆಯನ್ನೆ ''ದೇವಾ ನಿನ್ನ ನಾಮವಿಡಿದ ಅನಾಮಿಕ ನಾನು'' ಎಂದು ಧರ್ಮಪಿತ ಬಸವಣ್ಣನವರು ವ್ಯಕ್ತಪಡಿಸಿದ್ದಾರೆ.

೩. ದೇವನೊಲಿವುದು ಭಾವಕ್ಕೆ

ತಾಳಮಾನಸರಿಸವ ನಾನರಿಯೆ
ಓಜೆ ಬಜಾವಣೆಯ ಲೆಕ್ಕವ ನಾನರಿಯೆ
ಅಮೃತಗಣ ದೇವಗಣವ ನಾನರಿಯೆ
ಲಿಂಗದೇವಾ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ.
-ಬ.ವ.ದೀ. ೪೯೧

ಭಾವಾರ್ಥ : ಲಿಂಗದೇವಾ, ಆದಿತಾಳ, ರೂಪಕತಾಳ ಇತ್ಯಾದಿ ತಾಳಗಳು ನನಗೆ ಗೊತ್ತಿಲ್ಲ. ಇನ್ನು ಒಂದುಸಾಲಿನಲ್ಲಿ ಎಷ್ಟೆಷ್ಟು ಪದಬಂಧಗಳು, ಅಕ್ಷರಗಳು ಇರಬೇಕೋ ಅದನ್ನೂ ನಾನರಿಯೆ. ಆದಿ ಪ್ರಾಸ, ಮಧ್ಯಪ್ರಾಸ, ಅಂತ್ಯಪ್ರಾಸ ಮುಂತಾದವನ್ನೂ ನಾನರಿಯೆ.

ಹಾಡುವ ಕ್ರಮವಾದರೂ ಗೊತ್ತೆ ? ಇಲ್ಲ....ಶ್ರುತಿ, ಆಲಾಪ ಏನೂ ಅರಿಯದ ಅಜ್ಞಾನಿ, ವಾದ್ಯಗಳ ಬಜಾವಣೆಯಾದರೂ ಗೊತ್ತುಂಟೊ ? ಸರ್ವಥಾ ಇಲ್ಲ. ಸಾಲುಗಳ, ಸಾಲುಗಳಲ್ಲಿ ಪದಗಳ, ಪದಗಳಲ್ಲಿ ಅಕ್ಷರಗಳ ಲೆಕ್ಕವನ್ನೂ ಅರಿಯೆ.

ಹೋಗಲಿ ಸಂಗೀತದ ಕ್ರಮ ಹಿಡಿದು ಹಾಡಲು ಬರುವುದಿಲ್ಲವೆಂದರೆ ಸಾಹಿತ್ಯದ ಕ್ರಮವಾದರೂ ತಿಳಿದಿದೆಯೆ ? ಅಮೃತಗಣದಲ್ಲಿ ಬರೆಯಬೇಕೋ, ದೇವಗಣದಲ್ಲಿ ಬರೆಯಬೇಕೋ. ಅದೂ ಬರುತ್ತಿಲ್ಲ. ಇಷ್ಟಿದ್ದರೂ ನಾನು ಹಾಡುವೆ ; ಮನದುಂಬಿ, ಹೃದಯತುಂಬಿ, ಭಾವತುಂಬಿ ನಾನು ನಿನ್ನಡಿಗೆ ಒಲಿದು ಹಾಡುವೆ, ನಲಿದು ಹಾಡುವೆ. ಅದುವೇ ನನ್ನ ಜೀವಾಳ. ಇದು ಬುದ್ಧಿ-ಪಾಂಡಿತ್ಯಗಳ ಕೆರೆಯ ನೀರಲ್ಲ ; ಹೃದಯಭಾವನೆ ಕರಗಿ ಹೊರಹೊಮ್ಮುವ ಚಿಲುಮೆ. ನಿನಗೆ ನಾಶವಿಲ್ಲ ; ನಿನ್ನದು ದೋಷೈಕ ದೃಷ್ಟಿಯಲ್ಲ. ನೀನೊಲಿಯುವುದು ಭಾಷೆಗಲ್ಲ, ಅದರ ಹಿಂದಿನ ಭಾವಕ್ಕೆ ! ನಾನು ಹಾಡುವುದರಲ್ಲಿ ಕ್ರಮವಿಲ್ಲದಿದ್ದರಷ್ಟೆ ನಾನು ಒಲಿದು ಹಾಡಿದುದನ್ನು ನಲಿದು ಸ್ವೀಕರಿಸುವ ನಿನ್ನ ಔದಾರ್ಯದಿಂದಾಗಿ ನಾನು ಹೃದಯತುಂಬಿ ಹಾಡುವೆ.

೪. ವಚನ ಸಾಹಿತ್ಯ ಪರುಷದಂತೆ

ಆದ್ಯರ ವಚನ ಪರುಷ ಕಂಡಣ್ಣಾ ;
ಸದಾಶಿವನೆಂಬ ಲಿಂಗವ ನಂಬುವುದು ;

ನಂಬಲೊಡನೆ ನೀ ವಿಜಯಿ ಕಂಡಣ್ಣಾ ;
ಅಧರಕ್ಕೆ ಕಹಿ ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ.
-ಬ.ವ.ದೀ ೧೭೩

ಭಾವಾರ್ಥ : ಆದ್ಯರು ಅಂದರೆ ಧರ್ಮಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಒಡನಾಡಿಗಳಾಗಿ ಸಮಕಾಲೀನರಾಗಿ ಆಗಿ ಹೋದ ಶರಣರು. ಅವರ ವಚನಗಳು ಪರುಷದಂತೆ. ಹೇಗೆ ಪರುಷವು ಕಬ್ಬಿಣವನ್ನು ಸ್ಪರ್ಶಿಸಿದಾಗ ಕಬ್ಬಿಣವು ಹೊನ್ನಾಗಿ ಮಾರ್ಪಡುವುದೋ ಹಾಗೆ ವಚನಗಳು ಜನರನ್ನು ಪರಿವರ್ತಿಸುತ್ತವೆ. ವಚನ ವಾಙ್ಮಯ ಏನನ್ನು ಕಲಿಸುತ್ತದೆ ? ''ಸದಾಶಿವನೆಂಬ ಲಿಂಗವನ್ನು ನಂಬಲು ಕಲಿಸುತ್ತದೆ''. ಏಕೆಂದರೆ, ದೇವನನ್ನು ನಂಬಿದರೆ ಎಲ್ಲದರಲ್ಲಿಯೂ ಯಶಸ್ಸು ಕಟ್ಟಿಟ್ಟದ್ದು ಎಂಬುದು ವಚನ ವಾಙ್ಮಯದ ಪ್ರಮುಖತತ್ತ್ವ.

ವಚನ ವಾಙ್ಮಯ ತುಂಬಾ ಕಠೋರವಾಗಿಯಾದರೂ ಸತ್ಯವನ್ನು ಪ್ರತಿಪಾದಿಸುತ್ತದೆ. ಅದು ಬೇವಿನಂತೆ, ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಬೇವನ್ನು ತಿಂದಾಗ ನಾಲಿಗೆ ಕಹಿಯನ್ನು ಅನುಭವಿಸುತ್ತದೆ. ಸಹಿಸಿಕೊಂಡು ತಿಂದಾಗ ಉದರದ ಒಳಹೊಕ್ಕ ಬೇವು ಅನೇಕ ಕಾಯಿಲೆಗಳನ್ನು ಕಳೆಯುತ್ತದೆ. ಹಾಗೆ ಮೂಢನಂಬಿಕೆ, ಜಾತೀಯತೆಗಳನ್ನು ಎದುರಿಸುವ ವಚನ ವಾಙ್ಮಯ ಕಠೋರ ಸತ್ಯವನ್ನು ಪ್ರತಿಪಾದಿಸಿ ಕೆಲವರಿಗೆ ಕಹಿಯನ್ನುಂಟು ಮಾಡಿದರೂ, ಅದನ್ನು ಸಹಿಸಿಕೊಂಡು ಬೌದ್ಧಿಕವಾಗಿ ಮೆಲಿದಾಗ ಅದು ವೈಚಾರಿಕ ಪ್ರಜ್ಞೆಯ ಸಿಹಿಯನ್ನು ಪರಿಚಯ ಮಾಡಿಕೊಡುತ್ತದೆ. ವ್ಯಕ್ತಿಯ-ಸಮಾಜದ ಸ್ವಾಸ್ಥ್ಯಕ್ಕೆ ಕಾರಣವಾಗುತ್ತದೆ.

(ಆದ್ಯರು-ವೇದ್ಯರು ಸಾಧ್ಯರು.....ಆದ್ಯರೆಂದರೆ, ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಮೊಳಿಗೆ ಮಾರಯ್ಯ, ಹಡಪದಪ್ಪಣ್ಣ, ಸೊಡ್ಡಳ ಬಾಚರಸರು,ಮರುಳ ಶಂಕರದೇವರು, ಸಿದ್ಧರಾಮಯ್ಯ, ಕಿನ್ನರಯ್ಯ ಮೊದಲಾದ ಪೂರ್ವಾಚಾರ್ಯರುಗಳೆ ಆದ್ಯ ಗಣಂಗಳೆನಿಸುವರು. -ಜಕ್ಕಣಾರ್ಯ. ಬಸವಣ್ಣನವರ ಟೀಕಿನ ವಚನಗಳು, ಸಂಪುಟ ೧. ಪುಟ VIII.)

ವಚನ ಸಾಹಿತ್ಯ ಧಾರ್ಮಿಕ ಸಂವಿಧಾನ

ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು
ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ, ಉಪ್ಪನೀರ ಸವಿದಂತಾಯಿತ್ತಯ್ಯಾ ಯುಕ್ತಿ
ನಿಮ್ಮ ವಚನಂಗಳ ಕೇಳದೆ ಪುರಾಣಂಗಳ ಕೇಳಿ ಕೆಟ್ಟೆನಯ್ಯಾ
ಲಿಂಗದೇವಾ.
-ಬ.ವ.ದೀ. ೨೯೨

ಭಾವಾರ್ಥ : ಅತ್ಯಂತ ಮಧುರವಾದ, ಶುಭ್ರ ಬಿಳಿಯ ಹಾಲಿನ ತೊರೆ ಹರಿಯುತ್ತಿದೆ ಎಂದು ಕಲ್ಪಿಸೋಣ. ಆ ಹಾಲತೊರೆಗೆ ಇರುವ ಕೆಸರು-ಬೆಲ್ಲದ್ದು. ಈ ಹಾಲ ತೊರೆಯ ತಡೆಯಲ್ಲಿರುವದು ಸಕ್ಕರೆಯ ಮಳಲು. ತೊರೆಯ ಮೇಲೆ ಹಾಯುವ ಅಲೆಗಳೋ ಅಮೃತದ್ದು. ಇಂಥದೊಂದು ಹಾಲಿನ ಹಳ್ಳ ಕೈಗೆಟುಕುವಂತೆ ಇರುವಾಗ, ತುಂಬಿಕೊಂಡು ಕುಡಿಯಲು ಯಾವ ಅಡ್ಡಿ ಆತಂಕ ಭೇದವೂ ಇಲ್ಲದಿರುವಾಗ, ಸಂಪೂರ್ಣ ಸ್ವಾತಂತ್ರ್ಯವಿರುವಾಗ, ಅತಿ ಬುದ್ಧಿವಂತಿಕೆ ಅಥವಾ ಅತಿ ಮೌಢ್ಯದಿಂದ ಬೇರೊಂದು ಭಾವಿಯನ್ನು ಶ್ರಮಪಟ್ಟು ತೋಡಿ, ಕಡೆಗೆ ಉಪ್ಪುನೀರನ್ನು ಕುಡಿಯುವವನ ಮೂರ್ಖತನಕ್ಕೆ ಅಳಬೇಕೋ, ನಗಬೇಕೊ ?

ಹಾಗೆಯೇ ಬಸವರೇ ಆದಿ ಪ್ರಮಥರಾಗಿ, ಅವರ ಸಮಕಾಲೀನ ಶರಣರು ಬರೆದ ವಚನ

ವಾಙ್ಮಯ ಇಂಥದೊಂದು ತೊರೆ. ವಚನ ವಾಙ್ಮಯದ ತೊರೆಯ ಸೊಗಸೊ ? ಅನುಭಾವದ ಹಾಲು ಹರಿಯುತ್ತಿದೆ. ಸದ್ಭಕ್ತಿಯ ಬೆಲ್ಲದ ಕೆಸರು, ಸುಜ್ಞಾನದ ಸಕ್ಕರೆಯ ಮಳಲು, ಉದಾತ್ತ ಚಿಂತನೆಯ ನೊರೆ ತೆರೆಗಳು ಹಾಯೆನಿಸುವಂತೆ ಹಾಯುತ್ತಿವೆ. ಎಂತಹ ಮನೋಹರ ಸಾಹಿತ್ಯವಿದು. ಎಲ್ಲರಿಗೂ ಸುಲಭವಾಗಿ ಅಳವಡುವ, ಅರ್ಥವಾಗುವ ಚಿಂತನಶೀಲ ವಾಙ್ಮಯ. ಇಂತಹುದನ್ನು ಕೇಳಿ, ಆನಂದಿಸಿ, ಮನನಿಸಿ, ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳುವ ಬದಲು ಉಳಿದ ಕಟ್ಟುಕಥೆಗಳ ಪುರಾಣ ಕೇಳುತ್ತ ಕಾಲ ಹರಣ ಮಾಡುವುದು, ತರ್ಕ ವಿತರ್ಕ, ವಾದ-ವಿವಾದ ಮಾಡುತ್ತ ಕಾಲ ಕಳೆಯುವುದು ಶ್ರಮಪಟ್ಟು ಭಾವಿ ತೆಗೆದು ಉಪ್ಪನೀರನ್ನು ಕುಡಿದಂತೆ ಕಾಲವ್ಯಯ, ವ್ಯರ್ಥ ಪರಿಶ್ರಮಕ್ಕೆ ಕಾರಣವಾಗುವುದು. ★

ಬಸವನ ಬಳ್ಳಿ

ಬಸವನೆಂಬ ಮಲ್ಲಿಗೆ ಬಳ್ಳಿ ಹಬ್ಬಿತು ಡೆಲ್ಲಿಯವರೆಗೆ
ಊಟಿ, ಹೈದರಾಬಾದ್ ಮುಂಬೈವರೆಗೆ, ಈಚಲಕರಂಜಿಯವರೆಗೆ
ಕರ್ನಾಟಕದ ಹಳ್ಳಿ ಹಳ್ಳಿಯವರೆಗೆ
ಬಸವನೆಂಬ ಮಲ್ಲಿಗೆಯ ಬಳ್ಳಿ ಕೊಂಡೊಯ್ಯಿತು
ಶ್ರೀ ಸಾಮಾನ್ಯರ ಶರಣ ಧರ್ಮದ ಕಡೆಗೆ
ಕೊಂಡೊಯ್ಯಿತು ಶರಣ ಮೇಳದೆಡೆಗೆ
ಕೂಡಲಸಂಗಮದ ಲಿಂಗದೇವನೆಡೆಗೆ
ಮಾತೆ ಕರೆ ತಂದರು ಎಲ್ಲ ಶರಣರ ಒಂದೆಡೆಗೆ

ಬಸವ ದೀಪ್ತಿ ಸೇರಿಸಿತು ಎಲ್ಲ ಗುರುಗಳ ಒಂದೆಡೆಗೆ ?
ಪರಿಚಯಿಸಿತು, ಎಲ್ಲ ರಾಜಕಾರಣಿಗಳ ಸಾಹಿತಿಗಳ
ದಪ್ಪ, ದಪ್ಪ ಕಾವಿಪೇಟದ ಸ್ವಾಮಿಗಳ
ಕಕ್ಕಿಸಿತು ಪಡಲಾಳದ ಕಹಿ ಮಾತ್ಸರ್ಯದ ಒಟ್ಟಗೆ
ಕಾವಿ ಧರಿಸಿದರು, ರುದ್ರಾಕ್ಷಿ ಕಟ್ಟಿದರು, ವಿಭೂತಿ ಧರಿಸಿದರು
ವಚನ ಹೇಳಿದರು, ಸನ್ಮಾನ ಸಮಾರಂಭದಲ್ಲಿ ಮಿಂಚಿದರು
ಭಕ್ತರಿಂದ ಕಾಂಚನ ಹಾರ ತುರಾಯಿ
ಹಾಲು ಹಣ್ಣು ಪಡೆದರು ಕರ್ನಾಟಕದಲ್ಲಿ ಸುಖವಾಗಿ ಬೆಳೆದರು
ಲಿಂಗದೇವನ ಮಹಿಮೆ ಅರಿಯದಾದರು
ಬಹುದೇವತೋಪಾಸನೆಗೆ ಶರಣಾದರು
ಏಕದೇವೋಪಾಸನೆಗೆ ಎರವಾದರು
ಬಸವ ಗುರುಪರಂಪರೆಗೆ ದೂರವಾದರು.

ಬಿ.ಎಂ.ರುದ್ರಶೆಟ್ಟಿ
ರಾಷ್ಟ್ರೀಯ ಬಸವ ದಳ, ಹಾಸನ

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿದಯವಿಟ್ಟು ಪತ್ರ ಬರೆಯಿರಿ.
-ವ್ಯವಸ್ಥಾಪಕರು

ಬಸವ ಸ್ತೋತ್ರದ ವಚನ

-ಮಾತೆ ಅಕ್ಕಮಹಾದೇವಿ

(ಸಿದ್ಧರಾಮೇಶ್ವರ ಸ್ತೋತ್ರ ತ್ರಿವಿಧಿಯನ್ನು ಆಲಿಸಿದ ಸ್ಫೂರ್ತಿಯಿಂದ ಬರೆದುದು. ದಿ. ೩೦-೧-೨೦೦೦)

೧. ಬಸವಣ್ಣನೇ ಶರಣರಿಗೆ ಭಕ್ತಿಯ ಬೀಜವಯ್ಯಾ ;
ಬಸವಣ್ಣನೇ ಶರಣರಿಗೆ ಮುಕ್ತಿಯ ಪಥವಯ್ಯಾ ;
ಬಸವಣ್ಣನನೆ ಹಾಡಿ ಹೊಗಳಿ
ಹೃದಯ ಮಂದಿರದಲ್ಲಿರಿಸಿಕೊಂಡು ಪೂಜಿಸಿದ
ಶರಣರ ಶ್ರೀ ಪಾದವ ನೆನೆದು ಬದುಕಿದೆನು ಕಾಣಾ,
ಮಾತಾ ಪ್ರಿಯ ಸಚ್ಚಿದಾನಂದ ॥

೨. ಸ್ಮರಿಸುವೆನಯ್ಯಾ ಬಸವಣ್ಣನ ಅನುದಿನವೂ
ನೆನೆವೆನಯ್ಯಾ ಬಸವಣ್ಣನ ಅನವರತವೂ
ಜಪಿಸುವೆನಯ್ಯಾ ಬಸವ ಮಂತ್ರವ ಎಡೆಬಿಡದೆ
ಕುಳಿತಲ್ಲಿ, ನಿಂತಲ್ಲಿ, ನಡೆವಲ್ಲಿ, ನುಡಿವಲ್ಲಿ
ಕೊಡುವಲ್ಲಿ, ಕೊಂಬಲ್ಲಿ ಬಸವ ನಾಮವ
ನೆನೆ ನೆನೆದು ಹೊಂದುವ ಬಸವಾನಂದವ
ಉಪಮಿಸಲರಿಯೆನಯ್ಯಾ ಮಾತಾ ಪ್ರಿಯ ಸಚ್ಚಿದಾನಂದ.

('ಬಸವ ದರ್ಶನ' ಪುಸ್ತಕದಲ್ಲಿಯ ವಚನಗಳನ್ನು ಓದಿದ ಮೇಲೆ ಉಂಟಾದ ಸ್ಫೂರ್ತಿಯಿಂದ ಬರೆದದ್ದು. ದಿ. ೩೧-೧-೨೦೦೦)

೩. ಹಾಡುವೆನಯ್ಯಾ ಮನದುಂಬಿ ಬಸವಗೀತೆಯ
ಪೂಜಿಸುವೆನಯ್ಯಾ ಹೃದಯತುಂಬಿ ಬಸವಮೂರ್ತಿಯ
ಜಪಿಸುವೆನಯ್ಯಾ ಭಕ್ತದುಂಬಿ ಬಸವ ಮಂತ್ರವ
ತಪಿಸುವೆನಯ್ಯಾ ಹಂಬಲದುಂಬಿ ಬಸವ ಕೃಪೆಗೆ
ಹಾಡಿ, ಪೂಜಿಸಿ, ಜಪಿಸಿ, ತಪಿಸುತ್ತ
ಬಸವ ಭಕ್ತಿಯಲ್ಲಿ ಬೆರೆತು ಒಂದಾದ
ಎನ್ನ ಮನದ ಸ್ಥಿತಿಯ ವರ್ಣಿಸಲರಿಯದೆ
ಶಬ್ದಮುಗ್ಧಳಾದೆನಯ್ಯಾ ಮಾತಾಪ್ರಿಯ ಸಚ್ಚಿದಾನಂದ ॥

೪. ಬಸವ ದೀಪ್ತಿಯ ಉದ್ದೀಪಿಸಿದರು
ಪೂಜ್ಯ ಗುರು ಲಿಂಗಾನಂದರು ;
ಬಸವ ತತ್ತ್ವ ಜ್ಯೋತಿಗೆ ತಮ್ಮ ಜೀವನದ
ತೈಲ ಧಾರೆಯೆರೆದರು ಪೂಜ್ಯ ಮಾತಾಜಿಯವರು ;
ಇಂಥ ಪ್ರಜ್ವಲಿತ ಬಸವ ಪ್ರಭೆಯ

ಮನೆ-ಮನಂಗಳಲ್ಲಿ ಬೆಳಗಿಸಿದ
ಪೂಜ್ಯದ್ವಯರ ಸಾಧನೆಗೆ ಮೆಚ್ಚಿ ಶರಣಾದೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೫. ಬಸವಣ್ಣನ ಭಕ್ತಿಯ ಮಹಿಮೆಯ
ನಾನರಿಯಲಾರೆನಯ್ಯಾ ;
ಬಸವಣ್ಣನ ಶಕ್ತಿಯ ಘನವ
ನಾ ತಿಳಿಯಲಾರೆನಯ್ಯಾ ;
ಬಸವಣ್ಣನ ಜ್ಞಾನದಾಳ
ಎನ್ನ ಬುದ್ಧಿಗೆ ನಿಲುಕದಯ್ಯಾ ;
ಬಸವಣ್ಣನ ದಯಾ ಗುಣ ಎನಗೆ
ಅಳವಡುವುದೇ ಅಯ್ಯಾ ?
ಬಸವಣ್ಣನ ಭಕ್ತಿಪಥದಲ್ಲಿ ನಡೆವುತ್ತ
ಬಸವಣ್ಣನ ಕರುಣೆಗಾಗಿ ಹಗಲಿರುಳು ಹಂಬಲಿಸುತ್ತಿಹೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೬. ಬಸವಣ್ಣ ನಡೆದುದೇ ಬಟ್ಟೆಯಾಯಿತ್ತು ಶರಣರಿಗೆ
ಬಸವಣ್ಣ ನುಡಿದುದೇ ಶಾಸ್ತ್ರವಾಯಿತ್ತು ಶರಣರಿಗೆ
ಬಸವಣ್ಣನ ನೋಡಿದವರೆಲ್ಲ ಉತ್ತಮ ಶರಣರಾದರು
ಬಸವಣ್ಣ ಸ್ಪರ್ಶಿಸಿದ್ದೆಲ್ಲ ಪವಿತ್ರವಾಯಿತು ಶರಣರಿಗೆ
ಬಸವಣ್ಣ ಭಾವಿಸಿದಂತಾಗುತ್ತಿತ್ತು ಶರಣರಿಗೆ
ಇಂತೀ ಪಂಚಪರುಷವಳವಟ್ಟ ಬಸವಣ್ಣನ
ನಿಜಪದದಲ್ಲಿ ಬಯಲಾದ ಶರಣರ ಪಾದಕ್ಕೆ
ಅಹೋರಾತ್ರಿ ಶರಣೆಂದು ಬದುಕುವೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ ॥

೭. ಎನಗೆ ಬಸವಣ್ಣನದೇ ಬಟ್ಟೆ
ಎನಗೆ ಬಸವಣ್ಣನದೇ ನಡೆ
ಎನಗೆ ಬಸವಣ್ಣನದೇ ನುಡಿ
ಎನಗೆ ಬಸವಣ್ಣನದೇ ರೂಪ
ಎನಗೆ ಬಸವಣ್ಣನದೇ ಮಾತು
ಎನಗೆ ಬಸವಣ್ಣನದೇ ಬುದ್ಧಿ
ಎನಗೆ ಬಸವಣ್ಣನದೇ ಜ್ಞಾನ
ಎನಗೆ ಬಸವಣ್ಣನದೇ ಕೃಪೆ
ಎನಗೆ ಬಸವಣ್ಣನದೇ ಅರಿವು
ಎನಗೆ ಬಸವಣ್ಣನದೇ ಆದರ್ಶ

ಎನಗೆ ಬಸವಣ್ಣನದೇ ಆನಂದ
ಬಸವಣ್ಣನನ್ನು ಆಳವಾಗಿ ಅರಿತ ಶರಣರು
ಹಾಡಿ ಹೊಗಳಿದ ಪೂಜ್ಯ ಮಾತಾಜಿಯವರು,
ಸಂಗ್ರಹಿಸಿ ಪ್ರಕಟಿಸಿದ ವಚನಗಳ ಪಠಿಸಿ, ಆಲಿಸಿ
ಲೇಖಿಸಿ, ನಿದ್ರೆಯಲ್ಲಿ, ಕನಸಲ್ಲಿ, ಮಾತಲ್ಲಿ, ಮನದಲ್ಲಿ
ಬಸವಣ್ಣನೇ ತುಂಬಿ ಸರ್ವವೆಲ್ಲವೂ
ಎನಗೆ ಬಸವಣ್ಣನೇ ಆಗಿ ಕಾಣುತಿಹುದಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೮. ಕೈ ಹಿಡಿದ ಪತ್ನಿಗೆ ಮಗನಾದ ಬಸವಣ್ಣ
ಕಳ್ಳನಲಿ ಲಿಂಗದೇವನ ಕಂಡ ಬಸವಣ್ಣ
ಕೊಲೆಗಡುಕನನ್ನು ಶರಣನನ್ನಾಗಿಸಿದ ಬಸವಣ್ಣ
ಆಕಳ ಕದ್ದೊಯ್ದ ಕಳ್ಳರಿಗೆ ಕರುಗಳ
ಕಳಿಸಿದಾತ ಬಸವಣ್ಣ
ಜಂಗಮರಲ್ಲಿ ತನ್ನ ಪ್ರಾಣವನ್ನಿರಿಸಿಕೊಂಡ ಬಸವಣ್ಣ
ಜಗವನೇ ಮಹಾಮನೆಯಾಗಿಸಿದಾತ ಬಸವಣ್ಣ
ಇಂಥ ಬಸವಣ್ಣನ ತತ್ತ್ವ ಪ್ರಚಾರ ಈ ಶತಮಾನದಲಿ
ಮತ್ತೆ ಮರುಕಳಿಸುವಂತೆ ಮಾಡಿದ
ಪೂಜ್ಯ ಅಪ್ಪಾಜಿ, ಮಾತಾಜಿಯವರ ಕಾರ್ಯಕ್ಕೆ
ನಾನು ಕೃತಜ್ಞಳಾಗಿಹೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

೯. ಪ್ರಭುದೇವರ ಶೂನ್ಯಪೀಠಾಧ್ಯಕ್ಷರನ್ನಾಗಿಸಿದಾತ ಬಸವಣ್ಣ
ಅಕ್ಕಮಹಾದೇವಿಯ ವೈರಾಗ್ಯನಿಧಿಯಾಗಿಸಿದಾತ ಬಸವಣ್ಣ
ಚೆನ್ನಬಸವಣ್ಣನವರ ಚಿನ್ಮಯಜ್ಞಾನಿಯಾಗಿಸಿದಾತ ಬಸವಣ್ಣ
ಸಿದ್ಧರಾಮೇಶ್ವರರ ಶಿವಯೋಗಿಯಾಗಿಸಿದಾತ ಬಸವಣ್ಣ
ನೀಲಾಂಬಿಕಾ ತಾಯಿಯ ಶಿವಯೋಗಿಣಿಯಾಗಿಸಿದಾತ ಬಸವಣ್ಣ
ಕಕ್ಕಯ್ಯನ ಮಹಾಪ್ರಸಾದಿಯಾಗಿಸಿದಾತ ಬಸವಣ್ಣ
ಮಾದಾರ ಚನ್ನಯ್ಯನ ಮಹಾದಾಸೋಹಿಯಾಗಿಸಿದಾತ ಬಸವಣ್ಣ
ಹರಳಯ್ಯ ಕಲ್ಯಾಣಮ್ಮನವರ ತ್ಯಾಗವ
ಅಜರಾಮರವಾಗಿಸಿದಾತ ಬಸವಣ್ಣ
ಇಂತಪ್ಪ ಅಸಂಖ್ಯಾತ, ಅಪ್ರತಿಮ ಶರಣರ
ರೂಪುಗೊಳಿಸಿದ ರೂಹಾರಿ ಬಸವಣ್ಣನ
ಧರ್ಮಪಿತರೆಂದು ಸಾರಿ ಬಸವ ಪ್ರಕಾಶವ
ಜಗಕೆಲ್ಲ ಪಸರಿಸಿದ

ಪೂಜ್ಯ ಗುರು ಲಿಂಗಾನಂದರು, ಪೂಜ್ಯ ಮಾತಾಜಿಯವರ
ಅದ್ಭುತ ಸಾಧನೆಗೆ ಮರುಳಾಗಿ
ಎನ್ನ ತನುಮನವ ಬಸವ ಸೇವೆಗೆ
ಮೀಸಲಾಗಿರಿಸಿದೆನಯ್ಯಾ ಮಾತಾಪ್ರಿಯ ಸಚ್ಚಿದಾನಂದ ॥

ಬಸವ ದರ್ಶನದಲ್ಲಿಯ ವಚನಗಳನ್ನು ಲೇಖನ ಮಾಡಲಾರಂಭಿಸಿದ ನಂತರ ಭಕ್ತಿ-ಭಾವದ ಸೆಲೆ ಇಮ್ಮಡಿ-ಮುಮ್ಮಡಿ ಚಿಮ್ಮಿದಂತಾಗಿ ಬಸವಣ್ಣನ ವ್ಯಕ್ತಿತ್ವವೇ ಅದ್ಭುತವೆನಿಸತೊಡಗಿತು.

ವಚನ ಲೇಖನವಾರಂಭಿಸಿದ ನಂತರ ಬರೆದದ್ದು ದಿ. ೧-೨-೨೦೦೦

೧೦. ನೋಡುತಿಹ ನೋಟವೆಲ್ಲವೂ ಬಸವಣ್ಣನೆ
ಕಾಣುತಿಹ ದೃಶ್ಯವೆಲ್ಲವೂ ಬಸವಣ್ಣನೇ
ನಡೆವ ದಾರಿಯಲ್ಲೆಲ್ಲ ಬಸವಣ್ಣನೇ
ನುಡಿವ ಶಬ್ದಗಳಲ್ಲೆಲ್ಲ ಬಸವಣ್ಣನೆ
ಇಂತಪ್ಪ ಬಸವ ರೂಪವು ಎನ್ನ ಕಣ್ಣ ಮುಂದೆ
ಸುಳಿ ಸುಳಿದು ತೋರುತ್ತಿಹುದಾಗಿ
ಬಸವ ನೆನಹಿನಲ್ಲೆನ್ನ ಮನ ಮುಳುಗಿ
ನಿನ್ನ ನೆನಹಿಗೆ ಇಂಬಿಲ್ಲದಂತಾಗಿದೆಯಯ್ಯಾ , ಮುನಿಯದಿರಯ್ಯ
ಮಾತಾ ಪ್ರಿಯ ಸಚ್ಚಿದಾನಂದ ॥

೧೧. ಎನ್ನ ಭಕ್ತಿಯ ಬೆಳೆಸಿರಿ ಬಸವಣ್ಣನಯ್ಯಾ
ಎನ್ನ ಜ್ಞಾನದ ಐಸಿರಿ ಬಸವಣ್ಣನಯ್ಯಾ
ಎನ್ನ ಬುದ್ಧಿಯ ಬಲಿಸುವಾತ ಬಸವಣ್ಣನಯ್ಯಾ
ಎನ್ನ ಶಕ್ತಿಯ ಬೆಳೆಸುವಾತ ಬಸವಣ್ಣನಯ್ಯಾ
ಎನ್ನಲ್ಲಿ ಯುಕ್ತಿಯ ನೆಲೆಗೊಳಿಸುವಾತ ಬಸವಣ್ಣನಯ್ಯಾ
ಎನ್ನ ಮುಕ್ತಿಪಥದ ಮಾರ್ಗದರ್ಶಕ ಬಸವಣ್ಣನಯ್ಯಾ
ಎನ್ನದು ನಿನ್ನದು ಎಲ್ಲವೂ ಬಸವಣ್ಣನೆಯಾಗಿ
ಬಸವಣ್ಣನ ಅರಿವಿನಲ್ಲಿದ್ದು ನಾ ನಿಮ್ಮ ಮರೆದೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

೧೨. ಪರಮ ಗುರುವಾದಾತ ಬಸವಣ್ಣ
ಲಿಂಗವ ಶೋಧಿಸಿದಾತ ಬಸವಣ್ಣ
ಜಂಗಮವ ನೆಲೆಗೊಳಿಸಿದಾತ ಬಸವಣ್ಣ
ಷಡುಸ್ಥಲವನರುಹಿದಾತ ಬಸವಣ್ಣ
ಅಷ್ಟಾವರಣಗಳ ನಿಷ್ಠಗೊಳಿಸಿದಾತ ಬಸವಣ್ಣ
ಪಂಚಾಚಾರಗಳ ಪಡಿಯಚ್ಚನಿತ್ತ ಬಸವಣ್ಣ
ಇಂತಹ ಬಸವಣ್ಣನನಂತ ತತ್ತ್ವಗಳನ್ನುಳುಹಲು

ಬಸವ ಧರ್ಮ ಪೀಠವ
ಕೂಡಲಸಂಗಮದಲ್ಲಿ ಸ್ಥಾಪನೆಗೊಳಿಸಿದರಯ್ಯಾ
ಪೂಜ್ಯ ಅಪ್ಪಾಜಿ-ಮಾತಾಜಿಯವರು
ಮಾತಾ ಪ್ರಿಯ ಸಚ್ಚಿದಾನಂದ ॥

೧೩. ತಾಯ್ತಂದೆಗಳಾರೆಂದರಿಯದೆ ತಿರು ತಿರುಗಿ
ಬಳಲುತ್ತಿರುವ ಮಗುವಿನಂತೆ
ದೆಸೆಗೆಟ್ಟು ಹೋಗುತಿಹ ಸಮಾಜಕ್ಕೆ
ಬಸವಣ್ಣನೇ ಧರ್ಮಪಿತ
ವಚನ ಸಾಹಿತ್ಯವೇ ಧರ್ಮಸಂಹಿತೆಯೆಂದು
ಧರ್ಮ ಮಾತಾ-ಪಿತರ ಮನವರಿಕೆ ಮಾಡಿಸಿ
ಷಟಸೂತ್ರದ ಕಟ್ಟಿನಲ್ಲಿ
ಧರ್ಮಬಾಂಧವರೊಡಗೂಡಲು
ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮವ
ಧರ್ಮಕ್ಷೇತ್ರವೆಂದು ಗುರುತಿಸಿ
ಶರಣ ಮೇಳವ ಮಾಡಿ ಶರಣರನ್ನೊಂದುಗೂಡಿಸಿ
ಬಸವ ಪತಾಕೆಯನೆತ್ತಿ ಹಿಡಿದರಯ್ಯಾ
ಪೂಜ್ಯ ಅಪ್ಪಾಜಿ-ಮಾತಾಜಿಯವರು
ಮಾತಾ ಪ್ರಿಯ ಸಚ್ಚಿದಾನಂದ ॥

★

೫೫ನೆಯ ಮಾತಾಜಿಯವರ ವರ್ಧಂತಿಗಾಗಿ ನುಡಿಕಾಣಿಕೆ

ಚಿನ್ಮೂಲಾದ್ರಿಯ ಚಿತ್ಕಳೆ ಶ್ರೀ ರತ್ನ !
ಅಕ್ಕನ ಪೀಠದ ಮಹಾರತ್ನ ॥೧॥

ಚಿನ್ಮೂಲಾದ್ರಿಯ ಶ್ರೀದೇವಿ
ಅನುಭಾವ ಪೀಠದ ಮಹಾದೇವಿ ॥೨॥

ಅಂದು ಬಂದಿರಿ ಲಿಂಗಾನಂದರ ಶಿಷ್ಯರಾಗಿ
ಇಂದು ಇರುವಿರಿ ಬಸವ ಭಕ್ತರಿಗೆ ನೆರಳಾಗಿ ॥೩॥

ಆದಿರಿ ವಿಶ್ವದ ಪ್ರಥಮ ಮಹಿಳಾಗುರುವು
ತೊಡೆದು ಲೋಕದ ಎಮ್ಮಯ ಮರೆವು ॥೪॥

ವಿಶ್ವಧರ್ಮ ಪ್ರಚಾರ ನೀವು ಮಾಡಿದಿರಿ
ವಿಶ್ವ ಸೋದರತ್ವ ತತ್ತ್ವವ ಸಾರಿದಿರಿ ॥೫॥

ಬಸವ ಧರ್ಮದ ಕ್ರಾಂತಿಯ ಹೆಜ್ಜೆ ಇಟ್ಟು
ಜರಿದು ಭ್ರಾಂತಿ ಜನರ ಮೂಢ ಚೌಕಟ್ಟು ॥೬॥

ಬಸವನ ಕುವರಿ ಮಾತಾಜಿ
ಅಕ್ಕನ ಪ್ರತಿರೂಪ ಮಾತಾಜಿ ॥೭॥

ಬಸವನ ಆದೇಶ ನಿಮಗಾಯ್ತು
ಲಿಂಗದೇವನ ಮಹಿಮೆ ಬಯಲಾಯ್ತು ॥೮॥

ಬಸವ ಚೇತನ ನಿಮ್ಮಯ ಉಸಿರು
ಐವತ್ತು ನಾಲ್ಕರ ತತ್ತ್ವದ ಹಸಿರು ॥೯॥

ವೆಂಕಟೇಶ್ ಲಿಂಗಾಯತ
ರಾಷ್ಟ್ರೀಯ ಬಸವ ದಳ, ತುಮಕೂರು

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ.

ತಾತ್ತ್ವಿಕ ತಪ್ಪು ಮಾಡಲಸಾಧ್ಯ

-ಮಾತಾಜಿ

'ವಚನ ಸೌರಭ' ಎಂಬ ಪುಟ್ಟ ವಚನ ಸಂಗ್ರಹವನ್ನು ಮಾಡಿಸಿ, ಮದುವೆ, ನಾಮಕರಣ, ಗೃಹಪ್ರವೇಶ, ಲಿಂಗೈಕ್ಯ ಸಂಸ್ಮರಣೆ ಮುಂತಾದ ಸಮಯದಲ್ಲಿ ಹಂಚಲು ಶರಣ ಬಂಧುಗಳಿಗೆ ಸೂಚನೆ ನೀಡಲಾಗಿದ್ದು ಅವರು ಹಂಚುವರು. ಅಂಥ ಒಂದು ಸನ್ನಿವೇಶದಲ್ಲಿ ಹಂಚಲು ಒಂದು ಸಾವಿರ ಪ್ರತಿ ಮುದ್ರಿಸಿಕೊಡಲು ಓರ್ವ ಶರಣರು ಕೇಳಿಕೊಂಡರು ; ಆದರೆ ಧರ್ಮಪಿತ ಬಸವಣ್ಣನವರ ವಚನ ಮುದ್ರಿಕೆ ಕೂಡಲ ಸಂಗಮದೇವ ಇಟ್ಟು ಮುದ್ರಿಸಿ ಕೊಡಬೇಕೆಂದು ವಿನಂತಿಸಿಕೊಂಡರು. ಅದಕ್ಕೆ ನಾನು ಒಪ್ಪಲಿಲ್ಲ. ''ಅದು ತಪ್ಪೆಂದು, ಬಸವ ಸಿದ್ಧಾಂತಕ್ಕೆ ಒಪ್ಪದ ಪದವೆಂದು ತಿಳಿದ ಮೇಲೆ ಇನ್ನು ಮುದ್ರಿಸಲು ಸಾಧ್ಯವಿಲ್ಲ; ನೀವೇ ಬೇಕಾದರೆ ಮಾಡಿಕೊಳ್ಳಿ, ನಾವು ಮಾಡಿದರೆ ಅದು ತತ್ತ್ವಚ್ಯುತಿಯಾಗುತ್ತದೆ'' ಎಂದೆ. ಏಕೆಂದರೆ ಶಿವಯೋಗಿ ಸಿದ್ಧರಾಮೇಶ್ವರರು ಹೇಳಿದ್ದಾರೆ :

ಕಸವ ಕೊಂಡು ಹೊಸಧಾನ್ಯವ ಕೊಟ್ಟಡೆ
ಒಲ್ಲೆಂಬ ಚದುರರಾರು ?
ಜಲವ ಕೊಂಡು ಅಮೃತವ ಕೊಟ್ಟಡೆ
ಒಲ್ಲೆಂಬ ಭಾಷೆಯದಾರದು ?
ಎನ್ನಂತರಂಗದ ಅಜ್ಞಾನವ ಕೊಂದು
ಸುಜ್ಞಾನವಪ್ಪ ಕರತೇಜವ ಕೊಟ್ಟಡೆ
ಒಲ್ಲೆಂಬ ಪಾತಕಿ ಯಾರು ? ಕಪಿಲಸಿದ್ಧಮಲ್ಲಿಕಾರ್ಜುನಾ

ಅರಿವು ಮತ್ತು ಧರ್ಮಪಿತರ ಆದೇಶವಾಗುವ ಪೂರ್ವದಲ್ಲಿ ಗೊತ್ತಿಲ್ಲದೆ ಕೂಡಲಸಂಗಮದೇವ ಬಳಸುತ್ತಿದ್ದೆವು ಮತ್ತು ಕೆಲ ವರ್ಷಗಳ ಹಿಂದೆಯೇ ''ಕೂಡಲಸಂಗಮದೇವ'' ಬಸವ ಸಿದ್ಧಾಂತಕ್ಕೆ ಸರಿ ಹೊಂದದ ಪದ ಎಂದು ಅಂತರಂಗವು ನುಡಿಯುತ್ತಿದ್ದರೂ ಪರ್ಯಾಯ ಪದ ಸಿಗದೆ ತೊಳಲಾಡುತ್ತಿದ್ದೆವು. ಒಂದು ದಿನ ಧರ್ಮಪಿತರು ದಿವ್ಯ ಆದೇಶ ನೀಡಿದ ಮೇಲೆ ''ಲಿಂಗದೇವ'' ಎಂಬ ಸೈದ್ಧಾಂತಿಕ ಅನರ್ಘ್ಯರತ್ನ ದೊರೆತ ಮೇಲೆ ಅದರ ಆಳ-ಹರಹು ತಿಳಿದ ಮೇಲೆ ಇನ್ನು ಅದರ ಹೊರತು ಹಳೆಯ ವಚನಾಂಕಿತ ಬಳಸಲು ಸಾಧ್ಯವೇ ಆಗದ ಮನಸ್ಥಿತಿ ಬಂದಿದೆ.

ವಿಶೇಷ ಸೂಚನೆ :

ಧರ್ಮಪಿತ ಬಸವಣ್ಣನವರ ೮೦೦ನೆಯ ಲಿಂಗೈಕ್ಯ ದಿನ ೧೯-೮-೧೯೯೬ರಂದು ಬಿಡುಗಡೆ ಮಾಡಿದ ಬಸವ ವಚನ ದೀಪ್ತಿ ಪುಸ್ತಕಗಳು ಆರು ಸಾವಿರ ಪ್ರತಿ ಮುದ್ರಿಸಿದ್ದು ಅವೆಲ್ಲವೂ ಮುಗಿದು, ಮಾರಾಟಕ್ಕೆ ಲಭ್ಯವಿಲ್ಲವಾಗಿವೆ. ವಚನ ಲೇಖನ ವ್ರತಕ್ಕಾಗಿ ಬಸವ ವಚನ ದೀಪ್ತಿ, ಬಸವ ದರ್ಶನ ಕೃತಿಗಳಿಗೆ ಬಹಳ ಬೇಡಿಕೆ ಇದೆ. ಬಸವ ದರ್ಶನ ಕೃತಿ (ಬೆಲೆ ೭೦ ರೂ.)ಲಭ್ಯವಿದೆ. ಧರ್ಮಪಿತರ ವಚನಗಳನ್ನು ಬರೆಯುವಾಗ, ಓದುವಾಗ ಸೃಷ್ಟಿಕರ್ತ ಸೂಚಕವಾಗಿ ಬಂದ ವಚನಗಳಲ್ಲಿ ಕೂಡಲಸಂಗಮದೇವದ ಬದಲಿಗೆ 'ಲಿಂಗದೇವ' ಎಂದೇ ಓದಿಕೊಳ್ಳಬೇಕು, ಬರೆಯಬೇಕು. ಆದ್ದರಿಂದ ಬೇರೆಯವರ ವಚನದ ಪುಸ್ತಕ ಬಳಸಿದರೂ ವಚನ ಮುದ್ರಿಕೆ ಮಾತ್ರ ''ಲಿಂಗದೇವ'' ಬಳಸಬೇಕು. ತಾತ್ತ್ವಿಕ ಲೋಪ ಮಾಡಬಾರದಾಗಿ ಶರಣ ಬಂಧುಗಳಲ್ಲಿ ವಿನಂತಿ.

.....ಲಿಂಗದೇವನ ದೃಷ್ಟಿಯವನ ಮೇಲೆ ಬಿದ್ದವ ಜಗಜಟ್ಟಿ

ಅಮರ ಗುರು ಲಿಂಗಾನಂದ
ಇದೂ ಬಸವ ಲೀಲೆಯೆ ?!

-ಮಾತಾಜಿ

ಇದು (೧೦-೪-೨೦೦೦) ದಿನಪತ್ರಿಕೆಗಳನ್ನು ಓದುತ್ತಿದ್ದೆ. ಹಳಸಲು ಅನ್ನಕ್ಕೆ ಒಗ್ಗರಣೆ ಹಾಕಿದಂತೆ ಹಳೆಯ ಸುದ್ದಿಯನ್ನೇ ಚಿತ್ರದುರ್ಗದ ಬೃಹನ್ಮಠದ ಶಿಷ್ಯರಾದ ಬಿ.ಎಸ್.ಹಿರೇಮಠರು ಪತ್ರಿಕೆಗಳಲ್ಲಿ ಕೊಟ್ಟಿದ್ದರು. ೧೯೯೬ರ ಅಕ್ಟೋಬರದಲ್ಲಿ ಚಿತ್ರದುರ್ಗದ ಒಂದು ಕೋರ್ಟ್ ಕೊಟ್ಟ ಯಥಾಸ್ಥಿತಿ ಕಾಯ್ದುಕೊಳ್ಳುವ ಆದೇಶವನ್ನು ಪುನಃ ಪ್ರಕಟಿಸಲಾಗಿತ್ತು. ಆ ಪತ್ರಿಕಾ ಪ್ರಕಟಣೆಯಲ್ಲಿ ಇದ್ದ ಒಂದು ವಾಕ್ಯ ಇಂದು ವಿಶೇಷ ಗಮನ ಸೆಳೆಯಿತು. ಅದೆಂದರೆ ಕೂಡಲ ಸಂಗಮದೇವ ವಚನಾಂಕಿತದ ಬದಲು ತಮ್ಮ ಗುರುವಿನ ಸ್ಮರಣಾರ್ಥ 'ಲಿಂಗದೇವ' ಎಂದು ಬದಲಾಯಿಸಿ'' ಎಂಬ ವಾಕ್ಯ. ಹಿರೇಮಠರ ಈ ವಾಕ್ಯ ಹೊಸ ಚಿಂತನೆಗೆ ಪ್ರೇರಣೆ ನೀಡಿತು.

ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರು ನಮಗೆಲ್ಲ ಚಿಂತನೆಯ ವಿಶೇಷ ದಿಕ್ಕನ್ನು ತೋರಿಸಿದರು. ೧. ಸೃಷ್ಟಿಕರ್ತ ಪರಮಾತ್ಮನನ್ನು ಪೂಜಿಸಲು ಹೇಳಿದ್ದು ಲಿಂಗಾಯತ ಧರ್ಮ ; ನಾವು ಯಾವುದೇ ವ್ಯಕ್ತಿಯ ಪೂಜಕರಲ್ಲ ; ಶಿವಪೂಜಕರಲ್ಲ ; ಅನೇಕರು ತಿಳಿದಂತೆ ತಮೋಗುಣಪ್ರಧಾನ ದೇವತೆ ರುದ್ರನ ಪೂಜಕರಲ್ಲ ; ನಿರಾಕಾರ ನಿರ್ಗುಣನಾದ ಪರಮಾತ್ಮನ ಪೂಜಕರು. ಈ ದಿಶೆಯಲ್ಲಿ ಇದನ್ನು ಪ್ರತಿಪಾದಿಸಿ ಪೂಜ್ಯರು ಬರೆದ ದೇವರು, ಲಿಂಗತತ್ತ್ವದರ್ಪಣ ಉದ್ದಾಮ ಕೃತಿಗಳು. ಪೂಜ್ಯ ಅಪ್ಪಾಜಿಯವರ ಪ್ರವಚನ ಗ್ರಂಥಗಳಿಂದಲೇ ಲಿಂಗನಿಷ್ಠೆ ಬೆಳೆದುದು ಎಂಬುದನ್ನು ನಮ್ಮ ವಿರೋಧಿಗಳೂ ಒಪ್ಪಿಕೊಳ್ಳುತ್ತಾರೆ.

೨. ಅಷ್ಟಾವರಣದಲ್ಲಿ ಬರುವ ಗುರು ; ಇಲ್ಲಿ ವ್ಯಕ್ತಿ ಗುರು, ದೀಕ್ಷಾ ಗುರು, ವೈಯಕ್ತಿಕ ಗುರು ಎಂದಿದ್ದರೆ ಸಮಾಜವು ಛಿದ್ರಛಿದ್ರವಾಗುತ್ತದೆ. ಏಕೆಂದರೆ ದೀಕ್ಷಾಗುರುಗಳು ಅನೇಕರು. ಆದ್ದರಿಂದ ಅಷ್ಟಾವರಣದಲ್ಲಿ ಬರುವ 'ಗುರು' ಸ್ಥಾನದಲ್ಲಿ ಧರ್ಮಗುರು ಇದ್ದುಬಿಟ್ಟರೆ ಮುಂದಿನ ತತ್ತ್ವಗಳೆಲ್ಲ ಭದ್ರವಾಗುತ್ತವೆ. ಹೀಗೆ ಹೇಳಿ ಅಷ್ಟಾವರಣದಲ್ಲಿ 'ಗುರು' ಕಾಲಮ್‌ದಲ್ಲಿ ಧರ್ಮಗುರು ಬಸವಣ್ಣನವರನ್ನು ಇಟ್ಟು, ಉಳಿದೆಲ್ಲ ಗುರುಗಳು 'ಜಂಗಮ' ಕಾಲಮ್‌ಗೆ ಸೇರ್ಪಡೆ ಆಗಬೇಕು ಎಂದರು. ಧರ್ಮಗುರು, ಧರ್ಮದ ಗುರುಗಳು ಎಂಬ ಎರಡು ವಿಂಗಡಣೆ ಮಾಡಿದರು. ''ನಾವು-ನೀವೆಲ್ಲ, ಉಳಿದ ಮಠಾಧಿಕಾರಿಗಳೆಲ್ಲ ಧರ್ಮದ ಗುರುಗಳು, ಬಸವಣ್ಣ ಮಾತ್ರ ಧರ್ಮಗುರು. ಆತನ ಸ್ಥಾನವನ್ನು ಬೇರಾರಿಗೂ ಕೊಡಬಾರದು. ಹೀಗೆ ಹೇಳಿ ಏಕ (ಲಿಂಗನಿಷ್ಠೆ) ದೇವೋಪಾಸನೆ, ಏಕ ಗುರೂಪಾಸನೆಗಳನ್ನು ಪೂಜ್ಯ ಅಪ್ಪಾಜಿ ಬೆಳೆಸಿ, ನಮ್ಮನ್ನು ನಾವು ತಗ್ಗಿಸಿಕೊಂಡು ದೇವರನ್ನು, ಧರ್ಮಗುರುವನ್ನು ಮೆರೆಸುವ ದೃಷ್ಟಿಕೋನ ಬೆಳೆಸಿದ್ದಾರೆ. ಇಂಥ ಅಪೂರ್ವ ತತ್ತ್ವವನ್ನು ಬೋಧಿಸಿದ್ದಕ್ಕಾಗಿ ಪೂಜ್ಯರ ಬಗ್ಗೆ ನಮಗೆ ಅಪಾರ ಗೌರವ, ಭಕ್ತಿ, ಕೃತಜ್ಞತೆ ತುಂಬಿತುಳುಕುವುದು. ಸತ್ಯವಾಗಿದ್ದರೂ, ಅವರೇ ಕಲಿಸಿರುವಂತೆ ೧. ಪರಮಾತ್ಮ-ಲಿಂಗದೇವನಿಗೆ ಪರಮೋನ್ನತ ಸ್ಥಾನ ೨. ಧರ್ಮಗುರುವಿಗೆ ನಂತರದ ಸ್ಥಾನ. ೩. ದೀಕ್ಷಾಗುರುವಿಗೆ ಆನಂತರದ ಸ್ಥಾನ ಕೊಡುತ್ತೇವೆ. ಆದ್ದರಿಂದ ಸೃಷ್ಟಿಕರ್ತ 'ಲಿಂಗದೇವ'ನ ಸ್ಥಾನವನ್ನು ದೀಕ್ಷಾಗುರುಗಳಾದ 'ಲಿಂಗಾನಂದ ಸ್ವಾಮಿ'ಗಳಿಗೆ ಕೊಟ್ಟರೆ ಆಗ ನಾವು ಧರ್ಮಗುರು, ದೀಕ್ಷಾಗುರು ಉಭಯತರ ಆಜ್ಞೆಯನ್ನು ಉಲ್ಲಂಘಿಸಿದಂತಾಗುತ್ತದೆ. ವಿಶ್ವಗುರು ಬಸವಣ್ಣನವರ ಆರಾಧ್ಯ ವಸ್ತು 'ಲಿಂಗದೇವ' ಆ ದೇವನ ಸ್ಥಾನ ಅವನಿಗೇ ಮೀಸಲು. ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಮತ್ತು ಅವರ ಚೇಲಾ ಬಿ.ಎಸ್.ಹಿರೇಮಠ, ದಾವಣಗೆರೆಯ ಹೆಚ್.ಎಂ.ಸ್ವಾಮಿ,

ಸಿ.ಎನ್. ಹಿರೇಮಠ ನಾವು ಗುರುಗಳ ಹೆಸರನ್ನು ಇಟ್ಟಿಲ್ಲವೆಂದೋ ಏನೋ ಪುನಃ ಪುನಃ ನಮ್ಮ ಗುರುಗಳ ಹೆಸರನ್ನು ಸ್ಮರಿಸಿ, ಅವರನ್ನು ಗೌರವಿಸಬೇಕೆಂದು ನಮಗೆ ಎಚ್ಚರಿಕೆ ನೀಡುತ್ತಿದ್ದಾರೆ. ಅವರ ಈ ಸೂಚನೆಗಾಗಿ ಧನ್ಯವಾದ. ಈವರೆಗೆ ನಾನು ಸಚ್ಚಿದಾನಂದ ಎಂಬ ದೇವವಾಚಕ ವಚನ ಮುದ್ರಿಕೆಯನ್ನು ಇಟ್ಟುಕೊಂಡು, ಸಾಹಿತ್ಯ ರಚಿಸಿದ್ದೇನೆ. ವಿಶ್ವಗುರು ಬಸವಣ್ಣನವರ ವಚನಗಳಿಗೆ 'ಲಿಂಗಾನಂದ' ಎಂಬ ಮುದ್ರಿಕೆ ಸೀಮಿತವಾಗುವ ಕಾರಣ ಅದು ಬೇಡ. ಸೃಷ್ಟಿಕರ್ತ ಸೂಚಕ ಬ್ರಹ್ಮಾಂಡ ವಿಭು 'ಲಿಂಗದೇವ' ಇರಲಿ. ಈ ಹಿರೇಮಠ ಗುಂಪಿನವರ ಸೂಚನೆ ಮಾನ್ಯ ಮಾಡುವುದಾದರೆ ಮುಂದೆ 'ಲಿಂಗಾನಂದ' ಎಂಬ ಗುರುಸೂಚಕ ವಚನ ಮುದ್ರಿಕೆ ಇಟ್ಟುಕೊಂಡು ಸ್ವಂತ ವಚನಗಳನ್ನು ಬರೆಯಲೂಬಹುದು ಎಂದು ಭರವಸೆ ನೀಡುತ್ತೇನೆ. ಆದರೆ, ನಾವು ವೈಭವೀಕರಿಸಲು ಇಚ್ಛಿಸದಿದ್ದರೂ ಎಲ್ಲ ಪತ್ರಿಕೆಗಳ ಮೂಲಕ ಲಿಂಗೈಕ್ಯ ಪೂಜ್ಯ ಗುರುಗಳನ್ನು ಸ್ಮರಿಸಿಕೊಳ್ಳುತ್ತ ಪ್ರಚಾರಕೊಡುತ್ತಿರುವುದಕ್ಕೆ ವಿರೋಧಿಗಳಿಗೆ ಅನಂತ ಧನ್ಯವಾದಗಳು. ಇದು ಬಸವ ಲೀಲೆ ಇರಬಹುದೆ ? ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಕೊಡುಗೆ ಸಾಮಾನ್ಯವಲ್ಲ ; ಅದಕ್ಕಾಗಿ ಅವರ ಹೆಸರನ್ನು ಬೃಹನ್ಮಠದವರು ಹಿರೇಮಠರ ಗುಂಪಿನ ಮೂಲಕ, ಧರ್ಮಪಿತ ಬಸವಣ್ಣನವರು ಪ್ರಚಾರ ಮಾಡಿಸುತ್ತಿರಬಹುದೇ ಎಂದು ನನಗೆ ಆಶ್ಚರ್ಯ ಎನಿಸತೊಡಗಿದೆ.

★

ಈ ಪ್ರತಿಭಟನೆಗೆ ಅರ್ಥವಿದೆಯೇ ?

ಸುಮಾರು ಒಂದೂವರೆ ತಿಂಗಳಿನಿಂದ ದಾವಣಗೆರೆಯಲ್ಲಿ ಬಸವಣ್ಣನವರ ಮತ್ತು ೧೨ನೆಯ ಶತಮಾನದ ಶರಣರ ಇತಿಹಾಸದ ಬಗ್ಗೆ ನಗರದಲ್ಲಿ ಪ್ರವಚನ ನಡೆಸುತ್ತಿದ್ದು, ಮಾತೆ ಮಹಾದೇವಿಯವರ ಶಿಷ್ಯೆ ಗಂಗಾಮಾತೆಯವರ ಪ್ರವಚನ ಮುಕ್ತಾಯದ ಹಂತದಲ್ಲಿರುವಾಗ ನಗರ ಪ್ರತಿಷ್ಠಿತರೆನಿಸಿಕೊಂಡ ಕೆಲವು ವ್ಯಕ್ತಿಗಳು ತಮ್ಮ ತಮ್ಮ ಸಂಘ ಸಂಸ್ಥೆಗಳ ಸದಸ್ಯರೊಂದಿಗೆ, ಗಂಗಾಮಾತೆ ಪ್ರವಚನ ನಡೆಸುತ್ತಿದ್ದ ಸ್ಥಳದಲ್ಲಿ, ಕೀಳು ಮಟ್ಟದ ಘೋಷಣೆಯೊಂದಿಗೆ ಪ್ರತಿಭಟಿಸಿ ಪ್ರವಚನದ ಕಾರ್ಯಕ್ರಮವನ್ನು ನಿಲ್ಲಿಸಿರುವುದನ್ನು ನೋಡಿದರೆ ನಾಚಿಕೆ ಪಡಬೇಕಾಗಿದೆ. ಮಾತೆ ಮಹಾದೇವಿಯವರ ವಚನಗಳಲ್ಲಿ ಲಿಂಗದೇವ ಎಂದು ಬದಲಾವಣೆ ಮಾಡಿ ಗ್ರಂಥಗಳನ್ನು ರಚಿಸಿರಬಹುದು. ವೀರಶೈವ ಸಮಾಜದಲ್ಲಿ ಅನೇಕ ಸಣ್ಣ ಸಣ್ಣ ಪಂಗಡಗಳಿದ್ದು ಎಲ್ಲರೂ ಬಸವ ತತ್ತ್ವ ಪರಿಪಾಲನೆ ಮಾಡುತ್ತಿರುವವರೇ ಎಂಬ ಭ್ರಮೆಯಲ್ಲಿ ಪ್ರತಿಭಟನಾಕಾರರು ತಿಳಿದುಕೊಂಡಿದ್ದರೆ ಅದು ಅವರ ಅಜ್ಞಾನವನ್ನು ತೋರಿಸುತ್ತದೆ.

೧೨ನೆಯ ಶತಮಾನದ ಶರಣರ ವಚನಗಳು ಕೇವಲ ಒಂದೇ ಒಂದು ವೀರಶೈವ ಸಮಾಜದ ಪಂಗಡಕ್ಕೆ ಸೀಮಿತವಾಗಿಲ್ಲ. ವಚನಗಳಲ್ಲಿ ಮಾನವೀಯತೆಯ ತತ್ತ್ವ ಅಡಗಿರುವುದನ್ನು ತಿಳಿದುಕೊಳ್ಳಬೇಕು. ಶರಣರ ವಚನಗಳಲ್ಲಿ ಕೂಡಲಸಂಗಮದೇವ ಎಂಬಲ್ಲಿ ಲಿಂಗಾನಂದ ಸ್ವಾಮೀಜಿಯವರ ಹೆಸರು ತರಲು ಲಿಂಗದೇವ ಎಂಬ ನುಡಿಯನ್ನು ಉದ್ದೇಶಪೂರ್ವಕವಾಗಿ ಸೇರಿಸಿದ್ದರೆ, ಇದು ಶರಣರ ವಚನಗಳಿಗೆ ದ್ರೋಹ ಎಂಬುದು ಒಪ್ಪತಕ್ಕಂಥ ವಿಷಯವಾದರೂ ಮಾತೆ ಮಹಾದೇವಿಯವರು ತಮ್ಮ ಸ್ವಂತ ಜ್ಞಾನದಿಂದ ವಚನಗಳನ್ನು ಸೃಷ್ಟಿಸಿಕೊಂಡು ತಮಗೆ ಜ್ಞಾನೋದಯ ಮಾಡಿಕೊಟ್ಟ ಗುರುಗಳಾದ ಲಿಂಗಾನಂದರ ಹೆಸರಿಗೆ ಲಿಂಗದೇವ ಎಂದು ತಮ್ಮ ಸ್ವರಚಿತ ವಚನಗಳಲ್ಲಿ ಸೇರಿಸಿಕೊಂಡರೇ ತಪ್ಪೇನೂ ಇಲ್ಲ.

-ಜಂಬಗಿ ಶರಣಪ್ಪ, ದಾವಣಗೆರೆ

(ಸಂಯುಕ್ತ ಕರ್ನಾಟಕ , ಜನಮನ ವಿಭಾಗ, ೨೮-೩-೨೦೦೦)

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು

ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಬೆಂಗಳೂರು ಬಸವ ಮಂಟಪದಲ್ಲಿ ಅಮೃತಶಿಲಾ ಮೂರ್ತಿ ಪ್ರತಿಷ್ಠಾಪನೆ

ಬೆಂಗಳೂರಿನ ರಾಜಾಜಿನಗರದ 2ನೇ ವಿಭಾಗದಲ್ಲಿರುವ ಬಸವ ಮಂಟಪದಲ್ಲಿ ಬಸವ ಜಯಂತಿಯ ಶುಭದಿನ ದಿ. 6-5-2000ದಂದು ಧರ್ಮಪಿತ ಬಸವಣ್ಣನವರ ಅಮೃತಶಿಲಾ ಪುತ್ಥಳಿಯ ಪ್ರತಿಷ್ಠಾಪನೆಯು ಬೆಳಿಗ್ಗೆ 10-30ಕ್ಕೆ ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ನೆರವೇರಲಿದೆ.

ಈ ನಿಮಿತ್ತ ಶನಿವಾರ ದಿ. 6-5-2000 ಮತ್ತು ಭಾನುವಾರ ದಿ. 7-5-2000ದಂದು ಎರಡೂ ದಿವಸ ಬೆಳಿಗ್ಗೆ 10-00 ಗಂಟೆ ಸಂಜೆ 6-30ಕ್ಕೆ ವಿಶೇಷ ಪೂಜೆ-ಪ್ರಾರ್ಥನೆ-ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ಗಣ ದಾಸೋಹವಿದೆ. ಸದ್ಭಕ್ತರು ತನು-ಮನ-ಧನಗಳಿಂದ ನೆರವು ನೀಡಬೇಕೆಂದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ವಿಶ್ವಕಲ್ಯಾಣ ಮಿಷನ್, ಬೆಂಗಳೂರು

ಧೀರ ಧರ್ಮ ಪ್ರಚಾರಕಿ ಪೂಜ್ಯ ಮಾತಾಜಿ

ಪೂಜ್ಯ ಮಾತಾಜಿಯ ದರುಶನದಿ ಧನ್ಯ
ಶ್ರೀ ಚರಣಕ್ಕೆರಗಲದು ಮೋಕ್ಷಕರ ಪುಣ್ಯ ॥ ಪಲ್ಲವಿ ॥
ನುಡಿಯನಾಲಿಸಿದ ಆ ಜೀವಿಯು ಮಾನ್ಯ
ಜೀವನದಿ ಅಳವಡಿಸಿಕೊಂಡಾತ ಗಣ್ಯ ॥ ಅನು ಪಲ್ಲವಿ ॥

ಆ ದೇವಶಕ್ತಿಯೇ ಮಾತಾಜಿ ರೂಪದಲಿ ಬಂದು
ಧರೆಯ ಬೆಳಗಲು ಅವತರಿಸಿಹುದು ಇಂದು
ಚಿತ್ರದುರ್ಗದೊಳು ಚಿತ್ಕಳೆಯೊಂದು ಉದಿಸಿ,
ಬಸವ ಧರ್ಮದ ಪ್ರಭೆಯ ಜಗಕ್ಕೆಲ್ಲ ಹರಿಸಿ ॥ ೧ ॥
ಬಸವ ಗುರುವಿನ ಹೃದ್ಗರ್ಭದಲಿ ಬೆಳೆದು
ಗುರುಲಿಂಗಾನಂದರ ಕರುಣಾಮೃತವ ಸವಿದು
ಶರಣ ಸಾಹಿತ್ಯ ಸಾಗರದಾಳಕ್ಕೆ ತಾ ಇಳಿದು
ಲಿಂಗದೇವನ ಮಹಿಮೆ ಜಗಕ್ಕೆಲ್ಲ ಉಲಿದು ॥ ೨ ॥

ಬಸವ ಧರ್ಮದ ಕಲ್ಪತರುವು ತಾವಾಗಿ
ದಿವ್ಯ ಸಂದೇಶವನು ಸಾರಿದ ವೀರ ವಿರಾಗಿ
ಶರಣ ತತ್ತ್ವದ ಸತ್ ಪಥವನ್ನು ತೋರಿ
ಸತ್ಯ ಸನ್ಮಾರ್ಗವನು ಜಗಕೆ ಹೇಳಿದಿರಿ ಸಾರಿ ॥ ೩ ॥
ಗುರು ಬಸವಣ್ಣನ ವಚನಾಂಕಿತದ ಗೂಢಾರ್ಥ
ಬಿಡಿಸಿ ಹೇಳಿದಿರಿ ಲಿಂಗದೇವನ ಸತ್ಯಾರ್ಥ
ಬೊಬ್ಬೆ ಹಾಕುತಲಿಹರು ಮಂದಮತಿಗಳು ವ್ಯರ್ಥ
ಪ್ರಚೋದನೆ ನೀಡುವ ಮಠಾಧೀಶರದು ಬರಿ ಸ್ವಾರ್ಥ ॥ ೪ ॥

ಶರಣ ತತ್ತ್ವಾಮೃತದ ಸಾರವನೇ ಸವಿದು
ಬಸವ ಭಕ್ತರನು ಶರಣ ಮೇಳದಲಿ ಕರೆದು
ಜನ ಜಾಗೃತಿಗಾಗಿ ಜ್ಞಾನಾಮೃತವ ಎರೆದು
ಧರ್ಮ ಕ್ರಾಂತಿಯ ಧ್ವಜವ ತಾ ಎತ್ತಿ ಹಿಡಿದು ॥ ೫ ॥

- ಮಹಾದೇವ ಗುಡೇರ, ಗೋಕಾಕ

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬಸವ ತತ್ತ್ವ ತರಬೇತಿ ಕಮ್ಮಟ

ಮೇ 11 ರಿಂದ 21ರವರೆಗೆ

ಬಸವ ಧರ್ಮ ಪೀಠ-ವಿಶ್ವ ಕಲ್ಯಾಣ ಮಿಷನ್ ಸಂಯುಕ್ತ ಆಶ್ರಯದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟಗಳನ್ನು ಪ್ರತಿವರ್ಷವೂ ಬೇಸಿಗೆಯ ರಜಾಕಾಲದಲ್ಲಿ ಮತ್ತು ಆಕ್ಟೋಬರ್ ರಜಾಕಾಲದಲ್ಲಿ ನಡೆಸಲಾಗುತ್ತಿತ್ತು. ಅಖಿಲ ಭಾರತ ಬಸವ ಧರ್ಮ ಸಮ್ಮೇಳನಗಳನ್ನು ಆರಂಭಿಸಿದ ಮೇಲೆ ತರಬೇತಿ ಶಿಬಿರಗಳಿಗೆ ಸಮಯವು ದೊರೆಯದಂತಾಯಿತು. ಕಮ್ಮಟಗಳಲ್ಲಿ ಪ್ರಾಯೋಗಿಕ ತರಬೇತಿ ಸಾಧ್ಯವಾಗುವುದರಿಂದ ಇದನ್ನು ನಡೆಸಬೇಕೆಂದು ಒತ್ತಾಯ ಮತ್ತು ಬೇಡಿಕೆ ಶರಣ ಬಂಧುಗಳಿಂದ ಬಂದಿದೆ. ಆದ್ದರಿಂದ 2000 ಇಸವಿಯ ಮೇ 11 ರಿಂದ 21ನೆಯ ದಿನಾಂಕದವರೆಗೆ 11 ದಿನಗಳ ಕಾಲ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

1. ದಿನ ನಿತ್ಯ ಸಂಜೆ ಪ್ರವಚನದ ತರಬೇತಿಯೇ ಅಲ್ಲದೆ ಯೋಗಾಸನ, ಪ್ರಾಣಾಯಾಮ, ಧ್ಯಾನ, ಪ್ರಕೃತಿ ಚಿಕಿತ್ಸೆಯ ತರಬೇತಿ ಸಹ ಇರುತ್ತದೆ. ವಚನಾಧ್ಯಯನ, ಚಿಂತನೆ, ಚರ್ಚಾಗೋಷ್ಠಿಗಳೂ ಏರ್ಪಾಡಾಗಿರುತ್ತವೆ.
2. ನಾಮಕರಣ, ಲಿಂಗಧಾರಣೆ, ಮಂತ್ರೋಪದೇಶ, ಇಷ್ಟಲಿಂಗದೀಕ್ಷೆ, ವಿವಾಹ, ಗೃಹಪ್ರವೇಶ, ಲಿಂಗೈಕ್ಯರ ಶವಸಂಸ್ಕಾರ, ವಿಭೂತಿ ವೀಳ್ಯ ಮುಂತಾದವುಗಳ ಪ್ರಾಯೋಗಿಕ ತರಬೇತಿ ಇರುವುದಲ್ಲದೆ ''ಕ್ರಿಯಾಮೂರ್ತಿ'' ದೀಕ್ಷೆಯನ್ನು ಆಸಕ್ತರಿಗೆ ನೀಡಲಾಗುವುದು.
3. ನಿಸರ್ಗ ಚಿಕಿತ್ಸೋಪಚಾರ, ಸಾತ್ವಿಕ ಆಹಾರ ಪದ್ಧತಿ ಮುಂತಾಗಿ ವಿಶೇಷ ಉಪನ್ಯಾಸಗಳು ಇರುತ್ತವೆ.
4. ಶಿಬಿರಾರ್ಥಿಗಳು ಬರುವಾಗ ಹಾಸಿಕೊಳ್ಳಲು, ಹೊದೆಯಲು, ಊಟಕ್ಕಾಗಿ ತಟ್ಟೆ, ಲೋಟ ತರಬೇಕು. ಯೋಗಾಸನಕ್ಕೆ ಅನುಕೂಲವಾಗಲು ಚೂಡಿದಾರ, ಪೈಜಾಮ ಮುಂತಾದ ಬಟ್ಟೆಗಳನ್ನು ತರಬೇಕು.
5. ಮೊದಲನೆಯ ದಿನದಿಂದ ಕಡೆಯ ದಿನದವರೆಗೆ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಬೇಕು.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಶಿಬಿರದ ಕಡೆಯ ಎರಡು ದಿವಸ ದಿ. 20-5-2000 ಮತ್ತು 21-5-2000 ಭಕ್ತಿ ಪಕ್ಷ ಸಮ್ಮೇಳನವು ಜರುಗುತ್ತದೆ.

ಪೂರ್ಣಾವಧಿಯ ಶಿಬಿರ ಶುಲ್ಕ ಒಬ್ಬರಿಗೆ ೩೫೦ (ಮೂರು ನೂರಾ ಐವತ್ತು) ರೂಪಾಯಿಗಳು. ವಿದ್ಯಾರ್ಥಿಗಳಿಗೆ ೨೦೦ ರೂ. ಬಹಳ ಆಸಕ್ತರಿದ್ದು ಆರ್ಥಿಕವಾಗಿ ಅಶಕ್ತರಿರುವವರು ಮೊದಲೇ ಪತ್ರ ಬರೆದು ಒಪ್ಪಿಗೆಯನ್ನು ಪಡೆದುಕೊಳ್ಳಬೇಕು. ಭಕ್ತಿ ಪಕ್ಷ ಸಮ್ಮೇಳನದ ಎರಡು ದಿವಸಗಳ ಪ್ರತಿನಿಧಿ ಶುಲ್ಕ ಒಬ್ಬರಿಗೆ ೬೦ ರೂ.

ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವ ಕ್ರಿಯಾಮೂರ್ತಿಗಳು ತರಬೇತಿ ಹೊಂದುವುದು ಅತ್ಯಂತ ಅಗತ್ಯವಿದೆ. ಏನೆಲ್ಲ ಬಸವ ತತ್ತ್ವವನ್ನು ತಿಳಿದುಕೊಂಡಿದ್ದರೂ, ಅಂಥವರು ತಮ್ಮ ಮನೆಯ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ಯಪುರೋಹಿತರನ್ನು ಕರೆದಾಗ ಅವರು ತತ್ತ್ವವಿರೋಧಿ ಪೂಜೆಗಳನ್ನು ನೆರವೇರಿಸುವರು. ಆರ್ಥಿಕವಾಗಿ ಅಶಕ್ತರಿದ್ದು ಕ್ರಿಯಾ ಮೂರ್ತಿಗಳಾಗಬಲ್ಲ ಕಾರ್ಯಕರ್ತರಿದ್ದರೆ ಅಂಥವರ ಪ್ರಯಾಣದ ವೆಚ್ಚವನ್ನು ಮತ್ತು ಶಿಬಿರ ಶುಲ್ಕವನ್ನು ಸ್ಥಳೀಯ ರಾಷ್ಟ್ರೀಯ ಬಸವ ದಳದವರು ವಹಿಸಿಕೊಂಡು ತರಬೇತಿಗೆ ಕರೆತರಬೇಕು. ಶ್ರೀಮಂತರು ಧನ ಸಹಾಯ ನೀಡಿ ತರಬೇತಿ ಪಡೆಯಲು ಒಳ್ಳೆಯ ಸಾತ್ವಿಕರನ್ನು ಕಳಿಸಿಕೊಡಬಹುದು.

ಆದಷ್ಟು ಬೇಗನೆ ಹಣವನ್ನು ಡಿ.ಡಿ., ಎಂ. ಓ., ಮೂಲಕ ಕಳಿಸಿ ತಮ್ಮ ಪ್ರವೇಶವನ್ನು ಕಾಯ್ದಿರಿಸಿಕೊಳ್ಳಬೇಕು. ಬ್ಯಾಂಕ್‌ಡ್ರಾಫ್ಟ್‌ನ್ನು 'ವಿಶ್ವಕಲ್ಯಾಣ ಮಿಷನ್' ಎಂದು ಬೆಂಗಳೂರಿನ ಯಾವುದೇ ಬ್ಯಾಂಕಿನ ಶಾಖೆಗೆ ತೆಗೆಸಿ ಕೆಳಗಿನ ವಿಳಾಸಕ್ಕೆ ಕಳಿಸಬಹುದು.

6. ಧರ್ಮಪ್ರಚಾರ, ನೈತಿಕ ಮೌಲ್ಯಗಳ ಪ್ರಚಾರ ಇಂದಿನ ಅಗತ್ಯವಾಗಿದೆ. ಅದರಲ್ಲಿಯೂ ಬಸವ ತತ್ತ್ವದ ಪ್ರಚಾರ ತೀರಾ ಅವಶ್ಯಕತೆಯಾಗಿದೆ. ಧರ್ಮಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕಾದರೆ ವಿಷಯಗಳನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡಲು ತರಬೇತಿ ಹೊಂದಬೇಕು. ಆದ್ದರಿಂದ ಹೆಚ್ಚಿನ ಜನರು ತರಬೇತಿ ಕಮ್ಮಟದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಆಶಿಸುವೆವು. ಶಿಬಿರ ನಿರ್ವಹಣೆಗಾಗಿ ದೇಣಿಗೆ ಕೊಡುವವರಿಗೆ ಅವಕಾಶವಿದೆ.
7. ತರಬೇತಿಯ ಅವಧಿಯಲ್ಲಿ ಪ್ರಸಾದ ದಾಸೋಹವನ್ನು ಮಾಡಿಸಬೇಕೆಂಬ ಹಂಬಲವುಳ್ಳ ದಾನಿಗಳು ಒಂದು ದಿವಸದ ಪೂರಾ ವೆಚ್ಚವನ್ನು ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ಸಂಜೆಯ ಚಹಾ, ರಾತ್ರಿಯ ಊಟದ ವೆಚ್ಚವನ್ನು ಭರಿಸಬಹುದು. ಇಲ್ಲವೇ ಒಂದೊಂದು ಹೊತ್ತಿನ ಖರ್ಚು ಭರಿಸಬಹುದು ಅಥವಾ ತಮ್ಮ ಕೈಲಾದಷ್ಟು ಕಾಣಿಕೆಯನ್ನು ಕೊಡಬಹುದು.

ವ್ಯವಹರಿಸುವ ವಿಳಾಸ :

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮಪ್ರಭು, ಕಾರ್ಯದರ್ಶಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ೨೦೩೫, ೨೦ನೆಯ ಮೇನ್, ೨ನೆಯ ಬ್ಲಾಕ್,
ರಾಜಾಜಿನಗರ, ಬೆಂಗಳೂರು - ೫೬೦ ೦೧೦ ದೂ : ೩೩೨೫೩೩೫ / ೩೩೨೭೬೮೦

8. ಬಸವ ಗಂಗೋತ್ರಿ ಸ್ಥಳ ನಿರ್ದೇಶನ :

ವಿಶ್ವ ಕಲ್ಯಾಣ ಮಿಷನ್ (ರಿ.) ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ. ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ ಬಿ,

ಮೆಜೆಸ್ಟಿಕ್ - ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತದೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಅಂದು - ಇಂದು

ಅಂದು - 12ನೇ ಶತಮಾನದಲಿ
ಅಕ್ಕಮಹಾದೇವಿ - ವೀರ ವೈರಾಗ್ಯ ನಿಧಿ
ಜಗತ್ತಿನ ಹೆಣ್ಣುಕುಲದ ಕಣ್ಮಣಿ.
ಅಕ್ಕ ಮಹಾದೇವಿಗೆ ಕಲ್ಯಾಣದ ಅನುಭವ ಮಂಟಪ ಸೇರುವ
ತವಕ - ಅದೆಷ್ಟೊಂದು ಕಾತುರ !!
ಧರ್ಮಪಿತ ಬಸವಣ್ಣರಾದಿ ಪ್ರಮಥರ ದರ್ಶಿಸುವ ಆದಮ್ಯ ಗುರಿ

ಇಂದು - 21ನೇ ಶತಮಾನದಲಿ
ಅಕ್ಕ ಮಹಾದೇವಿ ಅನುಭಾವ ಪೀಠದ ದ್ವಿತೀಯ ವೈರಾಗ್ಯ ನಿಧಿ
ಜಗದ್ಗುರು ಗಂಗಾ ಮಾತಾಜಿ - ಬಸವ ಭಕ್ತರ ಕಣ್ಮಣಿ.
ಆ ಅನುಭವ ಮಂಟಪ ಕಾರ್ಯ ವೈಖರಿಯ, ವಚನ ಸಾಹಿತ್ಯ ಸುಧೆಯ
ಧರ್ಮಪಿತ ಬಸವಣ್ಣನವರ ಅದ್ಭುತ ಕಾರ್ಯವ ಪ್ರವಚನದ ಮೂಲಕ
ಉಣಿಸುವ ಆದಮ್ಯ ಗುರಿ !

ಅಂದು - ಅಕ್ಕ ಮಹಾದೇವಿ ಅನುಭವ ಮಂಟಪ
ಕಾಣ್ಬ ಮುನ್ನ ಬಂದ ಎಡರು ತೊಡರುಗಳೆಷ್ಟೊಂದು !
ಹೃದಯ ಮಿಡಿಯುತಿದೆ !

ಇಂದು - ಅದೇ ಅನುಭವ ಮಂಟಪದ ದೃಶ್ಯವ ಪ್ರವಚನದ ಮೂಲಕ
ತೋರಿಸಲು ಬಂದ ಗಂಗಾ ಮಾತಾಜಿಯವರಿಗೆ
ಬಂದ ಎಡರು ತೊಡರುಗಳೆಷ್ಟೊಂದು, ಕಂಬನಿ ತುಂಬಿವೆ ಎಲ್ಲರ ಕಣ್ಗಳಲಿ
ಹೇ ದೇವಾ ! ಹೇ ಪರಮಾತ್ಮಾ ! ಹೇ ಲಿಂಗದೇವಾ !
ಎಮ್ಮಗಳ ಮೊರೆ ಕೇಳಿಸದೆ ?

ಅಂದು - ನಾನಾ ಕಷ್ಟ - ಕೋಟಲೆಗಳ ಧೈರ್ಯ, ಆತ್ಮವಿಶ್ವಾಸದಿ
ಎದುರಿಸಿದ ಅಕ್ಕ ಮಹಾದೇವಿ ಧನ್ಯ.

ಇಂದು - ನಾನಾ - ಚಿತ್ರ - ವಿಚಿತ್ರ ಕಿರುಕುಳವ ಎದುರಿಸಿ, ದಿಟ್ಟತನದಿ
ನಮಗೆಲ್ಲಾ ಪ್ರವಚನದ ಸುಧೆಯ ಉಣಬಡಿಸುತಿರುವ
ಗಂಗಾ ಮಾತಾಜಿ - ಧನ್ಯರು.

ಆದರೆ - ವಿಶ್ವಧರ್ಮ ಪ್ರವಚನದ ಗಂಗಾ ಪ್ರವಾಹವನೆ ಹರಿಸಲು
ಹೊರಟಿರುವ ಗಂಗಾ ಮಾತಾಜಿಗೆ ಎಡರು ತೊಡರುಗಳೇ ?
ಅವು ಕೊಚ್ಚಿ ಹೋಗುವವು ಈ ಧಾರ್ಮಿಕ ಗಂಗಾ ಪ್ರವಾಹದ ಸುಳಿಗೆ ಸಿಕ್ಕು.

ಅಕ್ಕ ತಂಗಿಯರೇ, ತಂದೆ ತಾಯಂದಿರೇ, ಹೆದರದಿರಿ,
ಹಿಮ್ಮೆಟ್ಟದಿರಿ, ಎಮ್ಮಗಳ ಭಕ್ತಿಯ ಘಟ್ಟಿಗೊಳಿಸುವ
ದೇವರ ಪರಿನೋಡಾ !
ಹೌದು ಎಮ್ಮಗಳ ಬಸವ ಭಕ್ತಿಯು ಇಮ್ಮಡಿ, ಮುಮ್ಮಡಿ ಆಗಿಹುದು.
ಶತ ಶತಮಾನದ ಅನುಭಾವ ನುಡಿ ದಿಟ
ವಾಗಿಹುದು - ಅದೇ - ಸತ್ಯಮೇವ ಜಯತೇ - ಸತ್ಯಮೇವ ಜಯತೇ

- ಶರಣೆ. ವಿಜಯಾ ನಂಜುಂಡಪ್ಪ, ದಾವಣಗೆರೆ

(ದಿ. ೨೦-೩-೨೦೦೦ ಕೆಲವು ದುರ್ಜನರು ಪ್ರವಚನವನ್ನು ದೌರ್ಜನ್ಯದಿಂದ ನಿಲ್ಲಿಸಿದಾಗ ನೊಂದು ಬರೆದ ಪದ್ಯ)

ನಾ ಕಂಡಂತೆ ನನ್ನ ಗುರು ಮಾತೆ ಪೂಜ್ಯ ಶ್ರೀ ಮಾತಾಜಿ

ಶರಣೆಂದು ಶಿರಬಾಗಿ ಸಲ್ಲಿಸುವೆ ನಮನ
ಸ್ಮರಿಸುವೆ ಅನುದಿನ ಸನ್ಮಾರ್ಗ ತೋರ್ದ ಗುರುವಿನ ॥ ಪ ॥

ಶ್ರೀ ಗುರು ಬಸವಣ್ಣನವರ ಕಾರುಣ್ಯದ ಚಿತ್ಕಿರಣವಾಗಿ
ಸೃಷ್ಟಿಕರ್ತ ಲಿಂಗದೇವರ ಕೃಪಾಶೀರ್ವಾದಿಂ ಅನುಗ್ರಹಿತರಾಗಿ
ಜಗನ್ಮಾತೆ ವೈರಾಗ್ಯನಿಧಿ ಅಕ್ಕಮಹಾದೇವಿಯ ಪ್ರತಿರೂಪವಾಗಿ
ಬಾಳಕ್ಷಣಗಳೆಲ್ಲವನು ಬಸವಚರಣಕರ್ಪಿಸಿ ಬಸವಾತ್ಮಜೆಯಾದ ಗುರುವಿಗೆ ॥ ೧ ॥

ಸಕಲಶ್ರೇಷ್ಠ ಸದ್ಗುಣಗಳಿಂದ ಭೂಷಿತರಾಗಿ
ಅನುಕರಣೀಯ ಬಹುಮುಖದ ವ್ಯಕ್ತಿತ್ವದಿಂ ಶೋಭಿತರಾಗಿ
ಅಸಾಮಾನ್ಯ ಪ್ರತಿಭೆ, ಪಾಂಡಿತ್ಯಗಳಿಂದ ಮಿಳಿತವಾಗಿ
ಸರ್ವಪ್ರಕಾರದ ವಿದ್ಯೆಗಳಲಿ ನಿಷ್ಣಾತರಾದ ಗುರುವಿಗೆ ॥ ೨ ॥

ದಿವ್ಯಜೀವನದ ಆಧ್ಯಾತ್ಮಿಕ ಹಂಬಲದಿ ಉತ್ಕಟಿತರಾಗಿ
ಧೀರಯೋಗಿ ಶ್ರೀಗುರು ಲಿಂಗಾನಂದರ ಶಿಷ್ಯರಾಗಿ
ಧ್ಯಾನ - ಅನುಸಂಧಾನ ಗೈದು ಸಾಧನಾ ಮಾರ್ಗದಲಿ ಪ್ರಗತಿಶೀಲರಾಗಿ
ಧರ್ಮ, ತತ್ವೋಪದೇಶದಿಂ ಸಮಾಜಸೇವೆ ಮಾಡಲು ಅಣಿಯಾದ ಗುರುವಿಗೆ ॥ ೩ ॥

ಅದಮ್ಯ ಉತ್ಸಾಹದ ದೈವಿಕಳಾಭರಿತ ತೇಜಸ್ವಿಯಾಗಿ
ಮಹತ್ಕಾರ್ಯಗಳ ಸಾಧಿಸಲು ಸಂಕಲ್ಪಗೈದು ಸಿದ್ಧಿಸಿದ ತಪಸ್ವಿಯಾಗಿ
ನಿಜ ಜಂಗಮವಾಗಿ ನಿಸ್ವಾರ್ಥದ ಸೇವೆಗೈವಲ್ಲಿ ಯಶಸ್ವಿಯಾಗಿ
ಆದರ್ಶ ಮೌಲ್ಯಗಳ ಆಳವಡಿಸಿಕೊಂಡು ಮಾರ್ಗದರ್ಶಿಯಾದ ಗುರುವಿಗೆ ॥ ೪ ॥

ನೊಂದ-ದುಃಖಿತರ ನೋವರಿತು ಸಾಂತ್ವನಿಸುವ ವಾತ್ಸಲ್ಯಮಯಿಯಾಗಿ
ದೀನ-ದುರ್ಬಲರಿಗೆ ಸಹಾಯಗೈವ ಮಾನವೀಯತೆಯೊಡಗೂಡಿದ ದಯಾಳುವಾಗಿ
ಅರಸಿ ಬಂದವರ ಇಂಬಿಟ್ಟುಕೊಂಡು ಅನೇಕರಿಗೆ ಆಶ್ರಯದಾತರಾಗಿ
ಜಾತಿ-ವರ್ಣ-ವರ್ಗ ಭೇದವೆಣಿಸದೆ ಸಮನಾಗೆಲ್ಲರ ಕಾಣ್ವ ವಿಶಾಲ ಹೃದಯಿಯಾದ
ಗುರುವಿಗೆ ॥ ೫ ॥

ಅರ್ಥಗರ್ಭಿತ ಭಕ್ತಿಗೀತೆಗಳ ರಚಿಸುವ ಕವಯಿತ್ರಿಯಾಗಿ
ಹೃನ್ಮನಾನಂದದಿ ತಣಿಸುವ ಇನಿದನಿಯ ಗಾಯಕರಾಗಿ
ಉತ್ಕೃಷ್ಟ ಗ್ರಂಥಗಳ ಬರೆಯುವ ಪ್ರೌಢ ಸಾಹಿತಿಯಾಗಿ
ನಿರರ್ಗಳದಿ ಬಸವಸಂದೇಶ ಸಾರ್ವ ಅನುಭವಿ ವಾಗ್ಮಿಗಳಾದ ಗುರುವಿಗೆ ॥ ೬ ॥

ಗುರುಬಸವಣ್ಣನವರ ಮಹೋನ್ನತ ವ್ಯಕ್ತಿತ್ವ ಪರಿಚಯಸಲಿಕಾಗಿ
ಸಾರ್ವಕಾಲಿಕ ಸಂದೇಶ ಸಾರ್ವ ವಚನ ಸಾಹಿತ್ಯ ಬೋಧಿಸಲಿಕಾಗಿ
ಮೂಢನಂಬಿಕೆ - ಅಜ್ಞಾನ - ಅಂಧಶ್ರದ್ಧೆಗಳ ಹೋಗಲಾಡಿಸಲಿಕಾಗಿ
ಬಸವಧರ್ಮ ಪುನರುತ್ಥಾನಿಸಲಿಕಾಗಿ ಕಂಕಣಬದ್ಧರಾದ ಗುರುವಿಗೆ ॥ ೭ ॥

ಜಗನ್ಮಾತೆ ಅಕ್ಕಮಹಾದೇವಿ ಅನುಭಾವ ಪೀಠದ ಸ್ಥಾಪಕರಾಗಿ
ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುವಾಗಿ
ಅರ್ಹ ಮಹಿಳೆ ಗುರುವಾಗಬಲ್ಲಳೆಂದು ಸಾಧಿಸಿದ ವೀರವನಿತೆಯಾಗಿ
ಅನೇಕರಿಗೆ ಬಾಳಸ್ಫೂರ್ತಿಯಾಗಿ ಮಹಾಮಾತೆಯಾದ ಗುರುವಿಗೆ ॥ ೮ ॥

ನಿಂದಕರ ನಿಂದನೆ - ಟೀಕಾರೋಪಗಳ ಸ್ವೀಕರಿಸಿದರು ಸವಾಲಾಗಿ
ದ್ರೋಹಿಗಳೊಡ್ಡಿದ ಅಡ್ಡಿ - ಆತಂಕವ ತತ್ವನಿಷ್ಠೆಯ ಫಲದಿ ಎದುರಿಸಿ ಧೈರ್ಯಶಾಲಿಗಳಾಗಿ
ಉದಾತ್ತ ಧ್ಯೇಯೋದ್ದೇಶದ ಕ್ರಿಯಾತ್ಮಕ ಕೆಲಸಗಳಲಿ ಕಾರ್ಯಮಗ್ನರಾಗಿ
ದ್ರೋಹಿಗಳಿಗೂ ಜನವಂದ್ಯ ಸತ್ಕಾರ್ಯಗೈಯಲು ತಿಳಿಸಿದ ಮಹಾಗುರುವಿಗೆ ॥ ೯ ॥

ಗುರುಬಸವರ ತಪೈಕ್ಯಭೂಮಿ ಕೂಡಲ ಸಂಗಮ ಭವ್ಯ ಧರ್ಮಕ್ಷೇತ್ರವಾಗಿ
ಬಸವಶಕ್ತಿಯೇ ಕೇಂದ್ರವಾದ ಬಸವಧರ್ಮಪೀಠದ ನಿರ್ಮಾಪಕರಾಗಿ
ಆದಿಶರಣರ ಸಂಕಲ್ಪದಿಂದ ನಡೆವ ಶರಣಮೇಳದ ಸಂಯೋಜಕರಾಗಿ
ನಾಡಿನಾದ್ಯಂತದಿಂದ ಸೇರ್ವ ತತ್ತ್ವಬದ್ಧ ಶರಣಗಣದ ಸಂಘಟಕರಾದ ಗುರುವಿಗೆ ॥ ೧೦ ॥

ಇಂಥ ಗುರುಗಳು ಕನ್ನಡ ನಾಡಿನಲಿ ಉದಿಸಿರಲು ಪುಣ್ಯದ ಫಲವಾಗಿ
ನಿಜವಾದ ಬಸವಭಕ್ತರಿಗೆ ದೊರೆತಿರಲು ಸೌಭಾಗ್ಯವಾಗಿ
ಸಾಗಲಿ ಇವರಿಂದ ಮಹತ್ಕಾರ್ಯಗಳು ನಿರಂತರ ಯಶಸ್ವಿಯಾಗಿ
ಗುರು ಬಸವಣ್ಣನವರ - ಸೃಷ್ಟಿಕರ್ತ ಲಿಂಗದೇವರ ರಕ್ಷಾಕವಚವಿರಲಿ ಭದ್ರವಾಗಿ ॥ ೧೧ ॥

ಶೈಲಾ ಪರಮಾದಿ, ಬಿ. ಎ., ಹುಬ್ಬಳ್ಳಿ

॥ ಶ್ರೀ ಗುರು ಬಸವಲಿಂಗಾಯ ನಮಃ ॥

೮೬೬೬೬

೨೦೦೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಲು ಕಳಕಳಿಯ ಕರೆ

ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ. ಶ. ೧೧೩೪-೧೧೯೬)ನವರಿಂದ ಸ್ಥಾಪಿತವಾದ ಸ್ವತಂತ್ರ ಸ್ವಾವಲಂಬಿ, ಪ್ರಗತಿಪರಧರ್ಮ. ಭಾರತ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಾಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಇದು ಹೊಂದಿದೆ -

೧. ಧರ್ಮ ಸ್ಥಾಪಕರು - ವಿಶ್ವಗುರು ಬಸವಣ್ಣನವರು
೨. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ
೩. ಧರ್ಮದ ದೇವರ ಹೆಸರು - ಲಿಂಗದೇವ
೪. ಧರ್ಮ ಲಾಂಛನ - ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
೫. ಧರ್ಮಕ್ಷೇತ್ರ - ಬಸವಣ್ಣನವರ ಐಕ್ಯಕ್ಷೇತ್ರ, ಕೂಡಲ ಸಂಗಮ
೬. ಧಾರ್ಮಿಕ ವಾರ್ಷಿಕ ಸಮಾವೇಶ - ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ
೭. ಧಾರ್ಮಿಕ ವ್ರತ - ಶರಣ ವ್ರತ
೮. ಧರ್ಮ ಧ್ವಜ - ಷಟ್ಕೋನ ಸಹಿತ ಬಸವ ಧ್ವಜ
೯. ಧರ್ಮ ಸಂಸ್ಕಾರ - ಇಷ್ಟಲಿಂಗ ದೀಕ್ಷೆ
೧೦. ಧರ್ಮ ಮಂದಿರ - ಬಸವ ಮಂಟಪ
೧೧. ಧಾರ್ಮಿಕ ಕೂಟ (ವಾರದ ಪ್ರಾರ್ಥನೆ) - ಶರಣ ಸಂಗಮ
೧೨. ಧಾರ್ಮಿಕ ಮಾಸ - ಶ್ರಾವಣ
೧೩. ಧರ್ಮ ಭಾಷೆ - ಕನ್ನಡ
೧೪. ಧರ್ಮ ಪರಂಪರೆ - ಶರಣ ಪರಂಪರೆ
೧೫. ಧಾರ್ಮಿಕ ಸಹೋದರತ್ವ - ಜಾತಿ ವರ್ಣಾತೀತ ಸಮಾನತೆ
೧೬. ಧರ್ಮದ ಧ್ಯೇಯ - ಜಾತಿ ವರ್ಣ ವರ್ಗ ರಹಿತ ಧರ್ಮಸಹಿತ ಕಲ್ಯಾಣ ರಾಜ್ಯ (ಶರಣ ಸಮಾಜ) ನಿರ್ಮಾಣ



ಆದ್ದರಿಂದ ಜನಗಣತಿಯ ೮ನೇ ಕಾಲಂ ಧರ್ಮ (Religion) ದಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತ ಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ. ನಾಗರಿಕ ಅಧಿಕಾರಿಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶೇಷ ಎಚ್ಚರಿಕೆ : ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು ಬಳಸಿ ಲಿಂಗಾಯತ ಧರ್ಮಕ್ಕೆ ಸಿಗುವ ಮಾನ್ಯತೆಯನ್ನು ತಪ್ಪಿಸುವ ಪ್ರಮಾದ ಮಾಡಬೇಡಿರಿ.

ಕಾರಣಿಕ ಪುರುಷ ಬಸವಣ್ಣ

ಕುಂಚ ಹಿಡಿದು ಕುಳಿತಹ ಲಿಂಗದೇವನೆ !
ನೀನು ಬಿಡಿಸಿದ ಅಪ್ರತಿಮ ಚಿತ್ರ ನಮ್ಮ ಬಸವನೆ !
ಅಪ್ರತಿಮ ಚಿತ್ರವದಕೆ ಅಪೂರ್ವ ರೂಪ ನೀಡಿದೆ,
ಕಾರುಣ್ಯದಿಂದ ಸಕಲ ಶಕ್ತಿಸಾಮರ್ಥ್ಯ ನೀ ಕೂಡಿದೆ
ಜೀವವದಕೆ ಬೇಕೆನುತ ನೀನೆ ಸೇರಿ ಹೋದೆ.

ಇಳೆಗೆ ಕಳುಹಿದೆ ಕಾರಣೀಕನ
ಮಣಿಹ ಹೊರೆಸಿದೆ ಲೋಕ ಕಲ್ಯಾಣದ || ಕುಂಚ ||
ಕಾಯಕವ ಕಲಿಸಿ ನಾಯಕನಾದ
ಇಷ್ಟಲಿಂಗ ಕೊಟ್ಟು ಧರ್ಮಗುರುವೆನಿಸಿದ,
ದೀನದಲಿತರ ಮನಕೆ ದೀಪ್ತಿಯು
ಅಸಮತೆ ತೊಡೆದು ತಾನಾದ ಜ್ಞಾನ ಜ್ಯೋತಿಯು || ಕುಂಚ ||

ಬಿಜ್ಜರಸನ ಮಂತ್ರಿಯಾಗಿ
ಅರ್ಥಶಾಸ್ತ್ರದಲ್ಲಿ ಪಂಡಿತನಾಗಿ
ರಾಜ್ಯಬೊಕ್ಕಸ ತುಂಬಿ ಹೋಗಿ
ಪ್ರಜೆಗಳೆಲ್ಲಾ ಎರಗಿದರು ತಲೆ ಬಾಗಿ || ೧ ||
ಕಟ್ಟಿದ ಅನುಭವ ಮಂಟಪ
ಸ್ಥಾಪಿಸಿದ ಶೂನ್ಯ ಪೀಠವ
ಅನುಭಾವಿಗಳ ನಿರ್ಮಿಸಿದ !
ಸಮತೆಯ ಬಾಳಿಗೆ ನಾಂದಿ ಹಾಡಿದ || ೧ ||

ಅಕ್ಕ ಅಲ್ಲಮ ಸಿದ್ಧರಾಮರು
ಕಲ್ಯಾಣಕ್ಕೆ ಬಂದು ಸೇರಿದರು
ಮಾಚಿತಂದೆ, ಚನ್ನ ಬಸವ ಚೇತನಗಳು
ದೂರ ದೂರ ದೂರದಿಂದ ಬಂದ ಶರಣರುಗಳು || ೧ ||
ಬಸವ ಧರ್ಮ ಬೆಳೆಸುವ ಕಂಕಣ ತೊಟ್ಟು
ಅನುಭಾವಿಗಳು ಕೂಡಿದರು ಬೀಡುಬಿಟ್ಟು
ವಚನಸಾಹಿತ್ಯ ಭೋರ್ಗರೆಯಿತು !
ಲೋಕಕಲ್ಯಾಣಕ್ಕೆ ರಂಗ ಸಜ್ಜಾಯಿತು ! || ೧ ||

ಜಾತಿ ವರ್ಣ ವರ್ಗರಹಿತ ಕಲ್ಯಾಣರಾಜ್ಯ !
ನಿರ್ಮಾಣವಾಯಿತು, ಬಸವ ತಂದೆ ಶ್ರಮದಿಂದ !
ಬಂದ ಮಣಿಹ ಮುಗಿಯಿತೆಂದು ಕರೆ ಬಂತು !
ಲಿಂಗದೇವನಾದೇಶ ಹೊತ್ತು ಲೀನವಾಯ್ತು ಬಸವ ಜ್ಯೋತಿಯು || ೧ ||
ಲಿಂಗದೇವನ ಕುಂಚದ ಶ್ರೀ ಚಿತ್ರವು
ಮರಳಿ ತವರ ಸೇರಿತು, ಆ ದೇವನಡಿಗೆ
ಶರಣು ಶರಣಾರ್ಥಿ ಲಿಂಗದೇವನೆ !
ಬಸವ ತಂದೆಯ ಕೊಟ್ಟ ನಿನಗೆ ಕೋಟಿ ವಂದನೆ !

ರಚನೆ : ಹೊರೆಯಾಲ ಮಹದೇವಸ್ವಾಮಿ,
ರಾಷ್ಟ್ರೀಯ ಬಸವದಳ, ಮೈಸೂರು

ಏಪ್ರಿಲ್ ತಿಂಗಳಲ್ಲಿ ಧನದಾಸೋಹ ಮಾಡಿದ ಸದ್ಭಕ್ತರು

ಬಸವ ಧರ್ಮಪೀಠದ ಕಟ್ಟಡನಿಧಿಗೆ

ಶರಣರುಗಳಾದ :

ಪಾರ್ವತಮ್ಮ ಮತ್ತು ಮಹಾದೇವಪ್ಪ ಬುರ್ಲಿ, ಗದಗ ೫೧,೦೦೦=೦೦
(ಸಿಂಗಲ್ ಕೋಣೆಗಾಗಿ)
ಶ್ರೀದೇವಿ ಮತ್ತು ಬಸಪ್ಪ ಶಂಕರಪ್ಪ ಗೌಡರ್, ಬೆಂಗಳೂರು ೫೧,೦೦೦=೦೦
(ಸಿಂಗಲ್ ಕೋಣೆಗಾಗಿ)

ಪುಸ್ತಕ ಪ್ರಕಟಣೆಗಾಗಿ ೧೧,೦೦೦=೦೦

ಶರಣರುಗಳಾದ
ಸರೋಜಮ್ಮ ಮತ್ತು ನಾಗರಾಜ್, ಮೈಸೂರು ೧೧,೦೦೦=೦೦
ರಂಜನಾ ಗುರುಲಿಂಗಪ್ಪ ವಾಲಿ, ಬೆಂಗಳೂರು ೧೧,೦೦೦=೦೦

ಬೆಂಗಳೂರು ಬಸವ ಮಂಟಪದ ಮಾತಾ ನೀಲಾಂಬಿಕಾ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ
ಛಾಯಾ ಮತ್ತು ಜೈರಾಜ್, ವಕೀಲರು, ಬೆಂಗಳೂರು ೫,೦೦೦=೦೦

ಬಸವ ಧರ್ಮ ಪೀಠದ ನಿತ್ಯ ದಾಸೋಹ ನಿಧಿಗೆ ೧,೧೧೧=೦೦ ರೂ. ಕೊಟ್ಟವರು

ಶರಣರುಗಳಾದ,
ಬಸಮ್ಮಣ್ಣಿ, ಕೆಂಗೇರಿ ಉಪನಗರ, ಬೆಂಗಳೂರು
ಹೆಚ್. ಆರ್. ಜಗನ್ನಾಥ್
ಲಿಂ|| ಶರಣ ಹೆಚ್. ಪಿ. ರುದ್ರಾರಾಧ್ಯರ ಸ್ಮರಣಾರ್ಥ
ಲಿಂ|| ಶರಣೆ. ಹೆಚ್. ಆರ್. ಕಲ್ಯಾಣಮ್ಮನವರ ಸ್ಮರಣಾರ್ಥ
ರೇಣುಕಮ್ಮ ಆರ್. ಉಮೇಶ್, ಸಂಗನ ಬಸವನ ದೊಡ್ಡಿ
ದುಂಡುಮಾದಯ್ಯ ದೊಡ್ಡಮಲ್ಲಯ್ಯ, ಸಂಗನ ಬಸವನ ದೊಡ್ಡಿ
ಸಿ. ಚಂದ್ರಪ್ಪ ಚಿಕ್ಕಣ್ಣ, ಸಂಗನ ಬಸವನದೊಡ್ಡಿ
ಮಲ್ಲೇಶಯ್ಯ ಪುಟ್ಟನರಸಯ್ಯ, ಎ. ಮಾದಾಪುರ
ಆರ್. ಭೋಗಣ್ಣ ಮತ್ತು ಸಹೋದರರು, ಎ. ಮಾದಾಪುರ
ಸೋಮಶೇಖರಯ್ಯ, ಲಿಂ|| ಸೋಮಲಿಂಗಯ್ಯ, ಎ. ಮಾದಾಪುರ
ರೇಣುಕಸ್ವಾಮಿ ರೇವಣ್ಣನವರು, ಎ. ಮಾದಾಪುರ
ಶಿವರುದ್ರಪ್ಪ ಮತ್ತು ಕುಟುಂಬದವರು, ಎ. ಮಾದಾಪುರ
ಎಂ. ಎಸ್. ಸೋಮಶೇಖರಯ್ಯ, ಎ. ಮಾದಾಪುರ
ಕೋಮಲಾ ಸುಬ್ರಹ್ಮಣ್ಯ ನಾವ್ಡಾ, ಬೆಂಗಳೂರು
ಕೆ. ಆರ್. ಸಿದ್ದಯ್ಯ, ಬೆಂಗಳೂರು
ವಿಜಯಾ ಪ್ರಕಾಶ್, ಬೆಂಗಳೂರು
ಕ್ಯಾಪ್ಟನ್ ವಿಶ್ವನಾಥ್, ಬೆಂಗಳೂರು
ಎಸ್. ಎಂ. ತಿರುಮಲ್ಲಪ್ಪ, ಬೆಂಗಳೂರು
ಎ. ಚಿಕ್ಕರಂಗಯ್ಯ, ಬೆಂಗಳೂರು
ಎನ್. ಬಸವರಾಜು, ಬೆಂಗಳೂರು
ಲಕ್ಷ್ಮೀ ಜಿ. ಎಸ್. ಶ್ರೀಕಂಠೇಶ್ವರ್, ಬೆಂಗಳೂರು
ಚೇತನಾ, ಬೆಂಗಳೂರು
ಕೆ. ಬಿ. ಬಸವರಾಜು, ಬೆಂಗಳೂರು
ಎ. ಎನ್. ವಿಶ್ವೇಶ್ವರಯ್ಯ, ಬೆಂಗಳೂರು

ಕಲ್ಯಾಣ ಕಿರಣ CPMG/KA/BGW-50 ಮೇ - ೨೦೦೦
R.No. 19988/70



ಮೈಸೂರಿನ ಟೌನ್ ಹಾಲ್‌ದಲ್ಲಿ ನಡೆದ ಜಗನ್ಮಾತಾ ಅಕ್ಕಮಹಾದೇವಿ ಜಯಂತ್ಯೋತ್ಸವ ಕಾರ್ಯಕ್ರಮ ಸಂದರ್ಭ : ಪೂಜ್ಯ ಶ್ರೀ ಮಾತೆ ಬಸವ ರತ್ನಾದೇವಿ,